ಶ್ರೀ ಎಂ.ವೈ. ಘೋರ್ಪಡೆ.— ಹಾಗೆ ಹೇಳುವುದು ಸರಿಯಲ್ಲ. ಮಾರ್ಚಿ ತಿಂಗಳಲ್ಲಿ ಈ ದೂರು ಸರ್ಕಾರಕ್ಕೆ ಬಂದ ಕೂಡಲೆ ಇದನ್ನು ಸಿ.ಓ.ಡಿ. ಯವರಿಂದ ಎನ್‌ಕ್ವೈರಿ ಮಾಡಿಸಬೇಕೆಂದು ಆದೇಶ ನೀಡಿದರು. ಅದರ ಪ್ರಕಾರ ಈಗ ಎನ್‌ಕ್ವೈರಿ ನಡೆಯುತ್ತಿದೆ. ಮೇ ೧೭ನೇ ತಾರೀಖು ಸಿ.ಓ.ಡಿ. ಯವರಿಂದ ಪತ್ರಬಂದಿದೆ, ಇದು ಇನ್ನೂ ಎನ್‌ಕ್ವೈರಿ ಆಗುತ್ತಿದೆ ಎಂದು ತಿಳಿದು ಬಂದಿದೆ. ಇದು ಏಪ್ರಿಲ್ ತಿಂಗಳಲ್ಲಿ ಟ್ರ್ಯಾನ್ಸ್‌ಫರ್ ಆಗಿದೆ. ಇದರಲ್ಲಿ ಯಾವುದೇ ರೀತಿಯ ನಿರ್ಲಕ್ಷತೆಯೂ ನಡೆದಿಲ್ಲ. ಸಿ.ಓ.ಡಿ.ಯವರಿಂದ ವರದಿ ಬಂದಕೂಡಲೇ ತಮಗೆ ತಿಳಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಸಭೆಯ ಸದಸ್ಯರಾದ ಶ್ರೀ ರಾಮಕೃಷ್ಣ ಹೆಗ್ಡೆ ಅವರು ದಿನಾಂಕ ೧ನೇ ಜೂನ್ ೧೯೯೦ ರಿಂದ ೧೪ನೇ ಜೂನ್ ೧೯೯೦ರ ವರೆಗೆ ಚೀನಾದೇಶಕ್ಕೆ ಒಂದು ನಿಯೋಗದ ಮುಂದಾಳತ್ವ ವಹಿಸಿ ಹೋಗಲಿರುವುದರಿಂದ ವಿಧಾನ ಸಭೆಯ ಅಧಿವೇಶನಕ್ಕೆ ದಿನಾಂಕ ೪-೬-೧೯೯೦ ರಿಂದ ೧೪-೬-೧೯೯೦ರ ವರೆಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

ಶ್ರೀ ರಾಮಕೃಷ್ಣ ಹೆಗ್ಡೆ ಅವರು ಮೇಲೆ ಸೂಚಿಸಿದ ಅವಧಿಯಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ?

ಮಾನ್ಯ ಸದಸ್ಯರು.—ಆಗಬಹುದು.

ಅಧ್ಯಕ್ಷರು ರಾಮಕೃಷ್ಣ ಹೆಗ್ಡೆ ಅವರಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

ಕಾವೇರಿ ಜಲ ವಿವಾದದ ಬಗ್ಗೆ ಚರ್ಚೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ, ಕಾವೇರಿ ಜಲ ವಿವಾದವನ್ನು ಪಂಚಾಯತ್ ಮಂಡಳಿಗೆ ಒಪ್ಪಿಸಿರುವುದನ್ನು ವಿರೋಧಿಸಿ ಈಗಾಗಲೇ ನಾವು ರಾಜ್ಯಾದ್ಯಂತ ಪ್ರತಿಭಟನೆಯನ್ನು ಪ್ರಾರಂಭಿಸಿದ್ದೇವೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ನಿಲುವು ಏನು ಎನ್ನುವುದು ಕೂಡ ಸ್ಪಷ್ಟವಾಗಿ ಗೊತ್ತಿದೆ. ತಮ್ಮ ಮೂಲಕ ಮಾತ್ತೊಮ್ಮೆ ಇವತ್ತು ಸರ್ಕಾರದ ಗಮನಕ್ಕೆ ತರುತ್ತಿರುವುದೇನೆಂದರೆ ಈ ಸಭೆಯಲ್ಲಿ ಕಾವೇರಿ ನೀರಿನ ಬಗ್ಗೆ ಚರ್ಚೆ ನಡೆಯತಕ್ಕಂಥದ್ದು ಸರ್ಕಾರಕ್ಕೆ ಮೊದಲೇ ಗೊತ್ತಿತ್ತು, ಆದರೂ ಕೂಡ ಎರಡು ದಿವಸಗಳಿಂದಲೂ ಚರ್ಚೆ ನಡೆಯುತ್ತಿದ್ದರೂ ಸರ್ಕಾರದವರು ನಮ್ಮ ಯಾವ ಸದಸ್ಯರಿಗೂ ಸುಪ್ರೀಂ ಕೋರ್ಟಿನ ತೀರ್ಪನ್ನಾಗಲಿ ಮತ್ತು ಸರ್ಕಾರ ಇದುವರೆಗೆ ಕಾವೇರಿ ಪಂಚಾಯತ್ ಬಗ್ಗೆ ಕೇಂದ್ರ ಸರ್ಕಾರದೊಡನೆ ಏನೇನು ವ್ಯವಹಾರ ನಡೆಸಿದೆ ಅದರ ಕಾಗದಪತ್ರಗಳು ನಮ್ಮಮುಂದೆ ಇಲ್ಲ. ಬಹುಶಃ ಅನೇಕ ಜನ ಮಾನ್ಯ ಸದಸ್ಯರು ಇದರ ಬಗ್ಗೆ ತಿಳಿಯಬೇಕೆಂಬ ಆಕಾಂಕ್ಷೆಯನ್ನು ಹೊಂದಿರತಕ್ಕಂಥವರಿಗೆ ಇನ್ನು ಸಿಕ್ಕಿಲ್ಲ. ನಾನೂ ಕೂಡ ಈ ಮಾತನ್ನು ಸರ್ಕಾರದ ಮುಂದೆ ಇಟ್ಟಿದ್ದೆ. ಸರ್ಕಾರ ಇವತ್ತಾದರೂ ಇಡಬಹುದಾಗಿತ್ತು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕಾವೇರಿ ಜಲ ವಿವಾದದಬಗ್ಗೆ ಏನೇನು ಡಾಕ್ಯುಮೆಂಟ್ಸ್ ಬೇಕಾದರೂ ಅದನ್ನು ಮಾನ್ಯ ಸದಸ್ಯರಿಗೆ ಕೊಡಲು ತಯಾರಾಗಿದ್ದೇವೆ. ಸುಪ್ರೀಂಕೋರ್ಟ್ ಜಡ್ಜಮೆಂಟ್ ಕಾಪಿಯನ್ನು ಕೇಳಿದರೂ ಅದನ್ನು ಕೊಡಲು ತಯಾರಾಗಿದ್ದೇವೆ. ಮತ್ತೆ ನಾವು ಏನೇನು ಪತ್ರವ್ಯವಹಾರಗಳನ್ನು ಮಾಡಿದ್ದೇವೆ ಅದನ್ನೂ ಕೂಡ ಕೊಡಲು ತಯಾರಾಗಿದ್ದೇವೆ ಇದರಲ್ಲೇನು ಮುಚ್ಚುಮರೆಯಿಲ್ಲ. ಇನ್‌ಫರ್ಮೇಷನನ್ನು ಸಪ್ರೆಸ್ ಮಾಡಬೇಕೆಂಬ ಇಚ್ಛೆ ಸರ್ಕಾರಕ್ಕಿಲ್ಲ. ಈ ಪ್ರಶ್ನೆ ಎಲ್ಲರಿಗೂ ಗೊತ್ತಿದೆ, ಅದು ಅಲ್ಲದೆ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಹಂತಹಂತದಲ್ಲೂ ಈ ಬಗ್ಗೆ ಸಮಾಲೋಚನೆ ಮಾಡುತ್ತಿರುವುದರಿಂದ ಅದರ ಅವಶ್ಯಕತೆ ಇಲ್ಲವೆಂದು ಭಾವಿಸಿದ್ದೆ. ಆದರೆ ಈಗ ಏನು ಇನ್‌ಫರ್ಮೇಷನ್ ಕೇಳಿದರೂ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮುಚ್ಚಿಡುತ್ತಿದ್ದಾರೆ ಎನ್ನುವ ಭಾವನೆಯಿಂದ ಹೇಳುತ್ತಿಲ್ಲ. ಆದರೆ ಪ್ರತಿಯೊಬ್ಬ ಸದಸ್ಯರಿಗೂ ಅದರ ವಿವರಗಳು ದೊರೆತು ವಿಚಾರ ಅರ್ಥವಾಗಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಧ್ಯಕ್ಷರು.—ಸುಪ್ರೀಂಕೋರ್ಟ್ ಜಜ್ಡ್‌ಮೆಂಟ್ ಕಾಪಿಯನ್ನು ಕಳುಹಿಸಿಕೊಡಬೇಕೆಂದು ತಾವು ಕೇಳುತ್ತಿದ್ದೀರಾ?

ಶ್ರೀ ವಾಟಾಳ್ ನಾಗರಾಜ್.—ನನಗೆ ಮಾತ್ರವಲ್ಲ ಪ್ರತಿಯೊಬ್ಬ ಸದಸ್ಯರಿಗೂ ಅದನ್ನೂ ಒದಗಿಸುವಂಥ ವ್ಯವಸ್ಥೆಯಾಗಬೇಕು.

ಅಧ್ಯಕ್ಷರು.—ಎಲ್ಲರಿಗೂ ಒದಗಿಸಿಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಸಧ್ಯಕ್ಕೆ ನಿಮಗೆ ಬೇಕಾದರೆ ಕಾಪಿಯನ್ನು ಒದಗಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್. ನನ್ನ ಹತ್ತಿರ ಕಾಪಿ ಇದೆ.

ಅಧ್ಯಕ್ಷರು.—ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಈ ಮಹತ್ವದ ವಿಚಾರದಲ್ಲಿ ಸುಪ್ರೀಮ್ ಕೋರ್ಟ್ ಏನು ತೀರ್ಮಾನ ತೆಗೆದುಕೊಂಡಿದೆ ಅದೆಲ್ಲ ವಿವರಗಳನ್ನು ಒಳಗೊಂಡ ಕಾಪಿಯನ್ನು ಮಾನ್ಯ ಸದಸ್ಯರೆಲ್ಲರಿಗೂ ಒದಗಿಸಿಕೊಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ಇಲ್ಲಿ ಪ್ರಶ್ನೆ ಏನಿದೆ ಅಂದರೆ ಮುಖ್ಯ ಮಂತ್ರಿಗಳು ಸದನದ ವಿರೋಧ ಪಕ್ಷದ ನಾಯಕರಿಗೆ ಮತ್ತಿತರ ಸದಸ್ಯರಿಗೆ ವಿವರಗಳನ್ನು ಕೊಟ್ಟಿರುವುದು ಮತ್ತು ಮಾತುಕತೆಗೆ ಕರೆದಿರುವುದು ನಿಜ. ಈ ಅಧಿವೇಶನವನ್ನು ಕರೆದಿರುವುದು ಎಲ್ಲಾ ಶಾಸಕರ ಅಭಿಪ್ರಾಯವನ್ನು ಪಡೆಯಬೇಕೆಂದು. ಮುಖ್ಯವಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕ ಹೊಸ ಶಾಸಕರು ಇದ್ದಾರೆ ಅವೆಲ್ಲರಿಗೂ ಈ ಸಮಸ್ಯೆ ಇತ್ತೀಚೆಗೆ ಗೊತ್ತಿರಬಹುದು. ಈ ಚರ್ಚೆ ಏನಿದೆ ಇದು ಯಾವ ಯಾವ ಹಂತದಲ್ಲಿ ಏನೇನಾಗಿದೆ ಎಂಬ ವಿವರಗಳನ್ನು ಒಳಗೊಂಡ ಬ್ರೋಚರ್ ತಯಾರು ಮಾಡಿ ಚರ್ಚೆಗೆ ಮುಂಚೆ ಕಳುಹಿಸಿದ್ದರೆ ಒಳ್ಳೆಯದಿತ್ತು. ನಾವು ಹೌಸ್ ಕಮಿಟಿ ಮಾಡುತ್ತೇವೆ, ಅದಾದನಂತರ ಮುಖ್ಯ ಮಂತ್ರಿಗಳ ಜೊತೆಗೆ ಮಾತನಾಡುತ್ತೇವೆ. ಆದರೆ ಪ್ರತಿಯೊಬ್ಬ ಶಾಸಕರಿಗೆ ವಿಚಾರ ಗೊತ್ತಾಗಲಿಕ್ಕೆ ಬ್ರೋಚರ್ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆಂದು ಮುಖ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಈ ಸರ್ಕಾರದಲ್ಲಿ ಏನು ನಡೆಯುತ್ತಿದೆ, ಕೇಂದ್ರದಲ್ಲಿ ಏನು ನಡೆಯುತ್ತಿದೆ ಎಂಬುದು ನಮಗೆ ಗೊತ್ತಾಗಬೇಕು. ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಹೋಗುತ್ತಿರುವುದಕ್ಕಾಗಿ ಸರ್ಕಾರದವರನ್ನು ಅಭಿನಂದಿಸುತ್ತೇನೆ. ನಾನು ದೆಹಲಿಗೆ ಬರಬೇಕಾಗಿತ್ತು, ಕಾರಣಾಂತರದಿಂದ ಬರಲಿಲ್ಲ. ವಿರೋಧ ಪಕ್ಷದ ಮುಖಂಡರಿಗೆ ಮಾತ್ರ ಮಾಹಿತಿ ಒದಗಿಸುವ ಬದಲು ಇವತ್ತು ಇದಕ್ಕೋಸ್ಕರ ಸಭೆ ಏನು ನಡೆಯುತ್ತಿದೆ....

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಏನು ಸುಪ್ರೀಂಕೋರ್ಟ್ ತೀರ್ಪಿನ ಪ್ರತಿಯನ್ನು ಕೊಡಬೇಕೆಂದು ಸೂಚನೆ ಕೊಟ್ಟಿದ್ದಾರೆ, ಅದನ್ನು ನಾವು ಒದಗಿಸುತ್ತೇವೆ. ಇಂಥ ವಿಚಾರ ಬಂದಾಗ ಸರ್ಕಾರದ ಅಧೀನದಲ್ಲಿರತಕ್ಕದ್ದನ್ನು ಕೊಡುತ್ತೇವೆ. ಹೆಚ್ಚಾಗಿ ಸುಪ್ರೀಂ ಕೋರ್ಟಿನ ತೀರ್ಪಿನ ಪ್ರತಿಯನ್ನು ಚರ್ಚೆಯಾಗುವಾಗ ಕೊಡತಕ್ಕ ಪರಿಪಾಠ ಇಲ್ಲ. ಆದರೂ ಸದಸ್ಯರು ಕೇಳಿರುವುದರಿಂದ ಒದಗಿಸುತ್ತೇವೆ, ಅದೇನು ಗುಟ್ಟಾಗಿ ಉಳಿದಿಲ್ಲ. ಅದೆಲ್ಲ ಪತ್ರಿಕೆಯಲ್ಲಿ ಬಂದಿದೆ.

MR- SPEAKER.—Supreme Court decision is a reported decision

SRI M. VEERAPPA MOILY.—It is not as if a document in the custody of the Governmet. ಅದಕ್ಕಾಗಿ ಈ ಚರ್ಚೆ ನಿಲ್ಲಬೇಕಾದ ಅವಶ್ಯಕತೆ ಇಲ್ಲ. ಸುಪ್ರೀಂ ಕೋರ್ಟ್ ತೀರ್ಪಿನ ಪ್ರತಿಯನ್ನು ಏನು ಕೇಳುತ್ತಿದ್ದಾರೆ ಅದನ್ನು ಒದಗಿಸಲಿಕ್ಕೆ ಸರ್ಕಾರ ಸಿದ್ಧವಿದೆ. ಸ್ಪೆಷಲ್ ಆಗಿ ನಮ್ಮ ಕಸ್ಟಡಿಯಲ್ಲಿ ಡಾಕ್ಯುಮೆಂಟ್ಸ್ ಏನಾದರೂ ಇದ್ದರೆ ಮೊದಲೇ ಕೊಡಬೇಕಾಗಿತ್ತು. ನಮ್ಮಲ್ಲಿರತಕ್ಕ ದಾಖಲೆಯನ್ನು ಸದಸ್ಯರೇನು ಕೇಳುತ್ತಿದ್ದಾರೆ, ಅದೇನು ವಿಶೇಷವಾದುದೇನಲ್ಲ. ಅದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಆದರೂ ಅದು ಬೇಕು ಎಂದು ಹೇಳಿರುವುದರಿಂದ ಅದನ್ನು ಕೊಡುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಪತ್ರಿಕೆಗಳಲ್ಲಿ ಬಂದದ್ದನ್ನು ನಾವು ಓದಿದ್ದೇವೆ. ಇದಕ್ಕೋಸ್ಕರ ಸಭೆ ಕರೆಯಬೇಕೆಂದು ರಾಜ್ಯಾದ್ಯಂತ ಕೂಗು. ಬಂತು. ಇದಕ್ಕೆ ಸೀಮಿತವಾಗಿ ಎರಡು ದಿನಗಳಿಂದ ಚರ್ಚೆ ನಡೆಯುತ್ತಿದೆ. ಅದ್ದರಿಂದ ತಮಗೇನೋ ತೀರ್ಪಿನ ಪ್ರತಿ ಬಂದಿದೆ...

ಅಧ್ಯಕ್ಷರು.—ನನಗೆ ಬರಲಿಲ್ಲ, ನಾನೇ ತರಿಸಿಕೊಂಡೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಿಮ್ಮದೇ ಹೀಗಾದರೆ ಇನ್ನು ನಮ್ಮ ಗತಿ ಏನು ಲೆಕ್ಕ ಹಾಕಿ.

MR. SPEAKER.—I wanted to know as to what the Supreme Court has decided.

ಶ್ರೀ ವಾಟಾಳ್ ನಾಗರಾಜ್.—ಸರ್ಕಾರ ಎಷ್ಟು ಜವಾಬ್ದಾರಿಯಿಂದ ಇದೆ ಎಂದು ಇದರಿಂದಲೇ ಅರ್ಥವಾಗುತ್ತಿದೆ.

MR. SPEAKER.—I am equally interested in Krishna basin also.

ಶ್ರೀ ವಾಟಾಳ್ ನಾಗರಾಜ್.—ತಾವು ಹೇಳಿದ್ದು ಕೇಳಿ ನನ್ನ ಮನಸ್ಸಿಗೆ ನೋವಾಯಿತು. ತಾವೇ ತೀರ್ಪಿನ ಪ್ರತಿಯನ್ನು ತರಿಸಿಕೊಂಡಿರಿ, ನಿಜ.

ಅಧ್ಯಕ್ಷರು.—ನೋವಾಗುವಂಥ ವಿಚಾರವೇನೂ ನಡೆದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ತಾವೇ ತರಿಸಿಕೊಂಡಿರಿ, ತಮ್ಮ ಕಛೇರಿಗೂ ಕಾಗದ ಪತ್ರಗಳು ಬಂದಿಲ್ಲವೆಂದರೆ ನೋವಲ್ಲವೆ? ಇನ್ನು ಏನು ಪದ ಉಪಯೋಗಿಸಬೇಕು? ಇವತ್ತಾದರೂ ಒದಗಿಸಬೇಕಾಗಿತ್ತು. ನಿನ್ನೆ ನಾನು ಸಲಹೆ ಕೊಟ್ಟೆ. ಎಲ್ಲಾ ಮಾಹಿತಿಯನ್ನೂ ಸದಸ್ಯರಿಗೆ ಒದಗಿಸಿ ಎಂದು ಹೇಳಿದೆ. ಇವತ್ತು ಏನೇ ಆಗಿರಲಿ, ಈ ಮಾಹಿತಿಯನ್ನು ಒದಗಿಸತಕ್ಕದ್ದು ಅಥವಾ ಬಿಡತಕ್ಕದ್ದು ಸರ್ಕಾರಕ್ಕೆ ಸೇರಿದ್ದು. ಎಲ್ಲವು ಬಹಿರಂಗವಾಗಿದೆ ಎಂದು ಹೇಳುತ್ತಾರೆ, ಅದು ಬೇರೆ ವಿಚಾರ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಬಹಳ ಗೊಂದಲದಲ್ಲಿದ್ದಾರೆ. ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳತಕ್ಕ ಪರಿಸ್ಥಿತಿಯಲ್ಲಿ ನಮ್ಮ ವೀರೇಂದ್ರಪಾಟೀಲರ ಸರ್ಕಾರ ಗೊಂದಲದಲ್ಲಿದೆ. ಹಿಂದೆ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಇದೇ ರೀತಿ ಪಂಚಾಯಿತಿ ಮಂಡಲಿಯನ್ನು ನೇಮಕ ಮಾಡಬೇಕಾಗುತ್ತದೆಂಬ ಸಲಹೆ ಬಂದಾಗ ಪಂಚಾಯಿತಿ ಮಂಡಲಿಯನ್ನು ಧಿಕ್ಕರಿಸಿ ಹೊರಗಡೆ ಹೋಗುತ್ತೇವೆ, ಅದಕ್ಕೆ ಮಾನ್ಯತೆ ಕೊಡುವುದಿಲ್ಲ ಎಂಬ ರೀತಿ ಮಾತನಾಡಿದ್ದರೆಂಬುದು ನಮ್ಮ ಗಮನಕ್ಕೆ ಬಂದಿದೆ, ಸ್ವಾಮಿ. ಸರ್ಕಾರ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಗೊಂದಲದಲ್ಲಿ ಕುಳಿತಿದೆ. ವಿರೋಧ ಪಕ್ಷದ ಎಲ್ಲ ಮುಖಂಡರುಗಳನ್ನು ದೆಹಲಿಗೆ ಕರೆದುಕೊಂಡು ಹೋದಾಗ ಪ್ರಧಾನಮಂತ್ರಿಯವರನ್ನು ಭೇಟಿ ಮಾಡತಕ್ಕದ್ದೇ ದೊಡ್ಡ ಪ್ರಯಾಸವಾಯಿತು. ಕೊನೆಯಲ್ಲಿ ೨೩ನೇ ತಾರೀಖು ಸುಪ್ರೀಂ ಕೋರ್ಟ್ ತೀರ್ಪು ಬರುತ್ತದೆ, ಅದಕ್ಕಿಂತ ಮುಂಚೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ನಮ್ಮ ಮನವಿಯನ್ನು ಸಲ್ಲಿಸಬೇಕು ಎಂಬ ಉದ್ದೇಶದಿಂದ ಹೋದಂಥ ಗೌರವಾನ್ವಿತವಾದ ನಿಯೋಗಕ್ಕೆ ಪ್ರಧಾನಮಂತ್ರಿಯವರನ್ನು ಭೇಟಿ ಮಾಡತಕ್ಕದ್ದೇ ಕಷ್ಟವಾಯಿತು. ಬೆಳಿಗ್ಗೆ ಕಾದರು, ಮಧ್ಯಾಹ್ನ ಕಾದರು, ಕೊನೆಗೆ ಸಂಜೆವರೆಗೂ ಕಾದರು. ಇಷ್ಟಾದರೂ ಪ್ರಧಾನಮಂತ್ರಿಯವರ ನಿಲುವೇನು ? ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯವರ ನಾಯಕತ್ವದಲ್ಲಿ ಹೋದಂಥ ನಿಯೋಗಕ್ಕೆ ಅಲ್ಲಿನ ಪ್ರಧಾನ ಮಂತ್ರಿಗಳು ಏನು ಭರವಸೆ ನೀಡಿದರು ? ನಾನು ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಪ್ರಕಾರವೇ ಅಂತರರಾಜ್ಯ ಮಂಡಲಿಗೆ ಇದನ್ನು ವಹಿಸಬಹುದೆಂಬ ಭರವಸೆ ಸಿಕ್ಕಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ನಿಯೋಗದಿಂದ ವಾಪಸ್ ಬಂದ ನಂತರ ರಾಜ್ಯದ ಜನತೆಗೆ ತಿಳಿಸಿದರು. ಇಷ್ಟೆಲ್ಲಾ ನಿಯೋಗಕ್ಕೆ ತಿಳಿಸಿ ಮುಖ್ಯಮಂತ್ರಿಗಳು ಎಲ್ಲರೂ ನಂಬಿಕೆ ಇಟ್ಟುಕೊಂಡಿರುವಾಗ ಇದೆಲ್ಲವನ್ನೂ ಧಿಕ್ಕರಿಸಿ ಮತ್ತು ರಾಜ್ಯದ ಮನವಿಯನ್ನು ಧಿಕ್ಕರಿಸಿ ಪಂಚಾಯಿತಿ ಮಂಡಳಿ ರಚಿಸಿದ್ದಾರೆ. ಈಗ ನಮ್ಮ ರಾಜ್ಯ ಸರ್ಕಾರದ ಮೇಲ್ಮನವಿ ಸುಪ್ರೀಂ ಕೋರ್ಟಿನಲ್ಲಿದೆ. ಅದೇನಾಯಿತು ಎಂಬುದು ನಮ್ಮ ಸರ್ಕಾರಕ್ಕೆ ಇನ್ನೂ ಗೊತ್ತಿಲ್ಲ. ಅಂದರೆ ನಮ್ಮ ಸರ್ಕಾರ ಎಷ್ಟರ ಮಟ್ಟಿಗೆ ನಡೆಯುತ್ತಿದೆ, ಕೇಂದ್ರದಲ್ಲಿ ಎಷ್ಟರ ಮಟ್ಟಿಗೆ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ನೋಡಬೇಕು. ಮೇಲ್ಮನವಿ ಏನಾಗಿದೆ ? ಅದು ಯಾವ ಮಟ್ಟದಲ್ಲಿದೆ ? ಅದರ ಪರಿಸ್ಥಿತಿ ಏನಾಗಬಹುದು ಎಂಬ ವಿಚಾರ ಸರ್ಕಾರಕ್ಕೆ ಗೊತ್ತಿಲ್ಲ. ಈಗ ಸುಪ್ರೀಂ ಕೋರ್ಟ್ ರಜಾದಲ್ಲಿದೆ, ಯಾರು ತೀರ್ಪನ್ನು ಕೊಟ್ಟರು ? ಅವರು ಎಲ್ಲಿದ್ದಾರೆ ? ಆ ನ್ಯಾಯಾಧೀಶರು ಯಾವ ರಾಜ್ಯದಲ್ಲಿದ್ದಾರೆ ? ಎಲ್ಲಿ ಹೋಗಿದ್ದಾರೆ ? ಅಲ್ಲಿಗಾದರೂ ಹೋಗಿ ಸರ್ಕಾರದವರು ಭೇಟಿ ಮಾಡಿ ಮನವಿಯನ್ನು ಅವರಿಗೆ ಸಲ್ಲಿಸತಕ್ಕ ಕೆಲಸ ಮಾಡಬೇಕಾಗಿತ್ತು. ಸುಪ್ರೀ ಕೋರ್ಟ್ ಈಗ ರಜಾದಲ್ಲಿದೆ. ಆದರೆ ಮೇಲ್ಮನವಿ ಪರಿಸ್ಥಿತಿ ಏನಾಯಿತು ? ಯಾವ ಘಟ್ಟಕ್ಕೆ ಇಳಿದಿದೆ ? ಒಂದು ಕಡೆ ಮೇಲ್ಮನವಿಯನ್ನು ಸುಪ್ರೀಂ ಕೋರ್ಟಿಗೆ ಸಲ್ಲಿಸಿರುವಾಗ ಮತ್ತೊಂದು ಕಡೆ ಅದರ ಬಗ್ಗೆ ಗಮನ ಹರಿಸದೆ ಕೇಂದ್ರ ಸರ್ಕಾರ, ಪ್ರಧಾನ ಮಂತ್ರಿಗಳು ತರಾತುರಿಯ ನಿರ್ಣಯವನ್ನು ಕೈಗೊಂಡು ಪಂಚಾಯಿತಿ ಮಂಡಳಿ ನೇಮಕ ಮಾಡಿರ ತಕ್ಕದ್ದು ನಿಜವಾಗಿಯೂ ಒಂದು ಅತ್ಯಂತ ಘೋರವಾದ ಅನ್ಯಾಯ ಈ ನಾಡಿನ ಜನತೆಯ ಮೇಲೆ ನಡೆದಿದೆ ಎಂದು ನನಗನ್ನಿಸುತ್ತದೆ. ಸುಪ್ರೀಂ ಕೋರ್ಟಿನಲ್ಲಿ ಕರ್ನಾಟಕದ ಪರವಾಗಿ ವಾದ ಮಂಡಿಸಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದು ೬ ತಿಂಗಳಾಯಿತು, ೬ ತಿಂಗಳಿಂದ ಯಾವ ಯಾವ ರೀತಿಯಲ್ಲಿ ವಾದ ಮಂಡಿಸಿದ್ದಾರೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸದನದ ಮುಂದೆ ಉತ್ತರ ಕೊಡುವಾಗ ಅದನ್ನು ಇಡಬೇಕಾದುದು ಅವರ ಕರ್ತವ್ಯ. ಇದು ಬಹಳ ಪ್ರಮುಖವಾದುದು. ಕೊನೇ ಹಂತದಲ್ಲಿ

ತೀರ್ಪು ಬರುವಾಗ ಯಾವ ರೀತಿಯಲ್ಲಿ ಮಾತುಕತೆ ನಡೆಸಿದ್ದಾರೆ ಎಂಬುದು ಅತ್ಯಂತ ಪ್ರಾಮುಖ್ಯವಾದುದು. ಸರ್ಕಾರ ಈ ಬಗ್ಗೆ ಒಂದು ನಿರ್ಧಾರಕ್ಕೆ ಬರಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ. ಆಂಶಿಕವಾಗಿ ರಾಜ್ಯದಲ್ಲಿ ಪ್ರಚಂಡವಾಗಿ ಜನತೆಯ ದೊಡ್ಡ ಆಂದೋಳನ ಪ್ರಾರಂಭವಾಗತಕ್ಕ ಪರಿಸ್ಥಿತಿಯಲ್ಲಿ ಅನೇಕ ದೊಡ್ಡ ದೊಡ್ಡ ರಾಜಕಾರಣಿಗಳು ಹೊರಗಡೆ ಮಾತನಾಡುತ್ತಿದ್ದಾರೆ. ಮಾಜಿ ಲೋಕೋಪಯೋಗಿ ಸಚಿವರು ಒಂದು ಮಾತು ಹೇಳಿದ್ದಾರೆ. ಏನೆಂದರೆ ಈ ಪಂಚಾಯಿತಿ ಮಂಡಳಿ ರಚನೆಯಾದ ದಿನ ನಮ್ಮ ರಾಜ್ಯಕ್ಕೆ ಕರಾಳವಾದ ದಿನ. ನಮ್ಮ ರಾಜ್ಯ ಕರಾಳ ದಿನದಲ್ಲಿದೆ. ನಾವು ತೊಂದರೆಗೆ ಸಿಕ್ಕಿದ್ದೇವೆ ಎಂಬ ಮಾತನ್ನು ಮಾಜಿ ಲೋಕೋಪಯೋಗಿ ಸಚಿವರು ಹೇಳಿದ್ದಾರೆ.

ಮಾಜಿ ಲೋಕೋಪಯೋಗಿ ಸಚಿವರು ಈ ರೀತಿ ಮಾತನಾಡುವುದರಿಂದ ನಮ್ಮ ರಾಜ್ಯದ ಜನತೆಯ ಹಿತಕ್ಕೆ ಧಕ್ಕೆ ಬರುತ್ತದೆಂದು ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಹೇಳಿದರು. ಯಾವ ರೀತಿ ಧಕ್ಕೆ ಆಗುತ್ತದೆ? ಇದೇ ಸರ್ಕಾರ, ಇದೇ ವೀರೇಂದ್ರ ಪಾಟೀಲರು ನಮಗೆ ಪಂಚಾಯಿತಿ ಮಂಡಲಿ ಬೇಡ ಎಂದು ಹೇಳಿಕೊಂಡು ಬಂದು ಇವತ್ತು ಸರ್ಕಾರ ಬದಲಾದ ಧಾಟಿಯನ್ನು ನೋಡಿದರೆ ಪಂಚಾಯಿತಿ ಮಂಡಲಿಯನ್ನು ಸರ್ಕಾರ ಒಪ್ಪಿಕೊಳ್ಳತಕ್ಕ ಒಂದು ನಿರ್ಧಾರಕ್ಕೆ ಬಂದ ಹಾಗೆ ಕಾಣುತ್ತದೆ. ಪಂಚಾಯಿತಿ ಮಂಡಲಿಯನ್ನು ಈ ರಾಜ್ಯ ಸರ್ಕಾರ, ಮುಖ್ಯಮಂತ್ರಿಗಳು ಒಪ್ಪುವುದಾದರೆ ಬಹುಶಃ ಈ ರಾಜ್ಯಕ್ಕೆ ಬಹು ದೊಡ್ಡ ಅನ್ಯಾಯ ಈ ಪಂಚಾಯಿತಿ ಮಂಡಲಿಯಿಂದ ಆಗುತ್ತದೆಂದು ನಾನು ಹೇಳುತ್ತೇನೆ. ಇದನ್ನೆಲ್ಲಾ ಯೋಚನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಎಚ್ಚರ ವಹಿಸಿ ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಒಂದು ಪಿತೂರಿಯ ಸುಳಿಯಲ್ಲಿ ಮುಖ್ಯಮಂತ್ರಿಗಳು ಸಿಕ್ಕಿದ್ದಾರೆಂದು ನಾನು ಹೇಳುತ್ತೇನೆ. ಒಂದು ರೀತಿಯ ಪಿತೂರಿ ನಡೆದಿದೆ. ತಮಿಳುನಾಡಿನ ಮುಖ್ಯಮಂತ್ರಿ ಆದ ಶ್ರೀ ಕರುಣಾನಿಧಿಯವರು ಅನೇಕ ಬಾರಿ ಮಾತುಕತೆಯ ಮೂಲಕ ಪರಿಹರಿಸಿಕೊಳ್ಳುತ್ತೇವೆಂದು ಹೇಳಿ ತಕ್ಷಣ ಬದಲಾವಣೆ ಆಗಬೇಕಾದರೆ ಇದರ ಹಿಂದೆ ಇರತಕ್ಕ ಪಿತೂರಿ ಆದರೂ ಏನು? ಅವರು ತಕ್ಷಣ ಬದಲಾವಣೆಯಾಗಿದ್ದಾರೆ. ಮೊದಲಿನಿಂದಲೂ ಅವರು ಮಾತುಕತೆಯಲ್ಲಿ ಬಗೆಹರಿಸುತ್ತೇವೆಂದು ಹೇಳಿ ಈಗ ಬದಲಾವಣೆ ಆಗಬೇಕಾದರೆ ಕಾರಣ ಏನು? ನಾವು ಕೇಂದ್ರಕ್ಕೆ ಮನವಿ ಸಲ್ಲಿಸಿ ನಮಗೆ ಮಂಡಲಿ ಬೇಡ ಎಂದು ಹೇಳಿದಾಗಲೂ ನಮ್ಮ ಮೇಲೆ ಮಂಡಲಿ ಹೇರಿದ್ದಾರೆ. ಈ ಬಗ್ಗೆ ನಮ್ಮ ರಾಜ್ಯದಿಂದ ಹೋಗಿರತಕ್ಕ ಕೇಂದ್ರದ ಮಂತ್ರಿಗಳು ಒಂದು ಚಕಾರ ಎತ್ತಿಲ್ಲ. ನಮ್ಮ ರಾಜ್ಯದಿಂದ ಹೋಗಿರುವವರು, ರಾಜ್ಯದ ಹಿತವನ್ನು ಕಾಪಾಡುವವರು ಇದರ ಬಗ್ಗೆ ಏನೊಂದು ಚಕಾರವನ್ನು ಸಹಾ ಎತ್ತಿಲ್ಲ, ವಿರೋಧ ಪಕ್ಷದ ಸದಸ್ಯರನ್ನು, ವಿರೋಧ ಪಕ್ಷದ ನಾಯಕರನ್ನು ಈ ಬಗ್ಗೆ ದೆಹಲಿಗೆ ಕರೆದುಕೊಂಡು ಹೋಗಿದ್ದಾಗ ಪ್ರಧಾನ ಮಂತ್ರಿಗಳ ಮುಂದೆ ಆ ಪಕ್ಷದ ಸದಸ್ಯರು ಏನೂ ಮಾತನಾಡಲಿಲ್ಲ. ಅಲ್ಲಿಗೆ ಹೋದಾಗ ವಿರೋಧ ಪಕ್ಷದ ಮುಖಂಡರು ಗಂಭೀರವಾಗಿ ಕೂತಿದ್ದರು. ಪ್ರಧಾನ ಮಂತ್ರಿಗಳಿಗೆ ಸಮೀಪವರ್ತಿಗಳಾದ ರಾಜ್ಯದ ಮುಖಂಡರೂ ಒಂದೂ ಮಾತನಾಡಲಿಲ್ಲ. ಇವತ್ತು ಈ ವಿಷಯದ ಬಗ್ಗೆ ಅವರ ನಿಲುವು ಏನು? ಕೇಂದ್ರದಲ್ಲಿ ನಮ್ಮ ರಾಜ್ಯದ ಮಂತ್ರಿಗಳಾಗಿರುವವರು ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾಗಿರುವವರ ನಿಲುವು ಏನು ಎಂದು ಈಗ ಸ್ಪಷ್ಟವಾಗಬೇಕಾಗಿದೆ. ಅವರು ಗಂಭೀರವಾದ ಯಾವ ಮಾತನ್ನೂ ಆಡಿಲ್ಲ. ಈ ಪಿತೂರಿಯಲ್ಲಿ ಅವರೂ ಸೇರಿದ್ದಾರೆಯೋ? ಇದರ ಬಗ್ಗೆ ಸಂಶಯ ಎಲ್ಲಿಯವರೆಗೆ ಹೋಗುತ್ತದೆಂದರೆ ಕೇಂದ್ರ ಹಾಗೂ ತಮಿಳುನಾಡು ಸರ್ಕಾರಗಳೆರಡೂ ಸೇರಿ ಇಲ್ಲಿನ ವೀರೇಂದ್ರ ಪಾಟೀಲರ ಸರ್ಕಾರವನ್ನು ಉರುಳಿಸತಕ್ಕ ಯೋಚನೆ ಏನಾದರು ಇದೆಯೇ? ಇದು ನನಗೆ ಒಂದು ದೊಡ್ಡ ಅನುಮಾನ. ನಮ್ಮ ರಾಜ್ಯದಲ್ಲಿ ಬೇರೆ ಸರ್ಕಾರ ಇದೆ. ಈ ಸರ್ಕಾರವನ್ನು ಉರುಳಿಸುವುದಕ್ಕೆ ಜನರಿಂದ ಪ್ರಚೋದನೆಯಾಗಬೇಕು. ಜನರ ಪ್ರಚೋದನೆಗೆ ಯಾವುದಾದರೂ ಒಂದು ಕಾರಣ ಬೇಕು. ಇಂತಹ ಜಟಿಲ ಸಮಸ್ಯೆಗಳನ್ನು ರಾಜ್ಯದಲ್ಲಿ ನಿರ್ಮಾಣ ಮಾಡಿ ಜನರಲ್ಲಿ ಪ್ರಚೋದನೆ ತಂದು, ಈ ಸರ್ಕಾರದ ವಿರುದ್ಧ ಪ್ರಚೋದಿಸಿ ಸರ್ಕಾರವನ್ನು ಉರುಳಿಸುವ ತಂತ್ರವೇ ಎಂದು ನಮಗೆ ಶಂಕೆ ಬರುತ್ತಿದೆ. ಕಾವೇರಿ ನೀರು ಹಂಚಿಕೆ ಬಗ್ಗೆ ಕೇಂದ್ರದಲ್ಲಿರತಕ್ಕ ನಮ್ಮ ರಾಜ್ಯದ ಮಂತ್ರಿಗಳು, ಯೋಜನಾ ಆಯೋಗದ ಉಪಾಧ್ಯಕ್ಷರು, ಜನತಾದಳದ ಅಧ್ಯಕ್ಷರು ಪರಿಣಾಮಕಾರಿಯಾಗಿ ಕೇಂದ್ರದಲ್ಲಿ ಚರ್ಚೆ ಮಾಡಿ ಇದನ್ನು ತಡೆಹಿಡಿಯಬಹುದು. ಪ್ರಧಾನ ಮಂತ್ರಿಗಳು ಇದನ್ನು ತಡೆಹಿಡಿಯುವಂತೆ ಮಾಡುವಷ್ಟು ಶಕ್ತಿ ಅವರಿಗೆ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ವಾಟಾಳ್ ನಾಗರಾಜ್ ಅವರು ಎಐಎಡಿಎಂಕೆ ಪಕ್ಷದ ಏಜೆಂಟರಾಗಿ ಮಾತನಾಡುತ್ತಿದ್ದಾರೆಂದು ನನಗೆ ಸಂಶಯ ಬರುತ್ತಿದೆ. ರಾಮಕೃಷ್ಣ ಹೆಗ್ಡೆಯವರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದು ರಾಷ್ಟ್ರ ಮಟ್ಟದ ಒಂದು ಸ್ಥಾನದಲ್ಲಿದ್ದು ವೀರೇಂದ್ರ ಪಾಟೀಲರ

ಅಧ್ಯಕ್ಷತೆಯಲ್ಲಿ ಹೋಗಿದ್ದ ನಿಯೋಗದಲ್ಲಿ ಇದ್ದರು ಎಂದು ಅವರೇ ಹೇಳಿದ್ದಾರೆ. ನಿನ್ನೆ ಕೂಡಾ ಮಾನ್ಯ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲರು ಮಾತನಾಡುವಾಗ ರಾಮಕೃಷ್ಣ ಹೆಗಡೆಯವರು ನಿಯೋಗದಲ್ಲಿ ಹೋಗಿದ್ದಕ್ಕೆ ಕರುಣಾನಿಧಿಯವರು ಕೂಡಾ ಟೀಕೆ ಮಾಡಿದ್ದಾರೆಂದು ಹೇಳಿದ್ದಾರೆ. ಹಾಗಿದ್ದಲ್ಲಿ ಈ ಸರ್ಕಾರವನ್ನು ಬೀಳಿಸತಕ್ಕ ಪಿತೂರಿಯನ್ನು ಯಾರು ಮಾಡುತ್ತಾರೆ? ಹಾಗಿದ್ದರೆ ಅವರನ್ನು ಎಐಎಡಿಎಂಕೆಯ ಅಂದರೆ ಜಯಲಲಿತಾರವರ ಏಜೆಂಟಾಗಿ ಮಾತನಾಡುತ್ತಾರೆಂಬ ಭಾವನೆ ನಮಗೂ ಬರುತ್ತದೆ. ಅಲ್ಲಿ ಡಿಎಂಕೆ ಸರ್ಕಾರದ ನಿಲುವನ್ನು ಎಐಡಿಎಂಕೆಯವರು ವಿರೋಧ ಮಾಡಿದ್ದಾರೆ. ಆದ್ದರಿಂದ ಏಜೆಂಟಾಗಿ ಮಾತನಾಡುತ್ತಿದ್ದಾರೆನ್ನುವ ಸಂಶಯ ನನಗೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.— ನಿಮಗೆ ಕಾಲ ಕಾಲಕ್ಕೆ ಅನೇಕ ಸಂಶಯಗಳು ಬರುತ್ತವೆ. ನೀವು ಪ್ರತಿ ವರ್ಷ ಬದಲಾವಣೆಯಾಗುತ್ತಿರುತ್ತೀರಿ. ಆದರೆ ನಾನು ತಲೆ ಕೆಡಿಸಿಕೊಂಡು ಸಂಶಯಕ್ಕೆ ಎಡೆ ಮಾಡಿ ಕೊಡಬೇಕಾಗಿಲ್ಲ. ಈಗ ನನಗೆ ಸಂಶಯ ಬಂದಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ತಾವು ಏನು ಬೇಕಾದರೂ ಹೇಳಿ.

ಅಧ್ಯಕ್ಷರು.— ಇಬ್ಬರಿಗೂ ಸಂಶಯ. ಅವರಿಗೆ ಶಂಕೆ. ನಿಮಗೆ ಸಂಶಯ, ಇದರಿಂದ ನಮಗೆ ಸಂಶಯ ಬಂದಿದೆ.

ಶ್ರೀ ವಾಟಾಳ್ ನಾಗರಾಜ್.— ನಾನು ಯಾರ ಏಜೆಂಟ್ ಆಗಬೇಕಾಗಿಲ್ಲ. ಅದು ತಮಗೆ ಗೊತ್ತಿದೆ. ನಾನು ಎಐಡಿಎಂಕೆ ಏಜೆಂಟೂ ಅಲ್ಲ, ಡಿಎಂಕೆ ಏಜೆಂಟೂ ಅಲ್ಲ. ನಾನು ಡಿಎಂಕೆ, ಎಐಡಿಎಂಕೆ ಏಜೆಂಟ್ ಆಗುವುದಕ್ಕೆ ಸಾಧ್ಯವಿಲ್ಲ. ಸಾಧ್ಯವಿದ್ದರೆ ಮಾನ್ಯ ಸಿಂಧ್ಯರವರು ಏಜೆಂಟರಾಗ ಬಹುದು. ಅವರದ್ದು ರಾಷ್ಟ್ರೀಯ ಪಕ್ಷ. ಅದು ಕಾಲ ಕಾಲಕ್ಕೆ ಬದಲಾವಣೆಯಾಗುತ್ತದೆ. ಸರ್ಕಾರ ಬದಲಾವಣೆ ಮಾಡಬೇಕಾಗುತ್ತದೆ. ಅವರು ಏನು ಬೇಕಾದರೂ ಆಗಬಹುದು ಯಾವಾಗ ಬೇಕಾದರೂ ಬಣ್ಣವನ್ನು ಬದಲಾವಣೆ ಮಾಡಬಹುದು. ನನ್ನದು ಒಂದೇ ಬಣ್ಣ, ಒಂದೇ ರೀತಿ, ಒಂದೇ ತತ್ವ. ಇದುವರೆಗೆ ನಾನು ಬದಲಾವಣೆ ಮಾಡಿಲ್ಲ, ಬದಲಾವಣೆ ಮಾಡುವುದಕ್ಕೆ ಹೋಗುವುದಿಲ್ಲ, ಆ ಪ್ರಶ್ನೆ ಬೇರೆ. ಇವತ್ತು ನನಗೆ ಹೇಳಿದರೆ ಏನಾಯಿತು? ಒಟ್ಟಿಗೆ ಇರಲಿ, ಒಂದು ಕಡೆ ಡಿಎಂಕೆಯವರ ನಿಯೋಗ, ಇನ್ನೊಂದು ಕಡೆ ಎಐಡಿಎಂಕೆಯವರ ನಿಯೋಗ, ಮತ್ತೊಂದು ಕಡೆ ಕಾಂಗ್ರೆಸ್‌ನವರ ನಿಯೋಗ ಅಂದರೆ ಎಲ್ಲ ಮಂತ್ರಿಗಳು ಪಂಚಾಯಿತಿಯನ್ನು ಒಪ್ಪಿದ್ದಾರೆ. ಅಲ್ಲಿ ಕೇಂದ್ರದ ತಮಿಳುನಾಡು ಮಂತ್ರಿಗಳು ಪಂಚಾಯಿತಿ ಮಂಡಳಿ ನಮಗೆ ಬೇಕೆಂದು ಹೇಳುತ್ತಿದ್ದಾರೆ. ಆದರೆ ನಮ್ಮಲ್ಲಿ ಒಬ್ಬರೂ ಕೂಡ ಚಕಾರ ಶಬ್ದವನ್ನು ಈ ಬಗ್ಗೆ ಎತ್ತಿಲ್ಲ. ತಾವು ಬೇಕಾದರೆ ಯಾವ ಪತ್ರಿಕೆಯಲ್ಲಿ ಇದೆಲ್ಲಾ ಬಂದಿದೆ ಎನ್ನುವುದನ್ನು ನೋಡಿ. ನಮ್ಮಿಂದ ಹೋಗಿದ್ದಾರೆ.

ಅಧ್ಯಕ್ಷರು.—ನಮ್ಮಿಂದ ಯಾರು ಹೋಗಿದ್ದಾರೆ ?

ಶ್ರೀ ವಾಟಾಳ್ ನಾಗರಾಜ್.—ನಮ್ಮಿಂದ ಹೋಗಿರತಕ್ಕವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ.

ಸಭಾಧ್ಯಕ್ಷರು.—ನಿಮ್ಮಿಂದ ಯಾರು ಹೋಗಿದ್ದಾರೆ ?

ಶ್ರೀ ವಾಟಾಳ್ ನಾಗರಾಜ್.—ನಮ್ಮಿಂದ ಹೋಗದಿದ್ದರೂ ನಮ್ಮ ರಾಜ್ಯದವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ. ಗುರುಪಾದಸ್ವಾಮಿಯವರು ಮತ್ತು ರಾಜಾರಾಮಣ್ಣನವರು ಅಲ್ಲಿದ್ದಾರೆ. ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಅವರು ಹೋಗಿದ್ದಾರೆ. ರಾಮಕೃಷ್ಣ ಹೆಗಡೆಯವರು ಉನ್ನತವಾದ ಸ್ಥಾನದಲ್ಲಿದ್ದಾರೆ.

ಅಧ್ಯಕ್ಷರು.—ನಿಯೋಗದಲ್ಲಿ ರಾಮಕೃಷ್ಣ ಹೆಗಡೆಯವರು ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನಿಯೋಗದಲ್ಲಿ ಹೆಗಡೆಯವರು ಹೋಗಿದ್ದಾರೆ ಸ್ವಾಮಿ, ಆದರೆ ಇವತ್ತಿನವರೆಗೆ ಚಕಾರ ಶಬ್ದವಿಲ್ಲ. ಅವರ ರಾಜಕೀಯ ಪಕ್ಷದ ನಿಲುವೇನು ? ಅವರ ಪಾತ್ರ ಏನು ?

ಅಧ್ಯಕ್ಷರು.—ವಿರೋಧಪಕ್ಷದ ನಾಯಕರಾದ ಮಾನ್ಯ ಚಂದ್ರೇಗೌಡರು ನಮ್ಮ ನಿಲುವನ್ನು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅವರು ಇಲ್ಲಿ ಹೇಳಿದ್ದಾರೆ, ಆದರೆ ರಾಷ್ಟ್ರಮಟ್ಟದ ನಾಯಕರು ಏನು ಹೇಳಿದ್ದಾರೆ ? ಚಂದ್ರೇಗೌಡರು ಹೇಳಿದ್ದರಿಂದ ಬಂದು ದೊಡ್ಡ ಯುದ್ಧ ನಡೆಯುತ್ತಿದೆ ಅವರ ನೋವು ಅವರಿಗೆ ಗೊತ್ತು. ನಮ್ಮ ನೋವು ನಮಗೆ ಗೊತ್ತು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಂತಹದ್ದು ಏನೂ ಇಲ್ಲ. ಏನು ಯುದ್ಧ ನಡೆಯುತ್ತಿದೆ ಹೇಳಿ ?

ಶ್ರೀ ವಾಟಾಳ್ ನಾಗರಾಜ್.—ನಾವು ಕಾಂಗ್ರೆಸ್‌ನವರನ್ನು ಬೈಯುತ್ತಿದ್ದರೆ ಬೈಯಿರಿ ಎಂದು ಹೇಳುತ್ತಾರೆ. ಇವರನ್ನು ಬೈಯ್ಯುತ್ತಿದ್ದರೆ ವಿಷಯಕ್ಕೆ ಬನ್ನಿಯೆಂದು ಹೇಳುತ್ತಾರೆ ಎಷ್ಟು ಸ್ವಾರ್ಥಿಗಳು ಈ ಜನತಾದಳದವರು. ಇವರು ಮಾಡಿರತಕ್ಕದ್ದನ್ನು ಮಾತ್ರ ಹೇಳಬಾರದು ಅಲ್ಲವೇ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸಭಾಧ್ಯಕ್ಷರೆ, ಇದು ಬಹಳ ಗಹನವಾದ ವಿಚಾರ. ಸುಮ್ಮನೆ ಅವರಿವರನ್ನು ಶೋಷಣೆ ಮಾಡುವುದಕ್ಕೆ ಬದಲು ಅವರ ಮನವೊಲಿಸಿ ನಮ್ಮ ಕಾರ್ಯಸಾಧನೆ ಮಾಡಿಕೊಳ್ಳುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡೋಣ. ಪಿತೂರಿ ನಡೆಸಿ ಸರ್ಕಾರ ಬೀಳಿಸುತ್ತಾರೆಂದು ಹೇಳಿದರು. ಮಾನ್ಯ ನಾಗರಾಜ್‌ರವರಲ್ಲಿ ನಾನು ಕೇಳಿಕೊಳ್ಳುತ್ತೇನೆ, ನಾವು ಇದನ್ನು ಬಿಡೋಣ. ಇಬ್ಬರೂ ಒಂದಾಗಿ ಅಂದರೆ ಈ ಬಗ್ಗೆ ಆಡಳಿತ ಪಕ್ಷ ವಿರೋಧಪಕ್ಷ ಒಂದಾಗಿ ಕೆಲಸ ಮಾಡಬೇಕು. ನಮಗೆ ಕೆಲಸ ಆಗಬೇಕು. ನಾವು ನಮ್ಮ ಕೆಲಸವನ್ನು ಸಾಧಿಸಬೇಕು. ಈಗಾಗಲೇ ಮಾನ್ಯ ಪುಟ್ಟಸ್ವಾಮಿಗೌಡರು ೧೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ ೧೦ ತಿಂಗಳುಗಳಲ್ಲಿ ಆ ಹಣವನ್ನು ಉಪಯೋಗಿಸುವುದಕ್ಕೆ ಹೇಗೆ ಸಾಧ್ಯವೆಂಬುದನ್ನು ಯೋಚನೆ ಮಾಡಿ. ಮಿಕ್ಕಿದ್ದರ ಬಗ್ಗೆ ಎಲ್ಲರೂ ಒಟ್ಟಿಗೆ ಸೇರಿ ಫೈಟ್ ಮಾಡೋಣ. ಸುಮ್ಮನೆ ಚಾರ್ಜಸ್ ಮಾಡುವುದು ಬೇಡ. ಇವರು ಪಿತೂರಿ ಮಾಡುತ್ತಿದ್ದಾರೆ ಸರ್ಕಾರ ಉರುಳಿಸುವುದಕ್ಕೆ ಎಂದು ಹೇಳಿದರು. ಅದು ನಮ್ಮ ಮನಸ್ಸಿನಲ್ಲಿಯೂ ಇಲ್ಲ. ನಾವು ೨೭ ಜನ ಇದ್ದುಕೊಂಡು ಸರ್ಕಾರ ಉರುಳಿಸುವುದಕ್ಕೆ ಹೇಗೆ ಸಾಧ್ಯ ? ಅವರ ತೂಕ ಜಾಸ್ತಿಯಾಗಿ ಅವರೇ ಬಿದ್ದು ಹೋಗುತ್ತಾರೆ. ಸರ್ಕಾರ ಉರುಳಿಸುವುದಕ್ಕೆ ನಮ್ಮ ಕೈಯ್ಯಲ್ಲಿ ಆಗುವುದಿಲ್ಲ. ಆ ಕೆಲಸಕ್ಕೆ ನಾವು ಹೋಗುವುದಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ಮುಂದೆ ಏನಾಗಬೇಕು ಎನ್ನುವ ಸಲಹೆಯನ್ನು ಕೊಟ್ಟರೆ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್.—ನಾನು ನಿಮ್ಮನ್ನು ಪಿತೂರಿ ಮಾಡುವುದಕ್ಕೆ ಹೊರಟಿದ್ದಾರೆ, ಮಾನ್ಯ ಜಾಲಪ್ಪನವರು ಮತ್ತು ಇವರೆಲ್ಲ ಸಹಿ ಸಂಗ್ರಹ ಮಾಡುತ್ತಿದ್ದಾರೆಂದು ಹೇಳಲಿಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಗಳ ಮಧ್ಯೆ ಗೊಂದಲವುಂಟಾದರೆ ತನ್ನಷ್ಟಕ್ಕೆ ತಾನೇ ಈ ಸರ್ಕಾರ ಬಿದ್ದುಹೋಗುವ ಪರಿಸ್ಥಿತಿ ಉದ್ಭವವಾಗುತ್ತದೆ. ಮಾಜಿ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಆ ಕೆಲಸವನ್ನು ಶುರು ಮಾಡಿದ್ದಾರೆ, ನ್ಯಾಯ ಮಂಡಳಿಯನ್ನು ವಿರೋಧ ಮಾಡಬೇಕಾಗುತ್ತದೆಂದು ದೊಡ್ಡ ಹೋರಾಟ ಮಾಡುತ್ತಿದ್ದಾರೆ. ಆ ಕೆಲಸವನ್ನು ಅವರು ಈಗಾಗಲೇ ಶುರು ಮಾಡಿದ್ದಾರೆ. ಈ ತರಹ ಗೊಂದಲ ಶುರುವಾದಾಗ ಸರ್ಕಾರಕ್ಕೆ ಇಕ್ಕಟ್ಟಿನ ಪರಿಸ್ಥಿತಿ ಉದ್ಭವವಾಗುತ್ತದೆ. ಅದೊಂದು ಪಿತೂರಿ ತಾನೆ. ನಾನು ಪಿತೂರಿ ಎಂದು ಹೇಳಿದ್ದು. ನೀವು ಯಾವ ಮಟ್ಟದಲ್ಲಿ ಪಿತೂರಿ ಮಾಡುತ್ತಿದ್ದೀರಿ ಎನ್ನುವ ಬಗ್ಗೆ ನಾನಿನ್ನು ಯೋಚನೆ ಮಾಡಿಲ್ಲ. ಆವೊಂದು ತೀರ್ಮಾನಕ್ಕೆ ನಾನು ಇನ್ನೂ ಬಂದಿಲ್ಲ. ನನಗೆ ಆವೊಂದು ಶಂಕೆ ಬರುತ್ತಿದೆ.

೧–೦೦ ಪಿ. ಎಂ.

ಮುಖ್ಯವಾಗಿ ಇದೊಂದು ಅತಿ ಗಂಭೀರವಾದಂಥ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ಎಲ್ಲಾ ಮುಖಂಡರನ್ನು ಕರೆದು ಮಾತನಾಡಿ ನಾವೆಲ್ಲರೂ ಒಂದೇ ವೇದಿಕೆಯಲ್ಲಿ ಇರಬೇಕು, ಒಂದೇ ನೀತಿಯಲ್ಲಿ ಇರಬೇಕು ಎಂದು ಹೇಳಿದರು ಸಂತೋಷ. ಆದರೆ ಈ ಬಗ್ಗೆ ನಿಮ್ಮ ನೀತಿ ಏನು ? ಪಂಚಾಯಿತಿ ಮಂಡಳಿಗೆ ಒಪ್ಪಿಕೊಳ್ಳಬೇಕೇ ಬಿಡಬೇಕೆ ಎನ್ನತಕ್ಕದ್ದು. ಪಂಚಾಯತಿ ಮಂಡಳಿಯು ನಿರ್ಧಾರ ಆಗಿ ಹೋಗಿದೆ. ನಿರ್ಧಾರ ಮಾಡಿಬಿಟ್ಟಿದ್ದಾರೆ. ಆದರೆ ಪಂಚಾಯತಿ ತೀರ್ಪು ಏನೇ ಕೊಡಲಿ ಅದು ಯಾವ ರೀತಿಯನಾದರೂ ತೀರ್ಪು ಕೊಡಲಿ, ಚಿಂತೆ ಇಲ್ಲ. ಆದರೆ ನಾವು ಜನರ ಮುಂದೆ ಏನು ಹೇಳಿದ್ದೇವೆ ? ಪಂಚಾಯಿತಿ ಮಂಡಳಿಯನ್ನು ಸಮಗ್ರವಾಗಿ ವಿರೋಧಿಸಬೇಕು, ಪಂಚಾಯತಿ ಬೇಡವೆಂದು ಹೇಳಿದ್ದೇವೆ. ಪಂಚಾಯತಿ ಮಂಡಳಿ ನೇಮಕ ಆಗಿದೆ. ಈಗ ಮುಖ್ಯಮಂತ್ರಿಗಳ ಜವಾಬ್ದಾರಿ, ಸಮಗ್ರವಾಗಿ ಪಂಚಾಯಿತಿ ಮಂಡಳಿಗೆ ನಾವು ಹೋಗಲೇಬೇಕಾಗಿಲ್ಲ. ಇದನ್ನು ಅವರು ಧೈರ್ಯವಾಗಿ ಹೇಳಲಿ. ಈ ರಾಜ್ಯದಲ್ಲಿ ಅಂತಿಮವಾಗಿ ಏನು ಆಗುತ್ತದೆ ಎಂದು ನೋಡೋಣ. ಏನು ಆಗಬೇಕೋ ಅದು ಆಗಿಯೇ ಆಗುತ್ತದೆ ಧೈರ್ಯವಾಗಿ ನಿಂತುಕೊಳ್ಳಬೇಕು. ಅದು ಬಿಟ್ಟು ಅವರು ಹೇಳಿದಕ್ಕೆಲ್ಲಾ ಕೇಳುತ್ತಲೇ ಕುಳಿತರೆ ಕೇಂದ್ರ ಸರ್ಕಾರ ಹೆಜ್ಜೆ ಹೆಜ್ಜೆಗೂ ನಮಗೆ ಏನು ಹೇಳುತ್ತದೆ. ಅದನ್ನು ಕೇಳುತ್ತಲೇ ಬಂದರೆ ನಮ್ಮ ಸರ್ಕಾರ ಸಹಿತ ಒಂದು ದಿಟ್ಟತನದ ನಿಲುವಿನಿಂದ ಬಹಳ ಹಿಂದೆ ಸರಿದಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈ ದಿಟ್ಟ ನಿಲುವಿನಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು ಮಾಡಬಾರದುಎಂದು ಸ್ಪಷ್ಟವಾಗಿ ಅವರಿಗೆ ಹೇಳುತ್ತಿದ್ದೇನೆ. ಈ ದೃಷ್ಟಿಯಿಂದ ಅಂತಿಮವಾಗಿ ನಾನು ಹೇಳುತ್ತಿದ್ದೇನೆ, ಕೇಂದ್ರ ಸರ್ಕಾರ ತೆಗೆದುಕೊಂಡಿರುವ ನಿಲುವಿನ ವಿರುದ್ಧ ಇಡೀ ರಾಜ್ಯದಾದ್ಯಂತ ಒಂದು ದೊಡ್ಡ ಹೋರಾಟ

ವನ್ನು ನಡೆಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಇವತ್ತೇ ಒಂದು ನಿರ್ಣಯವನ್ನು ಅವರು ಕೈಗೊಳ್ಳಬೇಕು ಎನ್ನುವ ಮಾತನ್ನು ತಮ್ಮ ಮೂಲಕ ತಿಳಿಸುತ್ತೇನೆ. ನಮಗೆ ನ್ಯಾಯ ದೊರೆಯುವುದಕ್ಕೆ ಇದೊಂದೇ ಮಾರ್ಗ ಇರುವುದು. ಈಗ ಚಳುವಳಿ ಬಿಟ್ಟರೆ, ಹೋರಾಟ ಬಿಟ್ಟರೆ ಕೇಂದ್ರ ಸರ್ಕಾರಕ್ಕೆ ಅರ್ಥವಾಗುವ ಭಾಷೆಯಲ್ಲಿ ನಾವೆಲ್ಲರೂ ಸೇರಿ ಹೇಳದೆ ಇದ್ದರೆ ಇದು ಬಗೆಹರಿಯುವುದಿಲ್ಲ. ಅಂತಿಮವಾಗಿ ತಾವು ಇಲ್ಲಿ ಇರುತ್ತೀರಿ, ನಾವು ಇರುತ್ತೇವೆ. ಆದರೆ ಈ ತೀರ್ಪು ನಮಗೆ ವಿರುದ್ಧವಾಗಿ ಆಗುತ್ತದೆ. ಅದರಲ್ಲಿ ಬೇರೆ ಪ್ರಶ್ನೆ ಇಲ್ಲ. ಆದರೆ ಇವತ್ತು ಈ ರಾಜ್ಯದ ನಾಲ್ಕು ಕೋಟಿ ಜನತೆಯನ್ನು ಪ್ರಚೋದನೆ ಮಾಡಬೇಕು. ಜನರಿಗೆ ತಿಳಿಸಿ ಹೇಳಬೇಕು. ಪಂಚಾಯತಿ ಮಂಡಳಿಯಿಂದ ಏನು ಆಗುತ್ತದೆ, ನಮಗೆ ಏನು ಅನ್ಯಾಯ ಆಗುತ್ತದೆ, ಏನು ತೊಂದರೆ ಆಗುತ್ತದೆ ಎಂದು ಜನತೆಗೆ ಹೇಳಬೇಕು. ರಾಜ್ಯದ ಮೂಲೆ ಮೂಲೆಯಲ್ಲಿ ಜನತೆಗೆ ಮನವರಿಕೆಯಾಗಿ ಒಂದು ರೀತಿಯ ದೊಡ್ಡ ಕ್ಷೋಭೆ ಎದ್ದು ಕೇಂದ್ರ ಸರ್ಕಾರದ ವಿರುದ್ಧ ತಿರುಗಿ ನಿಲ್ಲುವ ರೀತಿ ಸರ್ಕಾರವೇ ಕೈಗೊಳ್ಳಬೇಕು. ಇಲ್ಲದೇ ಹೋದರೆ ನಾವು ಜನತೆಯನ್ನು ತಪ್ಪು ದಾರಿಗೆ ಎಳೆದಂತೆ ಆಗುತ್ತದೆ. ಜನ ಏನು ತಿಳಿದುಕೊಂಡಿದ್ದಾರೆ ಎಂದರೆ, ಸರ್ಕಾರದವರು ಒಪ್ಪಿದ್ದಾರೆ. ನಮಗೆ ಬಹಳ ಅನುಕೂಲವಾಗಬಹುದು, ನಮ್ಮ ಪರಿಸ್ಥಿತಿ ಉತ್ತಮವಾಗಬಹುದು ಎನ್ನುವ ಭಾವನೆಯಲ್ಲಿದ್ದಾರೆ. ಆದ್ದರಿಂದ ಮುಖ್ಯಮಂತ್ರಿಗಳು ಧೈರ್ಯವಾಗಿ ನಿಂತು ಈ ಹೋರಾಟಕ್ಕೆ ಅವರು ಇಳಿಯಲೇ ಬೇಕು. ಅವರ ನಾಯಕತ್ವದಲ್ಲಿ ಹಂತಹಂತವಾಗಿ, ಮೊದಲನೇ ಹಂತವಾಗಿ ನಿಯೋಗಗಳ ಮೇಲೆ ನಿಯೋಗಗಳು, ಮತ್ತೆ ಸಭೆಗಳು ಕೊನೆಗೆ ಅಂತಿಮವಾಗಿ ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯದಿಂದ ಹೋಗತಕ್ಕಂಥ ತೆರಿಗೆ ಏನಿದೆ ಅದನ್ನು ರದ್ದು ಮಾಡುತ್ತೇವೆ, ನಿಮ್ಮ ವಿರುದ್ಧ ನಿಲ್ಲುತ್ತೇವೆ ಎನ್ನುವ ಧೈರ್ಯವನ್ನು ನೀವು ಮಾಡಬೇಕು. ನಾನು ಹೇಳುತ್ತೇನೆ, ಹಾಗೆ ಮಾಡಿದಾಗ ಪ್ರಧಾನಮಂತ್ರಿಗಳು ನಿಮ್ಮನ್ನು ಮಾತುಕತೆಗೆ ಕರೆಯದೆ ಇದ್ದರೆ ನೋಡಿ ಧಮವಿಟ್ಟು ಈ ನಿಲುವನ್ನು ನಮ್ಮ ಮುಖ್ಯಮಂತ್ರಿಗಳು ಪ್ರದರ್ಶನ ಮಾಡಬೇಕು. ಮುಖ್ಯಮಂತ್ರಿಗಳು ಗೊಂದಲದಲ್ಲಿ ಸಿಕ್ಕಿಕೊಳ್ಳುವ ಪರಿಸ್ಥಿತಿಯಲ್ಲಿದ್ದಾರೆ. ಏನು ಹೇಳಿದರೆ ಏನು ಆಗುತ್ತದೋ ಎಂಬ ಗೊಂದಲಕ್ಕೆ ಅವರು ಸಿಕ್ಕಬಾರದು. ದಿಟ್ಟ ನಿಲುವನ್ನು ಅವರು ತಳೆಯಬೇಕು. ಈ ರಾಜ್ಯದಲ್ಲಿ ದೊಡ್ಡ ಹೋರಾಟ ನಡೆಯಲೇಬೇಕಾಗುತ್ತದೆ. ೧೯೮೩ರಲ್ಲಿ ತಂಜಾವೂರಿನ ರೈತರು ಈ ಕೇಸ್‌ನ್ನು ಸುಪ್ರೀಂ ಕೋರ್ಟಿನಲ್ಲಿ ದಾಖಲು ಮಾಡಿದಾಗ ಅಲ್ಲಿಂದ ಇಲ್ಲಿಯವರೆಗೆ ಇದ್ದಂಥ ಲೋಕೋಪಯೋಗಿ ಸಚಿವರುಗಳು ಯಾರು ಯಾರು ಇದ್ದರು, ಯಾವ ಪಕ್ಷದ ಸರ್ಕಾರ ಆವಾಗ ಇತ್ತು, ಯಾವ್ಯಾವ ರೀತಿಯಲ್ಲಿ ಈ ಕೇಸಿನ ಬಗ್ಗೆ ಅವರು ನಡೆದುಕೊಂಡಿದ್ದಾರೆ ಎನ್ನತಕ್ಕದ್ದು ಹೊರಗಡೆ ಬರಬೇಕು ಏಕೆಂದರೆ ಇದು ಬಹಳ ಮುಖ್ಯವಾದದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮೊದಲಿನಿಂದ ಇವತ್ತಿನವರೆಗೆ ಯಾರ್ಯಾರು ಲೋಕೋಪಯೋಗಿ ಸಚಿವರು ಇದ್ದರು ಎಂಬ ವಿವರವಾದ ಪಟ್ಟಿ ಕೊಡಬೇಕು, ಅವರು ಏನೇನು ಮಾಡಿದ್ದರು ಎಂಬುದರ ಬಗ್ಗೆ ತಿಳಿಸಬೇಕೆಂದು ನಿನ್ನೆ ದಿವಸ ಸಹ ಕೇಳಿದ್ದಾರೆ. ಈಗ ಪುನರಪಿ ಅದನ್ನೇ ಹೇಳಿದರೆ ಕೇಳುವುದಕ್ಕೆ ಇದು ಬಹಳ ಚೆನ್ನಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ತಾವು ಮಹಾಪಂಡಿತರು. ನೀವು ಒಂದು ಸಲ ಹೇಳಿರುವ ಮಾತನ್ನು ಇಲ್ಲಿಯವರೆಗೂ ಪುನಃ ಹೇಳಿಯೇ ಇಲ್ಲವೆ " ಸಭೆಯಲ್ಲಿ ಬರೀ ಸುಳ್ಳು ಹೇಳುತ್ತೀರಿ. ನೀವು ಮಹಾ ಮೇಧಾವಿಗಳು, ಮಹಾ ಪಂಡಿತರು. ರೆಕಾರ್ಡ್ಸ್ ತೆಗೆದುನೋಡಿದರೆ ಯಾರು ಯಾರು ಯಾವ್ಯಾವ ಕಾಲಕ್ಕೆ ಎಷ್ಟೆಷ್ಟು ಸಾರಿ ಹೇಳಿದ್ದನ್ನೇ ಹೇಳಿದ್ದೀರಿ ಎಂದು ಗೊತ್ತಾಗುತ್ತದೆ. ಇಲ್ಲಿ ಸುಮ್ಮನೆ ಸೋಬಾನೆ ಹೇಳುವುದು ಬೇಡ. ಆದ್ದರಿಂದ ನಾನು ಸರ್ಕಾರಕ್ಕೆ ಹೇಳುತ್ತೇನೆ. ನಿಮ್ಮ ನಿಲುವು ಸ್ಪಷ್ಟ ಆಗಿಲ್ಲ. ಸಮಗ್ರವಾಗಿ ಈ ಬಗ್ಗೆ ಒಂದು ನಿರ್ಣಯ ಆಗಲೇಬೇಕು. ನಿರ್ಣಯ ಆಗದೆ ಬರೀ ಚರ್ಚೆಗೆ ಉತ್ತರ ಕೊಟ್ಟು ಹೋದರೆ ನಿಮ್ಮ ಸರ್ಕಾರದ ನೀತಿಯನ್ನು ನಾವು ಪ್ರತಿಭಟಿಸದೆ ಬಿಡುವುದಿಲ್ಲ, ನಿರ್ಣಯ ಆಗಲೇಬೇಕು ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಇಲ್ಲದಿದ್ದರೆ ಪಂಚಾಯಿತಿ ಮಂಡಳಿಯನ್ನು ವಿರೋಧ ಮಾಡುತ್ತೇವೆ ಎಂದು ಹೇಳಬೇಕು, ಇಲ್ಲ, ಪಂಚಾಯತಿ ಮುಂದೆ ನಾವು ಕೈಮುಗಿದು ಹೋಗುತ್ತೇವೆ ಎಂದು ಹೇಳಬೇಕು. ಯಾವುದೇ ನಿರ್ಣಯ ಆಗದೇ ಇದ್ದರೆ ಅಂತಿಮವಾಗಿ ನಿಮ್ಮ ನೀತಿಯ ಮೇಲೆ ಇಲ್ಲಿ ಧರಣಿಯನ್ನು ಹೂಡಬೇಕಾಗುತ್ತದೆ ಎಂದು ಎಚ್ಚರಿಕೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ನಿಮ್ಮ ಸೊಲ್ಯೂಶನ್ ಧರಣಿ ?

ಶ್ರೀ ವಾಟಾಳ್ ನಾಗರಾಜ್.—ಸರ್ಕಾರ ಕರ್ನಾಟಕ ರಾಜ್ಯದ ಜನತೆಯನ್ನು ತಪ್ಪು ದಾರಿಗೆ ಎಳೆದರೆ ಇನ್ನು ಏನು ಮಾಡಬೇಕು ಹೇಳಿ ?

ಅಧ್ಯಕ್ಷರು.—ನೀವು ಮನಸ್ಸು ಮಾಡಿದರೆ ಇನ್ನೂ ರಚನಾತ್ಮಕವಾಗಿ ಇರಬಹುದು.

ಶ್ರೀ ವಾಟಾಳ್ ನಾಗರಾಜ್.—ರಚನಾತ್ಮಕವಾಗಿ ಎಲ್ಲಿಯವರೆಗೆ ಮಾಡೋಣ ? ಕೈಮುಗಿದು ಆಯಿತು. ಎಲ್ಲ ಹೇಳಿದ್ದು ಆಯಿತು. ಈಗಲೂ ಅಷ್ಟೇ, ನಮ್ಮ ಮಾತನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ನನಗೆ ಬಹಳ ನೋವಾಗುತ್ತದೆ. ನಮ್ಮ ಅಧ್ಯಕ್ಷರು ಏಕೆ ಈ ಮಟ್ಟಕ್ಕೆ ಇಳಿದಿದ್ದಾರೆಂದು ನನಗೆ ಶೋಚನೀಯವಾಗುತ್ತದೆ, ಹೀಗಾಗಬಾರದಿತ್ತು, ತಮ್ಮ ಮೇಲೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೇನೆ. ತಾವು ಈ ರೀತಿ ನಗುತ್ತಿರುವುದರಿಂದ, ಮಾನ್ಯ ಮೊಯ್ಲಿಯವರೂ ನಗುತ್ತಾರೆ. ಮಾನ್ಯ ಮುಖ್ಯಮಂತ್ರಿಯವರೂ ನಗುತ್ತಾರೆ...

ಅಧ್ಯಕ್ಷರು.—ನನಗೆ ಬಂದಿರತಕ್ಕ ಶಂಕೆ ಏನೆಂದರೆ, ನೀವೇ ಎಷ್ಟೋ ಸಾರಿ ಹೇಳಿದ್ದೀರಿ, ನೀವು ಕೋಪವಾಗಿದ್ದೀರಿ, ನೀವು ನಗಬೇಕು ಎಂದು ಎಷ್ಟೋಸಾರಿ ಹೇಳಿದ್ದೀರಿ. ನಿಮ್ಮ ಮಾತನ್ನು ಸ್ವಲ್ಪ ಪಾಲಿಸೋಣವೆಂದೇ ನಗುತ್ತಿದ್ದೇನೆ. ನಗುಮುಖ ಇರಬೇಕೆಂದು ನೀವು ಹಿಂದೆ ಹೇಳಿದ್ದಿರೋ ಇಲ್ಲವೋ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ನಾವು ಅನೇಕಸಾರಿ ನಗಬೇಕೆಂದು ಹೇಳಿದಾಗ ತಾವು ನಗಲಿಲ್ಲ, ಆದರೆ. ತಾವು ಇವತ್ತು ನಗುವುದರಲ್ಲಿ ಒಂದು ಅರ್ಥ ಇದೆ. ಈ ಸಭೆಯಲ್ಲಿ ನೀವು ಸರಿ ಇದ್ದರೆ, ನಾವೂ ಸರಿ ಇರುತ್ತೇವೆ. ನೀವು ಸರಿ ಇರಲಿಲ್ಲವೆಂದರೆ, ಗೊಂದಲ ಉಂಟಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಮಹಾಭಾರತದಲ್ಲಿ ಕೃಷ್ಣ ಯಾವಾಗಲೂ ನಗುತ್ತಲೇ ಇರುತ್ತಾನೆ, ಇದನ್ನು ತಾವು ನೋಡಿಲ್ಲವೆಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಮಹಾಭಾರತದ ಕೃಷ್ಣ ನಗುತ್ತಾನೆ. ಆದರೆ ನಮ್ಮ ಕೃಷ್ಣ ನಗುವುದಿಲ್ಲವೆಂದು ನನಗೆ ವ್ಯಥೆಯಾಗುತ್ತಿತ್ತು. ನನಗೆ ತಮ್ಮ ಬಗ್ಗೆ ಗೌರವ ಇದೆ.

ಅಧ್ಯಕ್ಷರು.—ಧನ್ಯವಾದಗಳು ಈಗ ಈ ಚರ್ಚೆ ಮುಂದುವರಿಯುತ್ತದೆ. ಸಭೆ ಮುಂದೂಡಿ ಮತ್ತೆ ಎರಡು ಗಂಟೆ, ಐದು ನಿಮಿಷಕ್ಕೆ ಸಮಾವೇಶಗೊಳ್ಳುತ್ತದೆ

ಸದನವು ಒಂದು ಗಂಟೆ ಏಳು ನಿಮಿಷಕ್ಕೆ ಮುಂದೂಡಲ್ಪಟ್ಟು, ಮತ್ತೆ ಎರಡು ಗಂಟೆ ಐದು ನಿಮಿಷಕ್ಕೆ ಸೇರಲು ನಿಶ್ಚಯಿಸಿತು.

(ಮಧ್ಯಾಹ್ನ ೨ ಘಂಟೆ ೨೬ ನಿಮಿಷಕ್ಕೆ ಸದನವು ಪುನ: ಸಮಾವೇಶಗೊಂಡಿತು)

(ಉಪಾಧ್ಯಕ್ಷರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠದಲ್ಲಿದ್ದರು)

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ಸಿ. ಬೈರೇಗೌಡರು ಈಗ ಮಾತನಾಡಬಹುದು.

†ಶ್ರೀ ಸಿ. ಬೈರೇಗೌಡ (ವೇಮಗಲ).—ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ದಿವಸ ಈ ಸಭೆಯ ಮುಂದೆ ಅತ್ಯಂತ ಮಹತ್ತರವಾದ ಅತ್ಯಂತ ಗಹನವಾದ ವಿಚಾರದ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ಜೀವ ಇರತಕ್ಕ ಪ್ರತಿಯೊಂದು ವಸ್ತುವಿಗೂ ಅದು ಪ್ರಾಣಿ ಆಗಿರಲಿ, ಮನುಷ್ಯ ಆಗಿರಲಿ, ಗಿಡ ಆಗಿರಲಿ ಯಾವುದೇ ಆಗಿರಲಿ ಅದು ಜೀವಿತವಾಗಿರಬೇಕಾದರೆ ನೀರು ಅತಿ ಮುಖ್ಯ. ಗಾಳಿ ಎಷ್ಟು ಮುಖ್ಯವೋ ನೀರೂ ಸಹ ಅಷ್ಟೇ ಮುಖ್ಯ. ಅಂಥ ಒಂದು ವಿಚಾರದಲ್ಲಿ ನಾವು ಇಂದು ಚರ್ಚೆಯನ್ನು ಮಾಡುತ್ತಿದ್ದೇವೆ ಮನುಷ್ಯನ ಸಂಸ್ಕೃತಿ ಇಲ್ಲಿಯವರೆಗೂ ಬೆಳೆದು ಬರಬೇಕಾಗಿದ್ದರೆ ಈ ಸಂಸ್ಕೃತಿ ಮೇಲೆ ನೀರು ತನ್ನದೇ ಆದಂಥ ಪ್ರಭಾವವನ್ನು ಬೀರಿದೆ. ಭಾರತ ದೇಶದಲ್ಲಿ ಇರತಕ್ಕಂಥ ಈ ದೇಶಕ್ಕೆ ಮತ್ತೊಂದು ಹೆಸರಿದೆ. ಅದಕ್ಕೆ ಹಿಂದೂಸ್ತಾನ ಎಂದು ಹೇಳುತ್ತಾರೆ. ಹಿಂದೂಸ್ಥಾನ ಎಂದು ಹೇಳಬೇಕಾಗಿದ್ದರೆ ನೀರಿಗೂ ಹಿಂದೂಸ್ಥಾನಕ್ಕೂ ಸಂಬಂಧ ಇದೆ. ಸಿಂಧು ನದಿ ದಡದಲ್ಲಿ ಹಿಂದೆ ಯಾರು ವಾಸ ಮಾಡುತ್ತಿದ್ದರೋ ಅಂಥವರಿಗೆ ಹಿಂದೂಗಳು ಎಂಬತಕ್ಕ ನಾಮವಚನವನ್ನು ಕೊಟ್ಟು ಸಿಂಧೂ ನದಿಯ ಸಂಸ್ಕೃತಿ ಅಭಿವೃದ್ಧಿಯಾಗಿರತಕ್ಕದನ್ನು ಚರಿತ್ರೆಯಲ್ಲಿ ಕಂಡಿದ್ದೇವೆ. ಸಿಂಧೂ ನದಿ ದಡದಲ್ಲಿ ವಾಸ ಮಾಡುತ್ತಿದ್ದ ಜನಕ್ಕೆ ಅತೀ ಮುಖ್ಯವಾದದು ನೀರು. ಅಲ್ಲಿಂದ ಇಲ್ಲಿಯ

ವರೆಗೆ ನೀರು ತನ್ನದೇ ಆದಂಥ ಕೊಡುಗೆ ತನ್ನದೇ ಆದಂಥ ಪ್ರಭಾವವನ್ನು ಸಮಾಜದ ಮೇಲೆ ಪ್ರತಿಯೊಂದು ರಾಜ್ಯದ ಮೇಲೆ ಬೀರಿದೆ. ಇದರಿಂದ ನಮ್ಮ ರಾಜ್ಯದಲ್ಲಿ ಹರಿಯತಕ್ಕ ಕಾವೇರಿ ನದಿ ಏನೂ ಹೊರತಾಗಿಲ್ಲ. ಸಾವಿರಾರು ವರ್ಷಗಳಿಂದ ಕಾವೇರಿ ನದಿ ಏನೂ ಹೊರತಾಗಿಲ್ಲ. ಸಾವಿರಾರು ವರ್ಷಗಳಿಂದ ಕಾವೇರಿ ನದಿ ಕರ್ನಾಟಕ ರಾಜ್ಯದ ದಕ್ಷಿಣದ ಭಾಗದಲ್ಲಿ ಅದರಲ್ಲೂ ಮುಖ್ಯವಾಗಿ ಹಳೆಯ ಮೈಸೂರು ಪ್ರಾಂತ್ಯದಲ್ಲಿ ತನ್ನದೇ ಆದ ಪ್ರಭಾವವನ್ನು ವರ್ಚಸ್ಸನ್ನು ಮತ್ತು ಜನತೆಯ ಜೀವನದ ಮೇಲೆ ತನ್ನದೇ ಆದಂಥ ಪ್ರಭಾವವನ್ನು ಬೀರಿದೆ. ನದಿಯ ನೀರಿನ ವಿಚಾರದಲ್ಲಿ ಇಂದು ನಾವು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮಗೇನೂ ಆ ನೀರು ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ನಾನು ಕೋಲಾರ ಜಿಲ್ಲೆಯಿಂದ ಬಂದಿರುವ ಕಾರಣದಿಂದ ನಮಗೆ ಅದು ಬರುವುದಿಲ್ಲ. ಅದನ್ನು ಒಪ್ಪುತ್ತೇನೆ. ಆದರೆ ನಾನು ಒಬ್ಬ ವ್ಯವಸಾಯಗಾರ. ನನಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಜ್ಞಾಪಕಮಾಡಿಕೊಡುತ್ತಿದ್ದಾರೆ. ಅವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾನು ವ್ಯವಸಾಯಗಾರ. ನೀರಿಲ್ಲದೆ ಯಾವ ದೇಶದಲ್ಲೂ ವ್ಯವಸಾಯ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ನಾನು ಪ್ರಾರಂಭದಲ್ಲೇ ಮನುಷ್ಯನ ಜೀವನದ ಮೇಲೆ ನೀರು ತನ್ನದೇ ಆದಂಥ ಪ್ರಭಾವವನ್ನು ಬೀರಿದೆ ಎಂದು ಹೇಳಿದ್ದು. ಹಿಂದೆ ಒಂದು ಕಾಲದಲ್ಲಿ ಮನುಷ್ಯ ಕಾಡಿನಲ್ಲಿ ಗೆಡ್ಡೆ ಗೆಣಸು ತಿಂದು ಜೀವನ ಮಾಡುತಿದ್ದ. ಅದು ಮುಗಿದಮೇಲೆ ಮನುಷ್ಯ ಕೃಷಿಯನ್ನು ಪ್ರಾರಂಭಿಸಿದ. ತನ್ನ ಹೊಟ್ಟೆಗೆ ಬೇಕಾದ ಆಹಾರವನ್ನು ಬೆಳೆಸುವುದಕ್ಕೆ ಕೃಷಿಯ ಮೂಲಕ ಪ್ರಯತ್ನಪಟ್ಟ. ಯಾವತ್ತು ಆತ ಪ್ರಯತ್ನಪಟ್ಟನೋ ಅವತ್ತಿನಿಂದ ಇಲ್ಲಿಯವರೆಗೂ ನೀರಿನ ಅವಶ್ಯಕತೆ ದಿನದಿನ ಕಳೆದಂತೆ ಹೆಚ್ಚಾಗುತ್ತಿದೆ. ಕೃಷಿಗೆ ಅಮೂಲ್ಯವಾಗಿರತಕ್ಕ ವಸ್ತು ನೀರು. ನಾನೂ ಒಬ್ಬ ಕೃಷಿಕನಾಗಿರುವುದರಿಂದ ವ್ಯವಸಾಯಗಾರನಾಗಿರುವುದರಿಂದ, ವ್ಯವಸಾಯಗಾರನ ರಕ್ತ ನನ್ನ ಶರೀರದಲ್ಲಿ ಹರಿಯುತ್ತಿರುವುದರಿಂದ ಅದು ಕಾವೇರಿ ಇರಲಿ ಅಥವಾ ಕೃಷ್ಣ ಇರಲಿ ಅಥವಾ ಇಡೀ ದೇಶದಲ್ಲಿರುವ ಯಾವುದೇ ನದಿ ಇರಲಿ ಆ ನದಿಯ ನೀರನ್ನು ವ್ಯವಸಾಯಕ್ಕೆ ತೊಡಗಿಸುವುದಾದರೆ, ಒದಗಿಸುವುದಾದರೆ ನನಗೂ ಕೂಡಾ ಅಷ್ಟೇ ಸಂತೋಷವಾಗುತ್ತದೆ. ಅದು ನನಗೆ ಖುಷಿ ಕೊಡುತ್ತದೆ. ನಮ್ಮ ದುರಾದೃಷ್ಟವೆಂದರೆ ನಮ್ಮ ಜಿಲ್ಲೆಯಲ್ಲಿ ನಾವು ನೀರು ಪಡೆಯಬೇಕಾದರೆ ನಾವು ೩೦೦ ಅಡಿ ಆಳಕ್ಕೆ ಹೋಗಬೇಕಾಗಿದೆ. ಇದರಿಂದ ನೀರಿನ ಮಹತ್ವ ಏನು ಇದೆ ಎಂಬುದು ನಮ್ಮ ರಾಜ್ಯದ ಇತರ ಜಿಲ್ಲೆಗಳಿಗಿಂತಾ ನನ್ನ ಜಿಲ್ಲೆಯವರಿಗೆ ಹೆಚ್ಚು ತಿಳಿದಿದೆ. ನಮ್ಮ ಅಣ್ಣತಮ್ಮಂದಿರಾದ ರೈತರು ಕೆಲವು ಕಡೆ ಒಳ್ಳೆಯ ಅವಕಾಶವನ್ನು ಪಡೆದಿದ್ದಾರೆ. ನೀರನ್ನು ಸರಾಗವಾಗಿ ಹರಿಸತಕ್ಕ ಭೂಮಿ ಪಡೆದಿದ್ದಾರೆ, ನನಗೆ ಅದರಿಂದ ಖುಷಿ ಆಗುತ್ತದೆ, ನಮಗೆ ಆ ಸೌಲಭ್ಯ ಇಲ್ಲ ಎನ್ನುವ ಕೊರಗು ಇದ್ದರೂ ಕೂಡಾ ನಮ್ಮ ಅಣ್ಣತಮ್ಮಂದಿರಿಗೆ ಈ ಒಂದು ಸೌಲಭ್ಯ ಕೊಡುವುದಾದರೆ ಅದಕ್ಕಿಂತಲೂ ಸಂತೋಷದ ವಿಚಾರ ನನಗೆ ಮತ್ತೊಂದಿಲ್ಲ. ಅದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಕಾವೇರಿ ನೀರಿನ ಬಗ್ಗೆ ಒಂದೆರಡು ಮಾತನಾಡುತ್ತೇನೆ. ಇವತ್ತು ಈ ಚರ್ಚೆಗೆ ಮೂಲ ಕಾರಣವಾಗಿರತಕ್ಕಂತಹದ್ದು ಏನು? ಕಾವೇರಿ ನದಿ ನೀರಿನ ವಿಚಾರದಲ್ಲಿ ೧೮೯೨ ಮತ್ತು ೧೯೨೪ರಲ್ಲಿ ಅಂದಿನ ಮೈಸೂರು ಪ್ರಾಂತ್ಯಕ್ಕೂ ಮತ್ತು ಮದ್ರಾಸ್ ರಾಜ್ಯಕ್ಕೂ ನಡೆದಂತಹ ಎರಡು ಕರಾಳ ಕರಾರುಗಳಿಂದ ಕಳೆದ ೧೦೦ ವರ್ಷಗಳಿಂದ ನಮ್ಮ ನ್ಯಾಯ ಸಮ್ಮತವಾದ ಹಕ್ಕು ಏನಿದೆ ಅದು ಮೊಟಕುಗೊಳ್ಳುತ್ತಾ, ನಾವು ಉಪಯೋಗಿಸಿಕೊಳ್ಳಬೇಕಾದ ನೀರು ಏನಿದೆ ಆ ನೀರನ್ನು ಆಂಧ್ರ ಮತ್ತು ತಮಿಳುನಾಡು ರಾಜ್ಯಗಳು ಕಸಿದುಕೊಳ್ಳುತ್ತಾ ಬಂದಿವೆ. ೧೮೯೨ರಲ್ಲಿ ಏನು ಪರಿಸ್ಥಿತಿ ಇತ್ತು? ಅಂದು ಬ್ರಿಟಿಷ್ ಸಾಮ್ರಾಜ್ಯ ಸೂರ್ಯ ಮುಳಗದ ಸಾಮ್ರಾಜ್ಯವಾಗಿತ್ತು. ಅಂದು ಬ್ರಿಟಿಷರ ಸಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿ ಇತ್ತು ಅಂದು ಇಡೀ ದೇಶ ಬ್ರಿಟಿಷರ ಗುಲಾಮಗಿರಿಯಲ್ಲಿದ್ದರೆ ನಮ್ಮ ಮೈಸೂರು ರಾಜ್ಯ ಗುಲಾಮರ ಗುಲಾಮಗಿರಿಯಲ್ಲಿ ಇದ್ದ ಸ್ಥಿತಿಯಲ್ಲಿ ಇತ್ತು. ೧೮೯೨ರಲ್ಲಿಯಾಗಲೀ ಅಥವಾ ೧೯೨೪ರಲ್ಲಿಯಾಗಲೀ ಬ್ರಿಟಿಷ್ ಚಕ್ರಾಧಿಪತ್ಯ ಒಂದು ಕಡೆಯಾದರೆ ಮತ್ತೊಂದು ಕಡೆ ಮೈಸೂರು ಒಂದು ಸಾಮಂತ ರಾಜ್ಯವಾಗಿತ್ತು. ಒಂದು ಕಡೆ ಬ್ರಿಟಿಷ್ ಸಾಮ್ರಾಜ್ಯ ಹಿಮಾಲಯ ಪರ್ವತದಂತೆ ಇದ್ದರೆ ಮತ್ತೊಂದು ಕಡೆ ಮೈಸೂರು ರಾಜ್ಯ ಒಂದು ಸಣ್ಣ ಗುಡ್ಡದಂತೆ ಇರತಕ್ಕ ವ್ಯವಸ್ಥೆ. ಆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೀಮಿತ ಅಧಿಕಾರ ಇರತಕ್ಕ, ಸೀಮಿತ ವಿಸ್ತಾರ ಇರತಕ್ಕ ಮೈಸೂರು ರಾಜ್ಯ ಎಲ್ಲಿ? ಅಂತಹ ಪರಿಸ್ಥಿತಿಯಲ್ಲಿ ೧೮೯೨ರ ಕರಾರು ಮತ್ತು ೧೯೨೪ರ ಕರಾರು ಆಗಿದೆ. ಆ ಎರಡು ಕರಾಳ ಕರಾರುಗಳಿಂದ ನಾವು ಇಂದು ಈ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದೇವೆ. ಕಾವೇರಿ ನದಿಯ ನೀರಿನ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿನ ಸ್ಥಿತಿ ಏನು ಎಂಬುದನ್ನು ಅಂಕಿಅಂಶಗಳ ಮೂಲಕ ಒಂದೆರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

೧೯೭೪ರಲ್ಲಿ ತಮಿಳುನಾಡಿನಲ್ಲಿ ೧೬ ಸಾವಿರದ ೬೫ ಸಾವಿರ ಎಕರೆ ಪ್ರದೇಶ ನೀರಾವರಿಯಾಗುತ್ತಿತ್ತು. ೧೯೮೦ರಲ್ಲಿ ಇದು ೨೮ ಲಕ್ಷ ೨೨ ಸಾವಿರದ ೮೦೦ ಎಕರೆಗೆ ಹೋಯಿತು. ಇದೇ ಅವಧಿಯಲ್ಲಿ ೧೯೭೪ ರಿಂದ ೧೯೮೦ರ ಅವಧಿಯಲ್ಲಿ ನಮ್ಮಲ್ಲಿ ಏನಾಗಿದೆ ಎನ್ನುತಕ್ಕದ್ದನ್ನು ನಾವು ಮುಖ್ಯವಾಗಿ ನೋಡಬೇಕಾಗಿದೆ. ೧೯೭೪ರಲ್ಲಿ ಕರ್ನಾಟಕದ ಹಳೇ ಮೈಸೂರಿನ ಕಾವೇರಿ ನದಿ ಪಾತ್ರದಲ್ಲಿ ೧೯೭೪ರಲ್ಲಿ ೩ ಲಕ್ಷದ ೧೪ ಸಾವಿರದ ೯೦೦ ಎಕರೆ ನೀರಾವರಿಯಾಗಿದ್ದರೆ, ೧೯೮೦ರಲ್ಲಿ ಅದು ೬ ಲಕ್ಷದ ೮೨ ಸಾವಿರ ಎಕರೆ ನೀರಾವರಿಯಾಗುತ್ತಿದೆ. ಅಂದರೆ ಕೇವಲ ೩ ಲಕ್ಷ ಎಕರೆ ಮಾತ್ರ ಹೆಚ್ಚಾಗಿ ನೀರಾವರಿಯಾಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೆರಿಟ್ಸ್ ಬಗ್ಗೆ ನಮ್ಮಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತಿದೆ. ಅದರಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತಿದೆಂದು ಹೇಳುವುದು ಸರಿಯಲ್ಲ. ಈ ವಿಚಾರ ಈಗ ಟ್ರಿಬ್ಯುನಲ್‌ನಲ್ಲಿದೆ. ಇದರ ಬಗ್ಗೆ ಸೀಮಿತವಾಗಿ ವಿಚಾರ ಮಾಡಿದರೆ ಒಳ್ಳೆಯದಾಗುತ್ತದೆ. ತಾವು ಸದನದ ಒಳಗೆ ಮಾತನಾಡುತ್ತಿದ್ದೀರಿ, ತಾವು ಜನತಾ ಪಕ್ಷದ ಮುಖಂಡರು ತಮ್ಮ ವಾಕ್ಯಕ್ಕೆ, ತಮ್ಮ ಮಾತಿಗೆ ಹೆಚ್ಚು ಬೆಲೆ ಇರುತ್ತದೆ. ಮುಂದೆ ಇದನ್ನೇ ಅವರು ಎವಿಡೆನ್ಸ್ ಆಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸೀಮಿತವಾಗಿ ಪರಿಮಿತಿಯೊಳಗೆ ತಾವು ಮಾತನಾಡಿದರೆ ಮುಂದಿನ ವ್ಯವಹಾರಕ್ಕೆ ಪ್ರಯೋಜನವಾಗುತ್ತದೆಂದು ಜನತಾ ಪಕ್ಷದ ಮುಖಂಡರಿಗೆ ಸೂಚನೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಈ ಒಂದು ವಿವರಗಳು ಅಡ್ಡಿ ಬರುತ್ತದೆಂದರೆ ಅದನ್ನು ನಾನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಅಷ್ಟೆ ಅಲ್ಲ. ಅಂತಹ ಮಾತುಗಳನ್ನು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಮತ್ತೊಂದು ವಿಚಾರವನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಹುಚ್ಚಮಾಸ್ತಿಗೌಡರು ಒಂದು ಸಲಹೆಯನ್ನು ಕೊಟ್ಟರು. ಅವರ ಸಲಹೆ ಏನೆಂದರೆ, ಈ ಸದನವನ್ನು ಇನ್‌ಕ್ಯಾಮೆರಾದಲ್ಲಿಟ್ಟು ಸದನದ ನಡವಳಿಕೆಯನ್ನು ನಡೆಸಬೇಕಾಗುತ್ತದೆಂದು ಅವರು ಹೇಳಿದರು. ಕೆಲವು ವಿಚಾರಗಳನ್ನು ಹೇಳಬೇಕಾಗಿದ್ದರೂ ನಾನು ಇಷ್ಟಕ್ಕೆ ಸೀಮಿತಗೊಳಿಸುತ್ತೇನೆ. ನಾನು ಮುಂದಕ್ಕೆ ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಹೇಳುವ ವಿಷಯ ದೇಶಕ್ಕೆ ಗೊತ್ತಿಲ್ಲವೆಂದು ಹೇಳುತ್ತೀರಾ?

ಶ್ರೀ ಸಿ. ಬೈರೇಗೌಡ.—ಇದು ಸರ್ಕಾರದ ಅಂಕಿ ಅಂಶ. ನಿಮಗೂ ಗೊತ್ತಿರುವ ವಿಷಯ. ಯಾರ್ಯಾರು ಏನೇನು ಮಾಡಿದ್ದಾರೆಂದು ಹೇಳುತ್ತಿದ್ದೇನೆ. ಯಾರ್ಯಾರಿಗೆ ಏನೇನು ಸಿಕ್ಕಿದೆ ಎನ್ನುವುದನ್ನು ಹೇಳುತ್ತೇನೆ. ತಾವು ಆತುರ ಪಡಬೇಡಿ. ಈ ವಿಚಾರವನ್ನು ನಾನು ಏತಕ್ಕೆ ಪ್ರಸ್ತಾಪ ಮಾಡಿದ್ದೇನೆಂದರೆ ನಮ್ಮ ರಾಜ್ಯದಲ್ಲಿರತಕ್ಕ ರೈತರಿಗೆ ಅನ್ಯಾಯವಾಗಿರುವುದನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಅದು ಇನ್ನು ಬಹಳ ಬೇಕಾದಷ್ಟು ಇದೆ, ವಿವರಕ್ಕೆ ನಾನು ಹೋಗುವುದಿಲ್ಲ. ಆ ಬಗ್ಗೆ ಅಂಕಿಅಂಶಗಳು ಸಾಕಷ್ಟು ಇವೆ. ಆ ಅಂಕಿ ಅಂಶಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಅದನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ. ಕಾವೇರಿ ನದಿ ನೀರಿನ ವಿಚಾರದಲ್ಲಿ ಹಿಂದೆ ಪ್ರಸ್ತಾಪ ಮಾಡಿಲ್ಲವೇ ಅಂದರೆ ಅದು ಪ್ರಸ್ತಾಪ ಆಗಿದೆ. ಹಿಂದೆ ಕೂಡ ಈ ಬಗ್ಗೆ ಅನೇಕ ಸಂದರ್ಭಗಳಲ್ಲಿ ಈ ಸಭೆಯಲ್ಲಿ ಚರ್ಚೆಗೆ ಬಂದಿದೆ. ಚರ್ಚೆಗೆ ಬಂದಾಗಲೆಲ್ಲಾ ಅಂದು ಇದ್ದಂಥ ಸರ್ಕಾರಗಳು ಯಾವ ರೀತಿ ವರ್ತನೆ ಮಾಡಿವೆ ಈ ಸಭೆಯ ತೀರ್ಮಾನ ಏನು ? ಮತ್ತು ಅಂದು ಸರ್ಕಾರ ತೆಗೆದುಕೊಂಡಂಥ ಕಾರ್ಯಕ್ರಮಗಳ ಬಗ್ಗೆ ಕೂಡ ನಾವು ಇವತ್ತಿನ ದಿವಸ ಕೇಳಬೇಕಾಗಿರತಕ್ಕಂಥ ಅವಶ್ಯಕತೆ ಇದೆ, ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಭೆಯ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಕಾರಣ ಏನು ಎಂದರೆ ಶ್ರೀ ಶಿವರಾಮೇಗೌಡರು ಹೇಳಿದರು ೧೯೬೬ರಲ್ಲಿ ಬಹುಶಃ ಅಂದಿನ ಸಭೆಯಲ್ಲಿ ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರು ಇದ್ದರು. ೬೨ ರಿಂದ ೬೭–೬೮ರವರೆಗೆ ತಾವು ಈ ಸಭೆಯ ಸದಸ್ಯರಾಗಿದ್ದೀರಿ ಎಂದು ನನ್ನ ನಂಬಿಕೆ ಏಕೆಂದರೆ ಆಗ ಮಾನ್ಯ ಕೃಷ್ಣರವರು ಸದಸ್ಯರಾಗಿದ್ದರು ಅವರು ಇಲ್ಲಿ ಈಗ ಇದ್ದಿದ್ದರೆ ಅವರಿಗೆ ಜ್ಞಾಪಿಸಬಹುದಿತ್ತು. ಅಂದು ಈ ಸಭೆಯಲ್ಲಿ ಒಂದು ಖಾಸಗಿ ನಿರ್ಣಯ ಚರ್ಚೆಗೆ ಬಂದಿತ್ತು. ಮಾನ್ಯ ಸ್ನೇಹಿತರಾದ ಶ್ರೀ ವಾಟಾಳ್ ನಾಗರಾಜ್ ಅವರು ಈಗ ಸಭೆಯಲ್ಲಿ ಇಲ್ಲ. ಅವರು ಮಾತನಾಡುವಾಗ ಮಾತ್ರ ಸಭೆ ಎಲ್ಲಾ ಭರ್ತಿಯಾಗಿರಬೇಕು. ಇವರು ಮಾತನಾಡುವಾಗ ಅವರು ಇಲ್ಲ, ಇವರು ಇಲ್ಲ ಎಂದು ಆಕಾಶವಾಣಿಗೆ ಕೂಡಾ ಕಾಣುತ್ತಾರೆ. ಪಾಪ, ಈಗ ಅವರು ಎಲ್ಲಿಗೆ ಹೋಗಿದ್ದಾರೋ ಗೊತ್ತಿಲ್ಲ.

ಒಬ್ಬರು ಮಾನ್ಯ ಸದಸ್ಯರು.—ಅವರು ಮಾತನಾಡಿ ಆಯಿತು.

ಶ್ರೀ ಸಿ. ಬೈರೇಗೌಡ.—ಅವರು ಮಾತನಾಡುವಾಗ ಮಾತ್ರ ಸಭೆ ಭರ್ತಿಯಾಗಿರಬೇಕು ಬೇರೆ ಯಾವರು ಮಾತನಾಡುವಾಗ ಮಾತ್ರ ಅವರಿಗೆ ರಿಯಾಯ್ತಿ. ಎಲ್ಲಿ ಬೇಕಾದವರೂ ಅವರು ಹೋಗಬಹುದು. ಅಂದು ೧೯೬೪ರ ಮಾರ್ಚ್ ೩ನೇ ದಿವಸ ಹಿಂದಿನ ನೀರಾವರಿ ಸಚಿವರಾದ ಶ್ರೀ ದೇವೇಗೌಡರು ಈ ಸಭೆಯ ಸದಸ್ಯರಾಗಿದ್ದರು. ಅವರು ಒಂದು ಖಾಸಗಿ ನಿರ್ಣಯವನ್ನು ತಂದಿದ್ದರು. ಅದರ ಮೇಲೆ ಏನು ಚರ್ಚೆಯಾಯಿತು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಆ ನಿರ್ಣಯ ಏನು ಇತ್ತು ಎಂದು ಮಾತ್ರ ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

> "That this House recommends to the Government to take all necessary steps to utilise to the full extent the potential resource of Cauvery watars and also to implement all the schemes necessary in this behalf within the Fourth Five year Plan period."

ಇದು ಒಂದು ಖಾಸಗಿ ನಿರ್ಣಯ. ಈ ಖಾಸಗಿ ನಿರ್ಣಯವನ್ನು ಅಂದು ಸದಸ್ಯರಾಗಿದ್ದಂಥವರು ಸಾಕಷ್ಟು ಬೆಂಬಲಿಸಿ ಮಾತನಾಡಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಕೂಡ ಇದ್ದಾರೆ, ವಿರೋಧ ಪಕ್ಷದ ಸದಸ್ಯರು ಕೂಡ ಇದ್ದಾರೆ, ಆದರೆ ಈ ಸಭೆಯು ಈ ನಿರ್ಣಯವನ್ನು ಅಂದು ಮತಕ್ಕೆ ಹಾಕಲಿಲ್ಲ. ಯಾರು ಈ ಸಭೆಯಲ್ಲಿ ಈ ನಿರ್ಣಯದ ಪ್ರಸ್ತಾವನೆಯನ್ನು ಮಂಡಿಸಿದ್ದರು, ಅವರ ಮನವೊಲಿಸಿ ಅದಕ್ಕಿಂತ ಹಿಂದೆ ಮಾತುಕತೆ ನಡೆದು ಈ ನಿರ್ಣಯವನ್ನು ಅವರು ವಾಪಸ್ಸು ಪಡೆದಿದ್ದಾರೆ ವಾಪಸ್ಸು ಪಡೆದಂಥ ಕಾಲದಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ತುಂಬಾ ಸಂತೋಷ, ಈ ನಿರ್ಣಯ, ೪ನೇ ಯೋಜನೆಯಲ್ಲಿ ಕಾವೇರಿ ನದಿ ಪಾತ್ರದಲ್ಲಿ ಬರತಕ್ಕಂಥ ಎಲ್ಲ ಯೋಜನೆಗಳನ್ನು ಕೈಗೆತ್ತಿಕೊಂಡು ಮುಗಿಸಬೇಕು ಎನ್ನುವ ನಿರ್ಣಯ. ಅಂದಿನ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಇದು ೪ನೇ ಯೋಜನೆಯಲ್ಲಿ ಸೇರಬೇಕು ಎನ್ನುವ ಕಾರಣದಿಂದ ಇದನ್ನು ಒತ್ತಾಯ ಹೇರಿದರೆ ಕಷ್ಟವಾಗುತ್ತದೆ, ಹಣ ಮತ್ತು ಅದಕ್ಕೆ ಬೇಕಾದ ಸೌಲಭ್ಯ ಒದಗಿಸಬೇಕಾಗುತ್ತದೆ,

೧-೩೦ ಪಿ. ಎಂ.

ಇದನ್ನು ಜನರಲ್ಲಾಗಿ ಒಂದು ನಿರ್ಣಯದ ಮೂಲಕ ಎತ್ತಿದರೆ ಸರಿ ಹೋಗುತ್ತದೆ ಎನ್ನತಕ್ಕಂಥ ಅರ್ಥದಲ್ಲಿ ಹೇಳುತ್ತಾ, ಅವರು ಏನು ಹೇಳಿದ್ದಾರೆ ಎಂದರೆ,

> "ಕಾವೇರಿ ನೀರನ್ನು ಉಪಯೋಗ ಮಾಡುವುದರಲ್ಲಿ ಮಾನ್ಯ ಸದಸ್ಯರಿಗೆ ಎಷ್ಟು ಅಭಿಮಾನ ಮತ್ತು ಆಸಕ್ತಿ ಇದೆಯೋ ಸರ್ಕಾರಕ್ಕೂ ಅಷ್ಟೇ ಇದೆ. ಇದರಲ್ಲಿ ಅನುಮಾನ ಇಲ್ಲ. ಈ ದೃಷ್ಟಿಯಿಂದ ಈಗ ಸಭೆಯ ಮುಂದಿರುವ ರೂಪದಲ್ಲಿ ಈ ನಿರ್ಣಯವನ್ನು ಒಪ್ಪದಿದ್ದರೂ, ಮಾನ್ಯ ಸದಸ್ಯರು ನನ್ನ ಆಶ್ವಾಸನೆ ಮೇಲೆ ಇದನ್ನು ವಾಪಸ್ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ. ಸಂಪೂರ್ಣವಾಗಿ ಎಲ್ಲಾ ಸದಸ್ಯರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ."

ಎಂದು ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ್ದಾರೆ ಅದು ಕಡತದಲ್ಲಿದೆ. ಅಂದು, ಈ ವಿಚಾರದಲ್ಲಿ ಯಾರು ಯಾರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ ಅವೆಲ್ಲ ವಿಚಾರಗಳೂ ಕಡತದಲ್ಲಿ ಇದೆ, ಅವೆಲ್ಲವನ್ನೂ ಇಲ್ಲಿ ಹೇಳಬೇಕಾದ್ದು ಅನಾವಶ್ಯಕ. ಇದಾದ ಮೇಲೆ ಪುನಃ ಕೆಲಸ ಆಗಲಿಲ್ಲ. ಅಂದು ಏನೇನು ವಿಚಾರಗಳು ಚರ್ಚೆಯಾಗಿವೆ, ಅಂದು ಚರ್ಚೆಯಾಗಿರತಕ್ಕ ವಿಷಯಗಳಲ್ಲಿ ಪ್ರಮುಖವಾದ ವಿಷಯವೆಂದರೆ, ಹಿಂದೆ ಕರ್ನಾಟಕದಲ್ಲಿ ಅಂದರೆ, ಮೈಸೂರಿಗೆ ಬೇರೆ ಬೇರೆ ಕನ್ನಡ ಮಾತನಾಡತಕ್ಕ ಪ್ರದೇಶಗಳು ಎಂದಿತ್ತು ಅಂದರೆ ಹೊಸ ಮೈಸೂರು ಮತ್ತು ಹಳೆಯ ಮೈಸೂರು ಎಂದಿತ್ತು. ಹಳೆಯ ಮೈಸೂರು ಭಾಗಕ್ಕೆ ಅನ್ಯಾಯವಾಗಿದೆ ಎಂದು ಚರ್ಚೆಯಲ್ಲಿ ಭಾಗವಹಿಸಿದವರು ಹೇಳಿದ್ದಾರೆ, ಇವತ್ತು ಕಾವೇರಿಯನ್ನು ನೆನಸಿಕೊಂಡರೆ, ಅಂದು ಹೇಳಿರತಕ್ಕಂಥ ಮಾತು ಇಂದು ನಿಜ. ಹಳೆಯ ಮೈಸೂರು ಭಾಗದ ಜನತೆಗೆ ಅನ್ಯಾಯವಾಗಿದೆ. ಇದನ್ನು ಯಾರೂ ಕೂಡ ಅಲ್ಲಗಳೆಯುವುದಕ್ಕಾಗುವುದಿಲ್ಲ. ಇದಾದ ಮೇಲೆ ಎರಡು ವರ್ಷಕ್ಕೆ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಏನು ಆಶ್ವಾಸನೆ ಕೊಟ್ಟಿದ್ದರೋ ಆ ಆಶ್ವಾಸನೆ ಮೇಲೆ ಮಾನ್ಯ ದೇವೇಗೌಡರು ತಮ್ಮ ನಿರ್ಣಯವನ್ನು ವಾಪಸ್ ಪಡೆದರು. ಪುನಃ ಮತ್ತೆ ಇದೇ ವಿಷಯ

೧೯೬೬ ರಲ್ಲಿ. ಎರಡು ವರ್ಷವಾದ ಮೇಲೆ ಚರ್ಚೆಗೆ ಬರುತ್ತದೆ. ಅಂದಿನ ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರ ಸಂಪುಟದಲ್ಲಿ ಇಂದಿನ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರಪಾಟೀಲರು ನೀರಾವರಿ ಮತ್ತು ಲೋಕೋಪಯೋಗಿ ಸಚಿವರಾಗಿದ್ದರು, ಇವರಿಬ್ಬರ ಕಾಲದಲ್ಲೇ ಇದು ಚರ್ಚೆಯಾಗಿರುವುದು. ಇದೇನೂ ಅವರಿಗೆ ಹೊಸ ವಿಚಾರ ಅಲ್ಲ, ಶ್ರೀ ವೀರೇಂದ್ರ ಪಾಟೀಲರಿಗೆ ಕರ್ನಾಟಕದಲ್ಲಿರುವ ನೀರಾವರಿ ವಿಚಾರದಲ್ಲಿ ಯಾರೂ ಹೇಳಿಕೊಡಬೇಕಾದ್ದು ಅನಾವಶ್ಯಕ. ಏಕೆಂದರೆ ಅವರಿಗೆ ವಿಶಿಷ್ಟವೂ ಗೊತ್ತಿದೆ. ಕಾವೇರಿಯಿಂದ, ಈ ಭಾಗದ ಜನತೆಗೆ ಅನ್ಯಾಯವಾಗಿದೆ, ೧೯೬೬ ರಲ್ಲಿ ನಡೆದಿರತಕ್ಕ ಈ ಸಭೆಯ ನಡವಳಿಕೆಗಳ ಬಗ್ಗೆ ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ಪುನಃ ಮಾನ್ಯ ದೇವೇಗೌಡರು ಈ ತರಹದ ನಿರ್ಣಯವನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ.

"That this House urges upon the government to devise all ways and means of utilising fully before 1974 the waters of Cauvery basin".

ಇದರಲ್ಲಿ ಬಹಳ ಸ್ಪಷ್ಟವಾದ ಮಾತಿನಲ್ಲಿ ಹೇಳಿದ್ದಾರೆ. ನಮಗೆ ಲಭ್ಯವಾಗಿರತಕ್ಕ. ಉಪಯೋಗಿಸಿ ಕೊಳ್ಳತಕ್ಕ ನೀರು, ಎಷ್ಟು ದೊರೆಯುತ್ತದೋ ಅದನ್ನು ಸಂಪೂರ್ಣವಾಗಿ ಉಪಯೋಗಿಸಿ ಕೊಳ್ಳುವುದಕ್ಕೆ ಈ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆನ್ನುವ ನಿರ್ಣಯ. ಈ ನಿರ್ಣಯ ಬಂದಮೇಲೆ ಏನಾಯಿತು ? ಇದೇ ರೀತಿಯ ನಿರ್ಣಯ ಕೃಷ್ಣ ಬೇಸಿನ್ ಬಗ್ಗೆಯೂ ಆಗಿದೆ; ಈ ನಿರ್ಣಯ ಚರ್ಚೆಗೆ ಬಂದ ತಕ್ಷಣ, ಕಾವೇರಿ ಮತ್ತು ಕೃಷ್ಣ ಎರಡು ವಿಚಾರಗಳಲ್ಲೂ ಚರ್ಚೆಯಾಗಿದೆ. ಇವತ್ತು ಕೃಷ್ಣ ಬೇಸಿನ್ ವಿಚಾರದಲ್ಲಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ನಾವು ಕಾವೇರಿ ಬಗ್ಗೆ ಮಾತ್ರ ಇಂದು ಚರ್ಚೆ ಮಾಡುತ್ತಿದ್ದೇವೆ. ಈ ನಿರ್ಣಯವನ್ನು ಅಂದಿನ ಸಭೆ ಅವಿರೋಧವಾಗಿ ಒಪ್ಪಿದೆ.

ಅಂದಿನ ಗೌರವಾನ್ವಿತ ಸದಸ್ಯರು ಯಾರೂ ಕೂಡಾ ಈ ನಿರ್ಣಯಕ್ಕೆ ವಿರೋಧವನ್ನು ಸೂಚಿಸಲಿಲ್ಲ. ಇದು ಅವಿರೋಧವಾಗಿ ಈ ಸಭೆಯ ಒಪ್ಪಿಗೆಯನ್ನು ಪಡೆದಿದೆ. ನಾನು ಆ ನಡವಳಿಕೆಗಳ ಸ್ವಲ್ಪ ಭಾಗವನ್ನು ಅಂದರೆ ಕೊನೆಯ ಭಾಗವನ್ನು ಮಾತ್ರ ಓದುತ್ತೇನೆ.

"That this House urges upon the government to devise all ways and means of utilising fully before 1974 the waters of Cauvery basin."

"The motion was adopted unanimously with loud applause."

ಪ್ರಚಂಡ ಕರತಾಡನದ ಮಧ್ಯೆ ಈ ಸಭೆ ಅಂದು ಈ ನಿರ್ಣಯವನ್ನು ಒಪ್ಪುತ್ತದೆ. ಅಂದು ತಾರೀಖು, ಫ್ರೈಡೆ ೮, ಏಪ್ರಿಲ್ ೧೯೬೬, ಇಲ್ಲಿ ಪ್ರಕೃತವಾಗಿರತಕ್ಕಂಥಾದ್ದು ಎಂದರೆ ಇಂದು ಮುಖ್ಯಮಂತ್ರಿಗಳಾಗಿರತಕ್ಕಂಥ ಮಾನ್ಯ ವೀರೇಂದ್ರಪಾಟೀಲರು ಅಂದು ಏನು ಹೇಳಿದ್ದಾರೆ ಎಂಬುದು ಮಾನ್ಯ ವೀರೇಂದ್ರ ಪಾಟೀಲರು ಹೇಳಿದಂಥ ಮಾತನ್ನು ನಾನು ಪುನಃ ಉಲ್ಲೇಖಿಸುತ್ತಿದ್ದೇನೆ,

"೧೯೭೪ ರೊಳಗೆ ನಮ್ಮಲ್ಲಿರತಕ್ಕ ನೀರನ್ನು ಪೂರ್ತಿ ಉಪಯೋಗ ಮಾಡಿಕೊಳ್ಳಲು ಎಷ್ಟೆಷ್ಟು ಸ್ಕೀಮುಗಳನ್ನು ತಯಾರು ಮಾಡಿದ್ದಾರೋ ಅವುಗಳಲ್ಲಿ ಎಷ್ಟು ಪೆಂಡಿಂಗ್ ಬಿದ್ದಿದೆ ಎನ್ನುವುದನ್ನು ನೋಡಿ ಅವರು ವರದಿ ತಯಾರು ಮಾಡಿ ಸರಕಾರಕ್ಕೆ ತಿಳಿಸಿದರೆ ಅದರ ಮೇಲೆ ಯಾವುದನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಪರಿಶೀಲನೆ ಮಾಡಿ ಮಾಡಬಹುದು ಇದಕ್ಕೆ ಹಣದ ಕೊರತೆ ಏನೂ ಬರುವುದಿಲ್ಲ."
ಇದನ್ನು ದಯವಿಟ್ಟು ಸರ್ಕಾರದವರು ಗಮನಿಸಬೇಕು.

"ಇದಕ್ಕೆ ಹಣದ ಕೊರತೆ ಏನೂ ಬರುವುದಿಲ್ಲ, ನಮ್ಮಲ್ಲಿ ಎಷ್ಟೋ ಕಡೆಗಳಲ್ಲಿ ಹಣ ಉಳಿಯುವ ಸನ್ನಿವೇಶಗಳಿವೆ. ಆದುದರಿಂದ ಎಲ್ಲಿ ಡೈವರ್ಟ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ,"

ಇದನ್ನು ಈಗಿನ ಮುಖ್ಯಮಂತ್ರಿಗಳಾಗಿರತಕ್ಕಂಥವರು ಅಂದು ಆಡಿದ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರೇ, ೧೯೨೪ರಲ್ಲಿ ಮಾಡಿದಂಥ ಕರಾರು ೧೯೭೪ಕ್ಕೆ ಮುಗಿಯುತ್ತದೆ. ಆ ಕರಾರಿನ ಮೇರೆಗೆ ನಮಗೆ ಎಷ್ಟು ನೀರು ದೊರಕಬೇಕಾಗಿತ್ತೋ ಅಷ್ಟು ನೀರನ್ನು ೧೯೭೪ರೊಳಗೆ ಉಪಯೋಗಿಸಿಕೊಳ್ಳಬೇಕೆನ್ನತಕ್ಕಂಥಾದ್ದು ಈ ಎರಡು ಖಾಸಗಿ ನಿರ್ಣಯಗಳ ಮೂಲಕ ಒತ್ತಾಯ ಆಗಿರತಕ್ಕಂಥ ವಿಷಯಗಳು. ಅದನ್ನು ನಾವು ಉಪಯೋಗಿಸಿಕೊಂಡಿದ್ದೇವೆಯೋ ? ೧೯೭೪ರೊಳಗೆ ಎಷ್ಟು ನೀರು ಬಳಕೆಯಾಗಬೇಕಾಗಿತ್ತೋ ಅಷ್ಟು ನೀರನ್ನು ನಾವು ಇವತ್ತಿನ ದಿವಸ ಉಪಯೋಗಿಸಿಕೊಂಡಿದ್ದೇವೆಯೋ ? ನಾನು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅಂದು ಯಾರು ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳಾಗಿದ್ದರು ಅವರು ಈ ಮಾತನ್ನು ಹೇಳಿದ ಮೇಲೆ ಅವರೇ ಈ ರಾಜ್ಯದ ಮುಖ್ಯ ಮಂತ್ರಿಗಳಾದರು. ನಂತರ ಈ ಬಗ್ಗೆ ಏನು ಅವರ ಕೊಡುಗೆ ? ಅವರಿಂದ ಏನು ಕೊಡುಗೆ ಎಂದು ನಾನು ಇಲ್ಲಿ ಪ್ರಶ್ನೆ ಮಾಡಬೇಕಾಗುತ್ತದೆ. ಇದು ಆನಂತರ ಅಂದು ಯಾವ ಪಕ್ಷದ ಸರಕಾರ ಇತ್ತೋ ಆ ಸರಕಾರ ಕಳೆದ ೬ ತಿಂಗಳಿಂದ ಇಲ್ಲಿ ಇದೆ. ೧೯೭೭ ರಿಂದ ೭೯ ರ ವರೆಗೆ ಬಿಟ್ಟರೆ ಅದೇ ಸರಕಾರ ಕೇಂದ್ರದಲ್ಲಿ ಅಧಿಕಾರದಲ್ಲಿತ್ತು. ರಾಜ್ಯದಲ್ಲಿ ೧೯೮೩ರ ವರೆಗೆ ಅದೇ ಪಕ್ಷದ ಸರಕಾರ ಆಡಳಿತದಲ್ಲಿತ್ತು. ಅಂದು ಸರಕಾರಗಳನ್ನು ನಡೆಸಿದವರಿಗೆ ಇದು ಗೊತ್ತಿರಲಿಲ್ಲವೇ? ಈ ರೀತಿಯಾದ ಅನಾಹುತ ಕರ್ನಾಟಕ ರಾಜ್ಯಕ್ಕೆ ಆಗುತ್ತದೆ, ಐದು ಜಿಲ್ಲೆಗಳಲ್ಲಿರುವ ಒಂದು ಕೋಟಿ ಜನಗಳ ಮೇಲೆ ಇದು ದುಷ್ಪರಿಣಾಮ ಬೀರುತ್ತದೆ ಎಂದು ಗೊತ್ತಿರಲಿಲ್ಲವೇ ? ಈ ಬಗ್ಗೆ ಇವರು ನಡೆಸಿದಂತಹ ಕಾರ್ಯಕ್ರಮ ಏನು ?

ಎಷ್ಟು ಎಕರೆ ಭೂಮಿ ನೀರಾವರಿಯಾಗುತ್ತದೆ ? ನಮ್ಮ ರಾಜ್ಯದಲ್ಲಿರತಕ್ಕಂಥ ನೀರಾವರಿ ಯೋಜನೆಗಳ ಸ್ಪಷ್ಟ ಚಿತ್ರವಿರತಕ್ಕಂಥ ಒಂದು ವರದಿಯ ಪುಸ್ತಕ ನನ್ನ ಮುಂದೆ ಇದೆ. ನಾನು ಎಲ್ಲವನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ ಇದನ್ನು ನೋಡಿದಾಗ ಸ್ವತಃ ನಾನು ಒಬ್ಬ ರೈತನಾಗಿರುವುದರಿಂದ ನನ್ನ ರಕ್ತ ಕುದಿಯುತ್ತಿದೆ, ಎಷ್ಟೊಂದು ಅನ್ಯಾಯ ಈ ರಾಜ್ಯದ ರೈತನಿಗೆ ಸತತವಾಗಿ ಸರ್ಕಾರಗಳನ್ನು ನಡೆಸಿದಂತಹವರು ಮಾಡಿದ್ದಾರೆಂದು ಇದರಿಂದ ಗೊತ್ತಾಗುತ್ತದೆ. ಒಂದು ಕಡೆ ಚರ್ಚೆ ಮಾತನ್ನು ಹೇಳುವುದು, ಮತ್ತೊಂದು ಕಡೆ..... ......

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷಿಣೀಯವರೇ, ಮಾನ್ಯ ಸದಸ್ಯರಾದ ಶ್ರೀ ಬೈರೇಗೌಡರು ಕಾವೇರಿ ನದಿ ನೀರಿನ ಇತಿಹಾಸವನ್ನು ಪ್ರಾಸ್ತಾವಿಕವಾಗಿ ಪ್ರಸ್ತಾಪ ಮಾಡುತ್ತಾ ೧೯೬೬ ರ ಖಾಸಗೀ ನಿರ್ಣಯವನ್ನು ಈ ಸಭೆಯ ಗಮನಕ್ಕೆ ತಂದು ಅಂದಿನ ನೀರಾವರಿ ಮಂತ್ರಿಗಳೇ ಇಂದು ಮುಖ್ಯ ಮಂತ್ರಿಗಳಾಗಿದ್ದಾರೆ, ಅವರ ಕೊಡುಗೇ ಏನು ಎಂದು ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ನಾನು ಒಂದು ಕ್ಲಾರಿಫಿಕೇಶನ್ ಕೊಡುವುದಕ್ಕೆ ಇಷ್ಟಪಡುತ್ತೇನೆ. ೧೯೬೮ ರಲ್ಲಿ ಕೇಂದ್ರದ ನೆರವು ಇಲ್ಲದೆ ಕೇಂದ್ರದ ಮಂಜೂರಾತಿ ಇಲ್ಲದೆ ಹಾರಂಗಿ ಮತ್ತು ಹೇಮಾವತಿ ಯಂತಹ ಬೃಹತ್ ಯೋಜನೆಗಳನ್ನು ಪ್ರಾರಂಭ ಮಾಡಿದ್ದು ಅಷ್ಟೇ ಅಲ್ಲದೆ ಅವರು ಅಧಿಕಾರದಲ್ಲಿರುವವರೆವಿಗೂ ಪ್ರಗತಿಪರವಾದ ಕೆಲಸ ಸಹ ನಡೆದಿದೆ ಎನ್ನುವ ಮಾತನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ,

ಶ್ರೀ ಸಿ. ಬೈರೇಗೌಡ.—ಇಲ್ಲವೆಂದು ನಾನು ಹೇಳಲಿಲ್ಲ. ಹಾರಂಗಿ ಬಗ್ಗೆ ಅಂಕಿ ಅಂಶಗಳನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಹಾರಂಗಿ ಆಗಲಿ ಅಥವಾ ಹೇಮಾವತಿಯಲ್ಲಿ ಆಗಲಿ, ನೀರನ್ನು ಮಾತ್ರ ನಿಲ್ಲಿಸಿದ್ದೀರಿ. ಆದರೆ ಇದರಿಂದ ಎಷ್ಟು ಜನ ರೈತರಿಗೆ ಅನುಕೂಲವಾಗಿದೆ ? ಎಷ್ಟು ಎಕರೆಗಳಿಗೆ ನೀರಾವರಿ ಆಗಿದೆ ?..........

ಉಪಾಧ್ಯಕ್ಷಿಣೀಯವರು.—ತಾವು ಈಗ ಕಾವೇರಿ ವಿಷಯಕ್ಕೆ ಬನ್ನಿ.

ಶ್ರೀ ಸಿ. ಬೈರೇಗೌಡ.—ಇದು ಸಹ ಕಾವೇರಿ ವಿಷಯವೇ ?

ಶ್ರೀ ಎಲ್. ಆರ್. ಶಿವರಾಮೇಗೌಡ.—ತಾವು ವೀರೇಂದ್ರಪಾಟೀಲರ ಕಥೆ ಹೇಳುವುದು ಬೇಡ. ದೇವೇಗೌಡರ ಮತ್ತು ನಿಮ್ಮ ಕಥೆ ಹೇಳಿ ಸಾಕು.

ಶ್ರೀ ಸಿ. ಬೈರೇಗೌಡ.— ನಿಮ್ಮ ಕಥೆ ಮತ್ತು ನೀವು ಹುಡುಕಿಕೊಂಡು ಹೋಗಿರುವವರ ಕಥೆ ಸಹ ಹೇಳುತ್ತೇನೆ. ಮಾನ್ಯ ಲೋಕೋಪಯೋಗಿ ಸಚಿವರು ಹೇಳಿದಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾರಂಗಿ ಮತ್ತು ಹೇಮಾವತಿಗಳಲ್ಲಿ ನೀರು ಇದೆ. ಎರಡೂ ಯೋಜನೆಗಳಲ್ಲಿ ನೀರು ಇದೆ. ಆ ನೀರನ್ನು ತಾವೇನು ಮಾಡಿದ್ದೀರಿ ಎನ್ನುವುದು ಇಲ್ಲಿ ಮುಖ್ಯ ಪ್ರಶ್ನೆ. ಇದು ಇವತ್ತಿನ ದಿವಸ ಚರ್ಚೆ ಮಾಡತಕ್ಕಂಥ ವಿಷಯವಲ್ಲ. ಅದಕ್ಕೆ ನಾನು ಮೊದಲೇ ಎಲ್ಲಾ ವಿವರಕ್ಕೆ ಹೋಗುವುದಿಲ್ಲವೆಂದು ಹೇಳಿದ್ದು. ನಾನು ಈ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ಹೇಳಿದರೂ ಅದು ರಾಜ್ಯದ ಹಿತಕ್ಕೆ ಧಕ್ಕೆಯಾಗಬಹುದೇನೋ ಎನ್ನುವ ಭಯ ನನಗೆ ಇರುವುದರಿಂದ ನಾನು ಯಾವ

ಒಂದು ವಿವರಕ್ಕೂ ಈಗ ಹೋಗುವುದಿಲ್ಲ. ಇಷ್ಟು ಮಾತ್ರ ನಾನು ಮಾನ್ಯ ಲೋಕೋಪಯೋಗಿ ಸಚಿವರಿಗೆ ಹೇಳುತ್ತಾ ಇಂದು ನಾವು ಯಾವ ಪರಿಸ್ಥಿತಿಯಲ್ಲಿ ಇದ್ದೇವೆಂದರೆ ಕಾವೇರಿ ನದಿ ವಿಷಯ ತೆಗೆದುಕೊಂಡರೆ ನಾವು ಇಂದು ವಿನಾಶದ ಅಂಚಿನಲ್ಲಿ ಇದ್ದೇವೆ. ಈ ಮಾತನ್ನು ನಾನು ಹೇಳಿದ್ದಲ್ಲ. ನಿಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಯಾವಾಗ ಕೇಂದ್ರ ಸರ್ಕಾರದವರು ನ್ಯಾಯ ಪಂಚಾಯಿತಿಯನ್ನು ರಚನೆ ಮಾಡಿದರೋ ಆಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮಾತೇನೆಂದರೆ, ಏನೋ ಪಿತೂರಿ ನಡೆದಿದೆ ಎಂದು ಅವರು ಹೇಳಿದ್ದಾರೆ. ಮಾನ್ಯ ಕಾನೂನು ಸಚಿವರು ಈ ಬಗ್ಗೆ ಬಹಳ ತೀವ್ರವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಲೋಕೋಪಯೋಗಿ ಸಚಿವರು ನಾವು ಒಂದು ಹನಿ ನೀರನ್ನು ಸಹ ಬಿಡುವುದಿಲ್ಲ ಎಂದು ಹೇಳಿದ್ದಾರೆ ನಾವು ಯಾವ ದೇಶದಲ್ಲಿ ಇದ್ದೇವೆ ಸ್ವಾಮಿ? ಇದು ಭಾರತ ದೇಶ. ಈ ದೇಶದಲ್ಲಿರುವವರಿಗೆ ಎಲ್ಲರಿಗೂ ಒಂದೇ ಕಾನೂನು, ಕರ್ನಾಟಕ ರಾಜ್ಯಕ್ಕೆ ಬೇರೆ ಕಾನೂನು ಇಲ್ಲ. ತಮಿಳುನಾಡಿಗೆ ಬೇರೆ ಕಾನೂನು ಇಲ್ಲ, ಮತ್ತೊಂದು ರಾಜ್ಯಕ್ಕೆ ಬೇರೆ ಕಾನೂನು ಇಲ್ಲ, ಇಡೀ ಭಾರತ ದೇಶಕ್ಕೆ ಒಂದೇ ಕಾನೂನು ಇರುವುದು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಬಹುಶಃ ತಾವು ರಾಂಗ್ ಇಂಟರಪ್ರಿಟ್ ಮಾಡುತ್ತಿದ್ದೀರಿ ನಮ್ಮ ಪಾಲಿನ ಒಂದು ಹನಿ ನೀರನ್ನು ಬೇರೆಯವರಿಗೆಬಿಟ್ಟುಕೊಡುವುದಕ್ಕೆ ನಾನು ಸಿದ್ಧನಿಲ್ಲವೆಂದು ಹೇಳಿದ್ದೇನೆಯೇ ಹೊರತು ಕಾನೂನನ್ನು ಮೀರಿ ಕೆಳಗಡೆ ಇರತಕ್ಕಂಥ ರಾಜ್ಯದವರಿಗೆ ನೀರೇ ಕೊಡುವುದಿಲ್ಲವೆಂದು ನಾನು ಹೇಳಿಲ್ಲ.

ಶ್ರೀ ಸಿ. ಬೈರೇಗೌಡ.—ಎಷ್ಟು ಕೊಟ್ರೋ ಅದು ಪಾಲೇ ಆಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅದರ ಬಗ್ಗೆ ವೈಜ್ಞಾನಿಕವಾದ ನಿರ್ಣಯ ಇದೆಯಲ್ಲಾ ?

ಶ್ರೀ ಸಿ. ಬೈರೇಗೌಡ.—ವೈಜ್ಞಾನಿಕವಾಗಿ ಏನಾಗಿದೆ ಎಂಬುದರ ಬಗ್ಗೆ ನಾನು ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ನನ್ನದೇ ಆದ ಅಭಿಪ್ರಾಯ ಇದೆ. ಅದನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—೧೯೮೩ ನೇ ಇಸವಿಯಲ್ಲಿ ಮೈಸೂರಿನಲ್ಲಿ ಸೇರಿದಂಥ ಸಚಿವ ಸಂಪುಟದ ಸಭೆಯಲ್ಲಿ ಒಂದು ತೀರ್ಮಾನವನ್ನು ಈ ಬಗ್ಗೆ ಮಾಡಿದರು. ಹೇಮಾವತಿ ಅಣೆಕಟ್ಟಿನಲ್ಲಿರತಕ್ಕ ನೀರನ್ನು ಹೇಗೆ ನೀರಾವರಿಗೆ ಬಳಸಿಕೊಳ್ಳಬೇಕೆಂದು ಆ ದಿವಸ ತೀರ್ಮಾನ ಮಾಡಿದ್ದರು. ಆ ಸಂದರ್ಭದಲ್ಲಿ ನಿಮ್ಮ ಪಕ್ಷದ ನಾಯಕರಾಗಿರುವವರೇ ನೀರಾವರಿ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದರು, ಆ ವರ್ಷಕ್ಕೆ ೫೦ ಸಾವಿರ ಎಕರೆಗೆ ನೀರಾವರಿ ಒದಗಿಸಿಕೊಡುವ ಕೆಲಸವನ್ನು ಮಾಡಿದ್ದಿದ್ದರೆ ಇದುವರೆಗೆ ೬ ಲಕ್ಷ ಎಕರೆಗೆ ನೀರು ಕೊಡುವುದಕ್ಕೆ ಸಾಧ್ಯವಾಗುತ್ತಿತ್ತು, ಆಗ ತಾವು ಎಷ್ಟು ಎಕರೆಗೆ ನೀರು ಕೊಟ್ಟಿದ್ದೀರೆಂದು ದಯವಿಟ್ಟು ಹೇಳಿ ನೋಡೋಣ.

ಉಪಾಧ್ಯಕ್ಷಿಣಿಯವರು.—ತಮ್ಮ ಭಾಷಣವನ್ನು ಮುಂದುವರಿಸಿ. ಇನ್ನು ೫ ನಿಮಿಷಗಳ ಸಮಯ ಮಾತ್ರ ಇದೆ.

ಶ್ರೀ ಸಿ. ಬೈರೇಗೌಡ.—ಸಮಯ ಮಾತ್ರ ನಿರ್ಧಾರ ಮಾಡುವುದಕ್ಕೆ ಹೋಗಬೇಡಿ.

ಉಪಾಧ್ಯಕ್ಷಿಣಿಯವರು.—ಇನ್ನು ೫ ನಿಮಿಷ ಮಾತ್ರ ಮಾತನಾಡಿ.

ಶ್ರೀ ಸಿ. ಬೈರೇಗೌಡ.—ಸಮಯದ ಮಿತಿ ಹಾಕಬೇಡಿ ಎಂದು ಮಾನ್ಯ ಅಧ್ಯಕ್ಷಿಣಿಯವರಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು.—ಆದಷ್ಟು ಬೇಗ ಮುಗಿಸಿ.

ಶ್ರೀ ಸಿ. ಬೈರೇಗೌಡ.—ಪ್ರಯತ್ನ ಮಾಡುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹಿಂದೆ ಲೋಕೋಪಯೋಗಿ ಸಚಿವರಾಗಿದ್ದರು, ಅವರು ನೀರಾವರಿ ಸಚಿವರಾಗಿರಲಿಲ್ಲವೆಂದು ನನ್ನ ಭಾವನೆ, ೧೯೮೩ ರಲ್ಲಿ ಏನಾಯಿತೆಂದು ಹೇಳುವುದಕ್ಕೆ ನಾನು ಬರುವವನಿದ್ದೇನೆ, ಅಲ್ಲಿಂದ ಎಷ್ಟೆಷ್ಟು ಎಕರೆ ನೀರಾವರಿಯಾಯಿತು, ಏಕೆ ಆಗಲಿಲ್ಲವೆಂದು ಹೇಳುವವನಿದ್ದೇನೆ. ಈ ಅಂಕಿ ಅಂಶಗಳನ್ನು ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ, ಈಗ ಅಂಕಿ ಅಂಶಗಳಿಗೆ ನಾನು ಹೋಗುವುದಿಲ್ಲವೇಕೆಂದರೆ ಕಾರಣಗಳನ್ನು ಹೇಳಿದ್ದೇನೆ. ಏಕೆಂದರೆ, ರಾಜ್ಯದ ಹಿತದೃಷ್ಟಿಯಿಂದ ಆಕಸ್ಮಾತ್ ಏನಾದರೂ ತೊಂದರೆಯಾಗಬಹುದೆನ್ನುವ ಕಾರಣದಿಂದ ಅಂಕಿ ಅಂಶಗಳನ್ನು ನಾನು ಹೇಳುತ್ತಿಲ್ಲ. ಎಲ್ಲಾ ಅಂಕಿ ಅಂಶಗಳು ನನ್ನಲ್ಲಿವೆ. ಮಾನ್ಯ ತಿಮ್ಮಪ್ಪನವರೂ ಏನೇನು ಕೇಳುತ್ತಾರೋ ಆ ಅಂಕಿ ಅಂಶಗಳನ್ನೆಲ್ಲಾ ಬೇಕಾದರೆ ಸಭೆಯ ಮುಂದೆ ಇಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳೂ ಸಹ ಅಂಕಿ ಅಂಶಗಳನ್ನು

ತಿಳಿಸುತ್ತೇನೆಂದು ಹೇಳಿದ್ದರು. ಅದನ್ನು ತಿಳಿಸಿದರೆ ನಮಗೂ ಒಳ್ಳೆಯದು. ಅಂಕಿ ಅಂಶಗಳನ್ನು ಅವರು ಸದನದ ಮುಂದೆ ಇಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷಣಿಯವರೆ, ಈಗ ಪ್ರಸ್ತುತ ಇರತಕ್ಕಂಥ ವಿಚಾರವೆಂದರೆ, ೧೯೭೩–೭೪ ರ ಸುಮಾರಿನಲ್ಲಿ ತಮಿಳುನಾಡಿನ ರೈತರು ಒಂದು ದಾವೆಯನ್ನು ಸುಪ್ರೀಮ್ ಕೋರ್ಟ್‌ನಲ್ಲಿ ಹೂಡುತ್ತಾರೆ ಅದಕ್ಕಿಂತ ಮೊದಲು ತಮಿಳುನಾಡು ಸರ್ಕಾರ ಸುಪ್ರೀಮ್ ಕೋರ್ಟ್‌ಗೆ ಹೋಗುತ್ತದೆ. ಆದರೆ ಅಂದು ಇದ್ದಂಥ ಕೆಲವು ಪರಿಸ್ಥಿತಿಯ ಕಾರಣಗಳಿಂದ ಆ ದಾವೆಯನ್ನು ಅವರು ವಾಪಸ್ ಪಡೆಯುತ್ತಾರೆ. ರೈತರು ಸಹ ವಾಪಸ್ ಪಡೆಯುತ್ತಾರೆ. ಅದಕ್ಕೆ ಮುಖ್ಯಕಾರಣವೆಂದರೆ ಎಮರ್‌ಜೆನ್ಸಿ ಇದ್ದುದರಿಂದ ಮೂಲಭೂತ ಹಕ್ಕುಗಳು ಇಲ್ಲದೇ ಇರುವುದರಿಂದ ಅದು ವಜಾ ಆಗಬಹುದು ಎನ್ನುವ ಕಾರಣಕ್ಕೋಸ್ಕರ ಅದನ್ನು ವಾಪಸ್ ಪಡೆಯುತ್ತಾರೆ. ಪುನಃ ೮೩ ರಲ್ಲಿ ತಮಿಳುನಾಡು ರೈತರು ತಮ್ಮ ಸಂಘದ ಮೂಲಕ ಸುಪ್ರೀಮ್ ಕೋರ್ಟ್‌ನಲ್ಲಿ ದಾವೆಯನ್ನು ಹೂಡುತ್ತಾರೆ, ಇಲ್ಲಿ ನಾವು ಗಮನಿಸಬೇಕಾದ ಅಂಶ ಏನೆಂದರೆ, ಅದು ಸುಪ್ರೀಮ್ ಕೋರ್ಟ್‌ನ ತೀರ್ಮಾನದಲ್ಲಿ ಉಲ್ಲೇಖವಾಗಿದೆ. ಅದನ್ನು ಇಲ್ಲಿ ಓದತಕ್ಕುದ್ದು ಸೂಕ್ತವೆಂದು ಅನ್ನಿಸುತ್ತದೆ.

> "The State of Tamilnadu filed an affidavit in this court on 6th May 1987 wherein it not only supported the contention of the petitioners to effectively join the dispute by adopting the same of the petitioner."

ರೈತರು ಏನು ತಮ್ಮ ಮನವಿಯನ್ನು ನ್ಯಾಯಾಲಯದ ಮುಂದಿಡುತ್ತಾರೆ, ಸರಕಾರ ಕೂಡ ಅದನ್ನು ವಾದ ಎನ್ನುವುದನ್ನು ಒಪ್ಪಿಕೊಂಡು ಎಲ್ಲಾ ವಿಧದಲ್ಲಿಯೂ ಕೂಡ ಕೇಸ್‌ನ್ನು ನಡೆಸತಕ್ಕಂಥ ಕಾರ್ಯವನ್ನು ಮಾಡುತ್ತದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದ ರೈತರು ಸಹ ಸುಪ್ರೀಮ್ ಕೋರ್ಟ್‌ನಲ್ಲಿ impleading application ಅರ್ಜಿಯನ್ನು ಹಾಕುತ್ತಾರೆ. ೨೬–೧೦–೮೮ ರಲ್ಲಿ ನಮ್ಮ ರಾಜ್ಯದ ರೈತರು ಸಹ ಇಂಪ್ಲೀಡಿಂಗ್ ಅರ್ಜಿಯನ್ನು ಹಾಕುತ್ತಾರೆ. ಅದು ೨೭–೧೦–೮೮ ರಲ್ಲಿ ಕೋರ್ಟ್ ಒಪ್ಪಿಕೊಳ್ಳುವಂತಾಗುತ್ತದೆ. ಅದರಲ್ಲಿ ರೈತರು ಪಾರ್ಟಿಯಾಗಿ ಒಪ್ಪಿಕೊಳ್ಳುತ್ತಾರೆ. ಇಲ್ಲಿ ನಾನು ಹೇಳತಕ್ಕಂಥಾದ್ದು ಏನೆಂದರೆ ರೈತರು ಸುಪ್ರೀಮ್‌ಕೋರ್ಟ್‌ಗೆ ಹೋಗಬೇಕಾಗಿದ್ದರೆ ಅದಕ್ಕೆ ಕಾರಣಕರ್ತರು ಯಾರು ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ಅದರ ವಿವರಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಈ ಬಗ್ಗೆ ಬೇರೆಯವರ ಪ್ರೋತ್ಸಾಹ ಇತ್ತು ಎಂದು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಖೈರಾಗಿ ಈ ಸರಕಾರವು ಅಧಿಕಾರಕ್ಕೆ ಬಂದ ಮೇಲೆ ಇದು ಕೋರ್ಟ್ ಮುಂದೆ ಬರುತ್ತದೆ. ನಮ್ಮ ಸರಕಾರ ಎಷ್ಟು ಉಪೇಕ್ಷೆಯನ್ನು ನೀರಾವರಿ ವಿಚಾರದಲ್ಲಿ, ಅದರಲ್ಲಿಯೂ ಕಾವೇರಿ ಜಲದ ವಿಚಾರದಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಖಂಡಿತಾ ಮಾಡುತ್ತದೆ ಎಂದು ಹಲವಾರು ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಆದರೆ ಈ ಬಗ್ಗೆ ಮೊದಲಿನಿಂದಲೂ ನಮ್ಮ ಸರಕಾರ ಸಕಾಲಿಕ ಕ್ರಮಗಳನ್ನು ಕೈಗೊಂಡಿದೆ ಎಂದು ಸರ್ಕಾರದವರು ಹೇಳಿದ್ದಾರೆ. ಈಗ ನಮ್ಮ ಮುಖ್ಯಮಂತ್ರಿಗಳಿಗೆ ಈ ಒಂದು ಸಮಸ್ಯೆಯು ಅರಿವಾಗುತ್ತದೆ. ಅವರು ಎಲ್ಲಾ ಪಕ್ಷದ ಮುಖಂಡರುಗಳನ್ನು ಕರೆಯುತ್ತಾರೆ. ಇದರ ಬಗ್ಗೆ ಚರ್ಚಿಸುತ್ತಾರೆ. ಅವರು ಡೆಲ್ಲಿಗೆ ಹೋದಾಗ ಅವರಿಗೆ ಈ ಬಗೆಗಿನ ಪರಿಸ್ಥಿತಿಯು ಅರ್ಥವಾಗುತ್ತದೆ. ನಾವು ಎಲ್ಲಿ ಈ ವಿಚಾರದಲ್ಲಿ ಎಡವಿದ್ದೇವೆ ಎಂದು ಅರ್ಥ ಮಾಡಿಕೊಳ್ಳುತ್ತಾರೆ. ಹೀಗೆ ಅರ್ಥವಾದ ಮೇಲೆ ತರಾತುರಿಗೆ ಮುಂದಾಗುತ್ತಾರೆ. ಇಂಥ ಸಮಯದಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಸರಕಾರದವರು ಹೊಣೆಗಾರರಾಗಬೇಕಾಗುತ್ತದೆ ಮತ್ತು ಜವಾಬ್ದಾರರಾಗಬೇಕಾಗುತ್ತದೆ. ಈ ಒಂದು ಜವಾಬ್ದಾರಿಯನ್ನು ಎಲ್ಲರ ಮೇಲೆ ಹೊರಿಸಿದರೆ ಸರಿ ಹೋಗುತ್ತದೆ ಎಂದು ಭಾವಿಸಿ ನಮ್ಮನ್ನೆಲ್ಲಾ ಮಾನ್ಯ ಮುಖ್ಯಮಂತ್ರಿಯವರು ಕರೆಸಿದರು. ನಾವು ಕೂಡ ಸರಕಾರಕ್ಕೆ ಬೇಷರತ್ತಾದ ಬೆಂಬಲವನ್ನು ಕೊಟ್ಟಿದ್ದೇವೆ. ಈ ವಿಚಾರದಲ್ಲಿ ಕೈಗೊಳ್ಳುವ ಯಾವುದೇ ಕ್ರಮಕ್ಕೆ ನಮ್ಮ ಬೆಂಬಲವನ್ನು ಕೊಡುತ್ತೇವೆಂದು ಹೇಳಿದ್ದೇವೆ. ನಮ್ಮ ಬೆಂಬಲ ನಿಮಗೆ ಇದೆ ಎಂದು ಎಲ್ಲರೂ ಒಕ್ಕೊರಲಿಂದ ಹೇಳಿದ್ದೇವೆ. ಈ ಕುರಿತು ನಾವೆಲ್ಲರೂ ಒಟ್ಟಾಗಿ ಹೋಗೋಣ, ನ್ಯಾಯವನ್ನು ದೊರಕಿಸಿಕೊಳ್ಳೋಣ ಎಂದು ಸೂಚಿಸಿದ್ದೇವೆ. ಆದರೆ ಆ ಸಭೆಯಲ್ಲಿ ಸರಕಾರದ ಒಂದು ನಿರ್ದಿಷ್ಟವಾದಂಥ ನಿಲುವು ಇರಲಿಲ್ಲ ಎಂದು ಹೇಳಬಯಸುತ್ತೇನೆ,

ಈ ರೀತಿ ಮಾಡಬೇಕೆಂದಿದ್ದೇವೆ, ಇದು ನಮ್ಮ ನಿರ್ದಿಷ್ಟ ನಿಲುವು ಎಂದು ಸರ್ಕಾರದವರು ನಮಗೆ ಹೇಳಲಿಲ್ಲ. ನಮ್ಮನ್ನೇ ಕೇಳಿದರು, ನೀವು ಏನು ಹೇಳುತ್ತೀರೋ ಅದನ್ನು ಮಾಡುತ್ತೇವೆ ಎಂದರು

ಅದೇ ತೋರಿಸುತ್ತದೆ, ಸರ್ಕಾರಕ್ಕೆ ಎಷ್ಟು ಅನಾದರ ಇದರಲ್ಲಿ ಇದೆ ಎಂದು. ಆಮೇಲೆ ನಾವು ಲ್ಲಿಗೆ: ಹೋದೆವು. ಸುಪ್ರೀಂ ಕೋರ್ಟಿನ ತೀರ್ಪಿನ ಒಂದು ಪ್ಯಾರವನ್ನು ಇಲ್ಲಿ ಉಲ್ಲೇಖ ಮಾಡುತ್ತೇನೆ:—

> "The State of Karnataka by filing several affidavits has opposed the maintainability of the pettion as also the tenability of the plea for relief. The Union Govt. in the Ministry of Water Resources has also opposed the maintainability of the application. Reliance has been placed on Section 117 of the Act to which we shall presently make a reference."

ಅಂದರೆ ಈ ಮೊಕದ್ದಮೆ ಯಾವುತ್ತು ಸುಪ್ರೀಂಕೋರ್ಟ್ ಮುಂದೆ ಬಂತೋ ಆವತ್ತಿನಿಂದ ಕೇಂದ್ರ ಸರ್ಕಾರದ ನಿಲುವು ಇದು ಮೇಂಟೇನಬಲ್ ಅಲ್ಲ ಎಂದು: ಇದು ನ್ಯಾಯಾಲಯದಲ್ಲಿ ತೀರ್ಮಾನ ಮಾಗುವಂಥದಲ್ಲವೆಂಬ ವಾದವನ್ನು ಅವರು ಮಾಡಿದ್ದಾರೆ. ಇದು ದಾಖಲೆಯಲ್ಲಿದೆ. ಆದರೆ ಮೊದಲಿನಿಂದ ಕೇಂದ್ರ ಏನು ನಿಲುವು ತೆಗೆದುಕೊಂಡು ಬಂದಿತ್ತೋ ಅದಕ್ಕೆ ತದ್ವಿರುದ್ಧವಾಗಿ ಕೊನೆಯಲ್ಲಿ ನಿಲುವು ತಾಳಿ ಕೇಂದ್ರ ನಮ್ಮ ರಾಜ್ಯಕ್ಕೆ ಮತ್ತು ನಮ್ಮ ರಾಜ್ಯದ ರೈತರಿಗೆ ಅನ್ಯಾಯ ಮಾಡಿತು ಕೇಂದ್ರ ರಾಜ್ಯಕ್ಕೆ ಹೇಗೆ ಅನ್ಯಾಯ ಮಾಡಿತು ಎಂಬುದಕ್ಕೆ ಈ ಜಜ್‌ಮೆಂಟಿನಲ್ಲಿ ಹೇಳಿರುವ ಒಂದೇ ಒಂದು ವಾಕ್ಯ ಹೇಳುತ್ತೇನೆ :

> "The Central G vernment did not want to undertake any further negotiations and left the matter be disposed off by the Court."

ನಿಮಗೆ ಅದರಲ್ಲಿ ಅಧಿಕಾರವಿಲ್ಲ ಎನ್ನುವ ವಾದವನ್ನು ಹೂಡಿದ ಕೇಂದ್ರ ಸರ್ಕಾರ ಇವತ್ತು ನೀವು ಏನು ಹೇಳಿದರೂ ಅದನ್ನು ಕೇಳುತ್ತೇವೆ ಎಂದು ಸುಪ್ರೀಂ ಕೋರ್ಟಿಗೆ ಹೇಳುವ ನಿಲುವು ತೆಗೆದುಕೊಂಡಿದ್ದು ಕರ್ನಾಟಕಕ್ಕೆ ಮಾಡಿದ ಅನ್ಯಾಯವಲ್ಲವೇ ? ೧೯೨೪ನೇ ಇಸವಿಯಿಂದ ತಮಿಳುನಾಡು ಮತ್ತು ಅಂದಿನ ಮೈಸೂರು ಸಂಸ್ಥಾನದ ನಡುವೆ ಆದ ಕಾವೇರಿ ಅಗ್ರಿಮೆಂಟ್ ನೋಡಿ ; ಅದರಲ್ಲಿ ಪ್ರತಿ ಪ್ಯಾರವೂ ದಿ ಗವರ್ನಮೆಂಟ್ ಆಫ್ ಮೈಸೂರು ಅಗ್ರೀಸ್, ದಿ ಗವರ್ನಮೆಂಟ್ ಆಫ್ ಮೈಸೂರು ಅಗ್ರೀಸ್ ಎಂದೇ ಇದೆ. ಇದು ಎಂಥಾ ವಾತಾವರಣದಲ್ಲಿ ಅಗ್ರಿಮೆಂಟ್ ಆಗಿರಬಹುದು ನೀವೇ ಯೋಚಿಸಿ. ಅಂತಹ ಅನ್ಯಾಯ ಆದಂತಹ ಪರಿಸ್ಥಿತಿಯಲ್ಲಿ ಕೇಂದ್ರದ ಹೊಣೆಗಾರಿಕೆ ಎಂದರೆ, ಅದನ್ನು ಸರಿಪಡಿಸುವುದಾಗಿರಬೇಕಾಗಿತ್ತು. ಇರಬಹುದು, ತಮಿಳು ನಾಡಿನ ವಿಧಾನಸಭೆ ಇನ್ನು ಮುಂದೆ ಮಾತುಕತೆಗೆ ಬರುವುದಿಲ್ಲ ಎಂದು ತೀರ್ಮಾನ ಮಾಡಿರಬಹುದು.

೨-೦೦ ಪಿ. ಎಂ.

ಆದರೆ ಈಗಿರತಕ್ಕ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟನ್ನು ಅಮೆಂಡ್ ಮಾಡಬೇಕೆನ್ನತಕ್ಕ ಆಲೋಚನೆ ಕೂಡ ಇದೆ. ಇದು ಬರೀ ಕರ್ನಾಟಕದ ವಿಚಾರವಲ್ಲ, ಇಡೀ ದೇಶಾದ್ಯಂತ ಈಗ ಇರತಕ್ಕ ಕಾನೂನು ಏನು ಇದೆ ಅದು ಸಮರ್ಪಕವಾಗಿಲ್ಲ, ಅದು ಸರಿಯಾಗಿಲ್ಲ, ಅದನ್ನು ತಿದ್ದುಪಡಿಮಾಡಬೇಕೆಂಬ ಅವಶ್ಯಕತೆ ಇದೆ ಎನ್ನತಕ್ಕ ಆಲೋಚನೆ ಇಡೀ ದೇಶದಲ್ಲೇ ಇದೆ. ತಮಿಳುನಾಡು ಸರ್ಕಾರದವರು ಇದರ ಮಾತುಕತೆಗೆ ತಯಾರಿಲ್ಲವೆಂದರೆ ಆ ಕಾನೂನನ್ನು ತಿದ್ದುಪಡಿ ಮಾಡುವ ಅಧಿಕಾರ ಕೇಂದ್ರಕ್ಕೆ ಇದೆ. ಆದ್ದರಿಂದ ಆ ಕಾನೂನನ್ನು ತಿದ್ದುಪಡಿ ಮಾಡಬೇಕೆಂದು ತಮಿಳುನಾಡು ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ನಾವು ಕೇಂದ್ರಕ್ಕೆ ಹೇಳಬೇಕು.

ಉಪಾಧ್ಯಕ್ಷರು.—ಇನ್ನೂ ೭-೮ ಜನ ಮಾತನಾಡುವವರು ಇದ್ದಾರೆ. ತಾವು ಜಾಗ್ರತೆ ಮುಗಿಸಬೇಕು.

ಶ್ರೀ ಸಿ. ಬೈರೇಗೌಡ.—ಈ ಅವಕಾಶವನ್ನು ಕೇಂದ್ರ ಸರ್ಕಾರ ಉಪಯೋಗಿಸಿಕೊಂಡಿಲ್ಲ. ನಮ್ಮ ರಾಜ್ಯದಿಂದ ಎಲ್ಲ ಪಕ್ಷಗಳ ನಿಯೋಗ ಅಲ್ಲಿಗೆ ಹೋದಾಗ ಮಾನ್ಯ ಪ್ರಧಾನ ಮಂತ್ರಿಯವರು ಏನು ಹೇಳಿದರು ಎಂಬುದನ್ನು ಹೇಳಲು ನಾನು ಹೋಗುವುದಿಲ್ಲ. ಆದರೆ ಅಲ್ಲಿ ಕೊಟ್ಟಂತಹ ಒಂದು ಇಂಪ್ರೆಷನ್ನೇ ಬೇರೆ ಮಾರನೇ ದಿವಸ ಆಗಿದ್ದೇ ಬೇರೆ, ಇದು ಕರ್ನಾಟಕಕ್ಕೆ ಆಗಿರತಕ್ಕ ಪರಮ ಅನ್ಯಾಯ. ಈಗ ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಕೆಲವು ವಿಚಾರಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡುವುದು ಬೇಡವೆಂದು ಒಂದು ಮಾತನ್ನು ಹೇಳಿದರು, ಅದನ್ನು ನಾನು ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅವು ಏನು ಎಂಬುದನ್ನು ಹೇಳಿ ಈ ಸಭೆಗೆ ಗೊತ್ತಿಲ್ಲದಿರತಕ್ಕ ಗುಪ್ತ ವಿಚಾರ ಏನು ಎಂಬುದನ್ನು ಹೇಳಿ. ಕಾವೇರಿ ನದಿ ನೀರಿನ ಸಮಸ್ಯೆ ನಿಮ್ಮಿಬ್ಬರಿಗೆ ಗೊತ್ತಾದರೆ ಸಾಕೆ, ನಿಮಗಿಬ್ಬರಿಗೂ ಗೊತ್ತಿರುವುದನ್ನು ನಮಗೂ ಹೇಳಿ.

ಶ್ರೀ ಸಿ. ಬೈರೇಗೌಡ.—ನಾನು ಅವರ ಮಾತನ್ನು ಒಪ್ಪುತೇನೆ. ಈಗ ಏನು ಆಗಬಾರದಾಗಿತ್ತು ಅದು ಆಗಿಹೋಗಿದೆ. ನಾನು ಹೇಳುತ್ತೇನೆ ಇಂದು ವಿನಾಶದ ಅಂಚಿನಲ್ಲಿ ನಾವು ಇದ್ದೇವೆ. ಅದಕ್ಕೆ ಪೂರಕವಾಗಿ ಸರ್ಕಾರವು ಇವತ್ತು ಕ್ರಮ ತೆಗೆದುಕೊಳ್ಳುತ್ತಿದೆ. ೧೫೦–೧೬೦ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆಂಬ ಮಾತನ್ನು ಮಂತ್ರಿಗಳು ಅಧಿಕಾರಿಯುಕ್ತವಾಗಿ ಹೇಳಿದ್ದಾರೆ. ನಾನು ಅದನ್ನು ಸ್ವಾಗತಿಸುತ್ತೇನೆ. ಆದರೆ ಹಿಂದೆ ಇಷ್ಟು ವರ್ಷಗಳು ಇಲ್ಲದೆ ಇದ್ದಿದ್ದು ತರಾತುರಿಯಾಗಿ ಇವತ್ತು ಟ್ರಿಬ್ಯೂನಲ್ ರಚನೆ ಯಾವಾಗಲೇ ನಾವು ಎಲ್ಲ ಕಡೆ ಜಾಗಟೆ ಬಾರಿಸಿಕೊಂಡು ಹೋಗಿ ೧೫೦ ಕೋಟಿ ಖರ್ಚು ಮಾಡುತ್ತೇವೆಂದು ಹೇಳುತ್ತಾ ಹೋದರೆ ಹಾಗೂ ಊರಿನಲ್ಲೆಲ್ಲ ಡಂಗೂರ ಹೊಡೆದುಕೊಂಡು ಹೋದರೆ ತಮಿಳುನಾಡಿನವರು ಸುಮ್ಮನೆ ಕುಳಿತುಕೊಳ್ಳುತ್ತಾರೆಯೇ? ಅವರು ಹಿಂದೆ ಎರಡು ಬಾರಿ ಕೋರ್ಟಿಗೆ ಹೋಗಿ ತಡೆಯಾಜ್ಞೆ ಕೊಡಿ ಎಂದು ಕೇಳಿದ್ದರು. ಕರ್ನಾಟಕ ಕಟ್ಟತಕ್ಕ ಯಾವ ಯೋಜನೆಗಳಿಗೂ ಅವುಗಳನ್ನು ಕಟ್ಟಬಾರದೆಂದು ತಡೆಯಾಜ್ಞೆ ಕೊಡಿಎಂದು ಈಗಾಗಲೇ ತಮಿಳುನಾಡಿನವರು ಎರಡು ಸಲ ಕೋರ್ಟಿಗೆ ಹೋಗಿದ್ದಾರೆ. ಆದರೆ ಅವರಿಗೆ ಅನುಮತಿ ಸಿಕ್ಕಿಲ್ಲ. ನಾಳೆ ಅವರು ಟ್ರಿಬ್ಯೂನಲ್‌ಗೆ ಹೋಗಿ ಅದನ್ನು ದೊಡ್ಡದು ಮಾಡುತ್ತಾರೆ. ಅವರು ಏನು ಹೇಳುತ್ತಾರೆಂದರೆ ಹಿಂದೆ ಇಷ್ಟು ಖರ್ಚು ಮಾಡಿದರು, ಈಗ ಇದ್ದಕ್ಕಿದ್ದ ಹಾಗೆ ೧೫೦–೨೦೦ ಕೋಟಿ ರೂಪಾಯಿಗಳನ್ನು ಒಂದೇ ವರ್ಷದಲ್ಲಿ ಕರ್ನಾಟಕದವರು ಖರ್ಚುಮಾಡುತ್ತೇವೆಂಬ ಮಾತನ್ನು ಹೇಳುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡಬಾರದೆಂದು ಅವರು ಟ್ರಿಬ್ಯೂನಲ್‌ಗೆ ಹೋಗಿ ಹೇಳಿದರೆ ನಾಳೆ ನಮ್ಮ ಸ್ಥಿತಿ ಏನಾಗುತ್ತದೆ. ನಮ್ಮ ದುರಾದೃಷ್ಟವೆಂದರೆ ಈ ವಿಚಾರದಲ್ಲಿ ಪ್ರಾರಂಭವಾದಾಗಿನಿಂದ ಅಂದರೆ ೧೯೪೭ ರಿಂದ ೧೯೭೦ರವರೆಗೂ ಕೂಡ ನಾವು ಶಿಶುಗಳಾಗಿ ಬರುತ್ತಿದ್ದೇವೆ. ನಾಳೆ ಅವರು ಟ್ರಿಬ್ಯೂನಲ್ ಎದುರುಗಡೆ ಹೋಗಿ ಕರ್ನಾಟಕ ರಾಜ್ಯ ಸರ್ಕಾರ ಈ ರೀತಿ ಹಣವನ್ನು ಒಂದೇಸಾರಿ ದಿಢೀರಾಗಿ ಖರ್ಚು ಮಾಡುತ್ತಿದೆ. ಇದಕ್ಕೆ ಅವಕಾಶ ಕೊಡಬಾರದು ಹಾಗೂ ಅವರು ಕಟ್ಟತಕ್ಕ ಯೋಜನೆಗಳು ಏನು ಇವೆ ಅವುಗಳಿಗೆ ತಡೆಯಾಜ್ಞೆಯನ್ನು ಕೊಡಬೇಕೆಂದು ಕೇಳಿದರೆ ಹಾಗೂ ನಮ್ಮ ದುರಾದೃಷ್ಟವಶಾತ್ ಅವರೇನಾದರೂ ತಡೆಯಾಜ್ಞೆಯನ್ನು ಕೊಟ್ಟರೆ ನಮ್ಮ ಪರಿಸ್ಥಿತಿ ಏನಾಗುತ್ತದೆಂಬುದನ್ನು ಯೋಚನೆಮಾಡಬೇಕು. ಈ ರೀತಿ ಹೇಳಲು ನಿಮಗೆ ಇದ್ದಂತಹ ಆತುರ ವಾದರೂ ಏನು? ನೀವು ೨೫೦ ಕೋಟಿ ಅಲ್ಲ ೫೦೦ ಕೋಟಿ ಖರ್ಚು ಮಾಡಿ, ನಾನು ಒಪ್ಪುತ್ತೇನೆ. ನಿಮ್ಮನ್ನು ಸಾರ್ವಜನಿಕವಾಗಿ ಅಭಿನಂದಿಸುತ್ತೇನೆ. ಅದಕ್ಕ ನಾವು ತಯಾರಿದ್ದೇವೆ. ಆದರೆ ಈ ಬಗ್ಗೆ ಬೀದಿಬೀದಿಯಲ್ಲಿ ಹೇಳಿಕೊಳ್ಳತಕ್ಕ ಅವಶ್ಯಕತೆ ಇರಲಿಲ್ಲ. ಇದರಿಂದ ಈ ರಾಜ್ಯದ ಹಿತಕ್ಕೆ ಧಕ್ಕೆ ಉಂಟಾಗಿದೆ. ಯಾರಿಂದ ಈ ರಾಜ್ಯದ ಹಿತಕ್ಕೆ ಧಕ್ಕೆ ಉಂಟಾಗಿದೆ ಎಂಬುದನ್ನು ಸರ್ಕಾರ ತೀವ್ರವಾಗಿ ಯೋಚನೆ ಮಾಡಬೇಕು. ಇನ್ನು ಮುಂದೆಯಾದರೂ ಈ ರೀತಿಯಾಗಿ ಹೇಳಿಕೆಗಳನ್ನು ಸರ್ಕಾರ ಕೊಡದೆ ಏನು ಕೆಲಸಮಾಡಬೇಕೋ ಅದನ್ನು ಮಾಡಿ ತೋರಿಸಲು ಪ್ರಯತ್ನ ಮಾಡಬೇಕು. ನೀವು ನಮಗೂ ಹೇಳಲೂ ಹೋಗಬೇಡಿ. ಗುಟ್ಟಾಗಿ ಬೇಕಾದರೆ ಹೇಳಿ. ಆದರೆ ಬಹಿರಂಗವಾಗಿ ಈ ವಿಷಯಗಳನ್ನು ಹೇಳಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮಂತ್ರಿಗಳು).— ಮಾನ್ಯ ಅಧ್ಯಕ್ಷಿಣಿಯವರೇ ನಾವು ಖರ್ಚು ಮಾಡತಕ್ಕಂಥ ಹಣದ ಬಗ್ಗೆ ಹೊರಗಡೆ ಹೇಳಬಾರದು, ಅದನ್ನು ಗುಟ್ಟಿನಲ್ಲಿ ಹೇಳಿ ಎಂಬ ಕಿವಿ ಮಾತನ್ನು ನಮ್ಮ ಹಿರಿಯ ಸದಸ್ಯರಾದಂಥ ಬೈರೇಗೌಡರು ಹೇಳುತ್ತಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಅವರ ವಾದ ಶಾಸನಸಭೆಯ ಒಳಗೆ ಒಂದು ರೀತಿ, ಶಾಸನ ಸಭೆಯ ಹೊರಗೆ ಒಂದು ರೀತಿಯಲ್ಲಿ ಆಗಬಾರದು. ಆದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಈ ಸರ್ಕಾರಕ್ಕೆ ಸಂಪನ್ಮೂಲನ್ನು ಕೂಡಿಸತಕ್ಕಂಥ ಶಕ್ತಿ ಇಲ್ಲ, ಕಾವೇರಿ ಬಗ್ಗೆ ಜನತೆಯ ಹಿತಾಸಕ್ತಿಯನ್ನು ನಿರ್ಲಕ್ಷಿಸಿದ್ದಾರೆ. ಇದರಿಂದ ಏನೂ ಸಾಧನೆ ಮಾಡಲಿಕ್ಕೆ ಆಗಲಿಲ್ಲ ಎಂದು ಹೇಳಿ ಎಲ್ಲಾ ಕಡೆಯಲ್ಲಿಯೂ ರೈತರನ್ನು ಸಂಘಟನೆ ಮಾಡಿ ಕಣ್ಣೀರು ಹಾಕತಕ್ಕಂಥ ಮತ್ತು ತಮ್ಮದೇ ಆದಂಥ ಪ್ರವರವನ್ನು ಈ ಜನತೆಯ ಮುಂದೆ ಹೇಳತಕ್ಕಂಥ ಅವರ ವಾದ ಏನು ಇದೆ, ಅದು ಸರಿಯಲ್ಲ. ಆದ್ದರಿಂದ ಮಾನ್ಯ ಸದಸ್ಯರೂ ಸಹ ಅವರ ಇತಿಮಿತಿಗಳನ್ನು ಅರಿತುಕೊಂಡು ಇದು ಎಷ್ಟು ಸೂಕ್ಷ್ಮವಾದ ವಿಚಾರ ಎಂದು ತಿಳಿದುಕೊಂಡು ಅವರೂ ಕೂಡಾ ಸರ್ಕಾರದ ಜೊತೆ ಸಹಕರಿಸಬೇಕು ಎನ್ನತಕ್ಕಂಥ ಮಾತನ್ನು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ.— ಈ ಸದನದಲ್ಲಾಗಲೀ, ಹೊರಗಡೆಯಾಗಲೀ ರಾಜ್ಯದ ಹಿತಕ್ಕೆ ಧಕ್ಕೆ ಬರತಕ್ಕಂಥ ಒಂದು ಮಾತನ್ನೂ ಕೂಡಾ ನಾನು ಹೇಳಲಿಲ್ಲ, ಹೇಳುವುದೂ ಇಲ್ಲ. ಹಾಗಾದರೆ ಇವರು ಹೇಳಿದ್ದನು ಬಾಯಿ ಮುಚ್ಚಿಕೊಂಡು, ಹೇಳಿದ್ದನ್ನು ಕೇಳಿಕೊಂಡು ಇರಿ ಎಂದು ಇವರು ಹೇಳು ವುದಕ್ಕೂ ಕೂಡಾ ಇವರಿಗೆ ಅಧಿಕಾರವಿಲ್ಲ. ನಾವು ಹೇಳಬೇಕಾದ್ದನ್ನು ಹೇಳಿಯೇ ಹೇಳುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮೀಗೌಡ.— ನಿಮ್ಮ ಬಾಯಿಯನ್ನು ಮುಚಿಸುವುದಕ್ಕೆ ನಾವು ಕೂಡಾ ಈ ರೀತಿ ಹೇಳಬೇಕಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಮಂತ್ರಿಗಳಾದ ಪುಟ್ಟಸ್ವಾಮೀಗೌಡರು ಹೇಳಿದ ಹಾಗೆ ಬಹುಶಃ ಮಾಯಸಂದ್ರದಲ್ಲಿ ಜನರನ್ನು ಗುಂಪು ಸೇರಿಸುವುದಕ್ಕೆ ಎಲ್ಲಾ ತರಹದ ಬಾಣಗಳನ್ನು ಬಿಟ್ಟು ಗುಂಪು ಸೇರಿಸಿದ್ದಿರಿ. ಇದು ರಾಜ್ಯದ ಜನತೆಗೆ ಗೊತ್ತು.

ಶ್ರೀ ಸಿ. ಬೈರೇಗೌಡ.— ಅಲ್ಲಿಗೆ ನಾನು ಕೂಡಾ ಹೋಗಿದ್ದೆ. ಅಲ್ಲಿ ನಾನು ಭಾಷಣವನ್ನು ಕೂಡಾ ಮಾಡಿದ್ದೇನೆ. ರಾಜ್ಯದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಜನರಿಗೆ ತಿಳಿಸಬೇಕಾದ್ದು ನಮ್ಮ ಕರ್ತವ್ಯ. ರಾಜ್ಯದ ಹಿತಕ್ಕೆ ಧಕ್ಕೆ ಬರತಕ್ಕಂಥ...

ಉಪಾಧ್ಯಕ್ಷಿಣಿಯವರು.— ಪ್ರತಿಯೊಬ್ಬರೂ ಕೇಳತಕ್ಕಂಥ ಪ್ರಶ್ನೆಗೆ ತಾವು ಉತ್ತರವನ್ನು ಕೊಡು ತ್ತೀರೋ ? ಅಥವಾ ನೀವು ಹೇಳತಕ್ಕಂಥ ವಿಷಯವನ್ನು ಹೇಳುತ್ತೀರೋ ಇನ್ನು ಐದು ನಿಮಿಷದಲ್ಲಿ ನಿಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ. ಸಿ. ಬೈರೇಗೌಡ.— ನಾವು ಹೊರಗಡೆಯಲ್ಲಾಗಲೀ, ಅಥವಾ ಬೇರೆ ಎಲ್ಲಿಯಾಗಲೀ ರಾಜ್ಯದ ಹಿತಕ್ಕೆ ಧಕ್ಕೆ ಬರತಕ್ಕಂಥ ಒಂದು ಮಾತನ್ನೂ ನಾವು ಆಡುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನೀವು ಇದ್ದಾಗ ಏನು ಮಾಡಿದಿರಿ ಎನ್ನತಕ್ಕಂಥ ಪ್ರಶ್ನೆಯನ್ನು ಬಹಳ ಜನರು ಕೇಳುತ್ತಿದ್ದಾರೆ. ೧೯೮೩ ರಿಂದ ಎಷ್ಟೆಷ್ಟು ನೀರಾವರಿ ಆಯಿತು, ಏನೇನು ಆಯಿತು ಎಂದು ತಾವುಗಳು ಕೇಳಿದಿರಿ, ಈ ಬಗ್ಗೆ ನಮ್ಮ ಕಾಲದಲ್ಲಿ ಪ್ರಾಮಾಣಿಕ ವಾದಂಥ ಪ್ರಯತ್ನ ಖಂಡಿತವಾಗಿಯೂ ಕೂಡಾ ಆಗ ನಡೆಯಿತು. ಖಂಡಿತವಾಗಿಯೂ ನಡೆದಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ — ಈ ವಿಚಾರದಲ್ಲಿ ಸತ್ಯಕ್ಕೆ ದೂರವಾದ ಮಾತನ್ನು ಮಾನ್ಯ ಸದಸ್ಯರು ಆಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್.— ಮಾನ್ಯ ಸದಸ್ಯರಾದ ಬೈರೇಗೌಡರು ಹೇಳುತ್ತಿರುವುದು ರಾಜ್ಯದ ಜನರಿಗೆ ಗೊತ್ತಿದೆ. ಅವರು ಈಗ ಸಲಹೆ ಅಷ್ಟನ್ನು ಮಾತ್ರ ಕೊಡಲಿ. ಯಾರ್‍ಯಾರ ಪ್ರಯತ್ನದಿಂದ ಇಂದಿನ ಪರಿಸ್ಥಿತಿ ಬಂದಿದೆ ಎಂದು ಅದು ರಾಜ್ಯದ ಜನರಿಗೆ ಗೊತ್ತಿದೆ.

ಶ್ರೀ ಸಿ. ಬೈರೇಗೌಡ.— ಒಂದು ಪ್ರಾಮಾಣಿಕವಾದಂಥ ಪ್ರಯತ್ನ ನಡೆದಿದೆ. ಆದ್ದರಿಂದಲೇ ನೀರಾವರಿ ಖಾತೆಯನ್ನು ಹೊಂದಿದ್ದಂಥ ಮಂತ್ರಿಗಳು ಜವಾಬ್ದಾರಿಯನ್ನು ಹೊತ್ತು ರಾಜೀನಾಮೆ ಯನ್ನು ಕೊಟ್ಟು ಹೋಗಬೇಕಾದಂಥ ಪರಿಸ್ಥಿತಿ ಬಂತು.

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಸದಸ್ಯರು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ.— ಅವರು ಹೇಳಿರುವುದಕ್ಕೆ ಉತ್ತರ ಕೊಡಬೇಕಾಗಿರತಕ್ಕಂಥದ್ದು ನನ್ನ ಕರ್ತವ್ಯ. ಅಷ್ಟು ಮಾತ್ರಕ್ಕೆ ನಾನು ಸೀಮಿತಗೊಳಿಸುತ್ತೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ.— ಇಂದು ಏನು ಪರಿಸ್ಥಿತಿ ಉಂಟಾಗಿದೆ, ಆ ಪರಿಸ್ಥಿತಿಯ ಬಗ್ಗೆ ಮುಂದಕ್ಕೆ ಏನು ಮಾಡಬೇಕು ಎನ್ನತಕ್ಕಂಥದ್ದು ಈಗಿನ ಪ್ರಶ್ನೆ. ಈಗಾಗಲೇ ಕೆಲವಾರು ಸದಸ್ಯರುಗಳು ಸಲಹೆ ಗಳನ್ನು ಕೊಟ್ಟಿದ್ದಾರೆ. ಅನೇಕ ಸಲಹೆಗಳನ್ನು ನಾವು ಕೂಡಾ ಸರ್ಕಾರಕ್ಕೆ ಕೊಟ್ಟಿದ್ದೇವೆ. ಅನೇಕ ವಿಚಾರಗಳನ್ನು ಬಹಿರಂಗವಾಗಿ ಇಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದುದರಿಂದ ಈ ಸದನ

ದಲ್ಲಿರತಕ್ಕಂಥವರ ಮತ್ತು ಹೊರಗಡೆ ಇರತಕ್ಕಂಥವರನ್ನು ಸೇರಿಸಿ ಒಂದು ಸಮಿತಿಯನ್ನು ರಚನೆ ಮಾಡಬೇಕು. ಏಕೆಂದರೆ ಇದರಲ್ಲಿರತಕ್ಕಂಥ ವಿಚಾರ ಎಂದರೆ ಎಲ್ಲವೂ ನನಗೆ ಗೊತ್ತಿದೆ ಎಂದು ಅಧಿಕಾರ ಯುತವಾಗಿ ಅಧಿಕಾರವಾಣಿಯಲ್ಲಿ ಯಾರೂ ಕೂಡಾ ಹೇಳುವುದಕ್ಕೆ ಸಾಧ್ಯವಿಲ್ಲ ಆದುದರಿಂದ ಈ ಸದನದಲ್ಲಿರತಕ್ಕಂಥವರನ್ನು ಮತ್ತು ಸದನದ ಹೊರಗಡೆ ಇರತಕ್ಕಂಥವರನ್ನು ಸೇರಿಸಿ ಒಂದು ಸಮಿತಿ ಯನ್ನು ಸರ್ಕಾರ ರಚನೆ ಮಾಡಿದರೆ ಒಳ್ಳೆಯದು. ಅದನ್ನು ಸರ್ಕಾರಕ್ಕೆ, ಮುಖ್ಯ ಮಂತ್ರಿಗಳಿಗೆ ಬಿಡುತ್ತೇನೆ. ಸಮಿತಿಯನ್ನು ರಚನೆ ಮಾಡಿದರೆ ನಿಮಿಷ ನಿಮಿಷದಲ್ಲಿ ಪ್ರತಿ ದಿವಸ ನಮ್ಮ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ಏನು ಮಾಡಿದರೆ ಸೂಕ್ತ ಎನ್ನತಕ್ಕಂಥದ್ದಕ್ಕೆ ಸಲಹೆಯನ್ನು ಪಡೆಯಬಹುದು. ಒಂದು ಸಮಿತಿಯನ್ನು ಸರ್ಕಾರ ರಚನೆ ಮಾಡಿ ಎಲ್ಲಾ ಕ್ರಮಗಳನ್ನು ಅಂದರೆ ಏನೇನು ಮಾಡುವುದಕ್ಕೆ ಸಾಧ್ಯ ಇದೆ, ಆ ಎಲ್ಲಾ ಕ್ರಮಗಳನ್ನು ಸರ್ಕಾರ ತೆಗೆದುಕೊಂಡು ಈ ನೀರನ್ನು ಉಳಿಸಿ ಈ ಭಾಗದಲ್ಲಿರತಕ್ಕಂಥ ಜನರ ಅದೂ ಕೂಡಾ ಹಳೆಯ ಮೈಸೂರಿನ ಐದು ಜಿಲ್ಲೆಗಳ ಜನರ ಬದುಕನ್ನು ಅವರ ಉಸಿರನ್ನು ಕಾಪಾಡತಕ್ಕಂಥದ್ದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಈಗ ಇರತಕ್ಕ ಪರಿಸ್ಥಿತಿ ಕರ್ನಾಟಕದಲ್ಲಿ ಇರುತ್ತದೆಯೋ ಎಂಬ ಅನುಮಾನ ಇದೆ. ಒಂದುಸಾರಿ ಜನ ತೀರ್ಮಾನ ಮಾಡಿದರೆ ಅದನ್ನು ತಡೆಯತಕ್ಕ ಶಕ್ತಿ ಯಾರಿಗೂ ಇಲ್ಲ. ದೇಶದ ನಾನಾ ಭಾಗದಲ್ಲಿ ಏನು ನಡೆಯುತ್ತಿದೆ ಏನು ಆಗುತ್ತಿದೆ ಏನೂ ಆಗಿದೆ ಅದೂ ಕೂಡ ಕರ್ನಾಟಕದಲ್ಲಿ ಆಗುತ್ತದೆ. ಆದಕ್ಕೆ ಅವಕಾಶ ಇಲ್ಲದಂತೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ನೀರನ್ನು ಉಳಿಸಿಕೊಳ್ಳುವುದರ ಬಗ್ಗೆ ನಮ್ಮ ಪಕ್ಷದ ಮೂಲಕ ಮತ್ತು ನನ್ನಿಂದ ಸಂಪೂರ್ಣವಾದ ಬೆಂಬಲವನ್ನು ಸರ್ಕಾರಕ್ಕೆ, ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ.

ಉಪಾಧ್ಯಕ್ಷರು.— ಮುಗಿಸಿ ಸಮಯ ಆಯಿತು.

(ಗೊಂದಲ)

ಶ್ರೀ ಸಿ. ಬೈರೇಗೌಡ.— ಕೇಂದ್ರ ಸರ್ಕಾರದಿಂದ ಅನ್ಯಾಯ ಆಗಿರಬಹುದು: ಆ ಪ್ರಶ್ನೆ ಬೇರೆ...

(ಗೊಂದಲ)

ಶ್ರೀ ಸಿ. ಬೈರೇಗೌಡ.— ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹಲಗೇಗೌಡ (ಪಾಂಡವಪುರ).—ಮಾನ್ಯ ಅಧ್ಯಕ್ಷಣಿಯವರೇ, ಈಗ ಏನು ಕಾವೇರಿ ನೀರಿನ ಹಂಚಿಕೆ ಸಮಿತಿ ಬಗ್ಗೆ ಉಳಿದ ನನ್ನ ಸಹ ಶಾಸಕರು ಮತ್ತು ಹಿರಿಯ ನಾಯಕರುಗಳು ಮಾತನಾಡಿದ್ದಾರೆ, ಹಾಗೂ ತಮ್ಮ ಕಳವಳವನ್ನು ವ್ಯಕ್ತ ಮಾಡಿದ್ದಾರೆ. ಆ ಕಳವಳಕ್ಕೆ ನನ್ನದನ್ನೂ ಸಹ ಸೇರಿಸುತ್ತೇನೆ. ಏಕೆಂದರೆ ನಾನು ಕಾವೇರಿ ಜಲಾನಯನ ಪ್ರದೇಶದಿಂದ ಬಂದಂತಹವನು. ಪರಿಸ್ಥಿತಿ ಇಲ್ಲಿ ಹೇಗಿದೆ ಎಂದರೆ ಒಂದು ಇಂಗ್ಲೀಷ್ ಕವನದಲ್ಲಿ ಈ ರೀತಿಯ ಒಂದು ಸಾಲು ಇದೆ. 'water water everywhere but not yet a drop of water to drink' ಎಂದು ಅಲ್ಲಿ ಹೇಳಿದ್ದಾರೆ. ಒಬ್ಬ ಕವಿ ಸಮುದ್ರದಲ್ಲಿ ಹೋಗುತ್ತಾ ಎಲ್ಲೂ ಕೂಡ ಕುಡಿಯುವುದಕ್ಕೆ ನೀರು ಇಲ್ಲವೆಂದು ಹೇಳುತ್ತಾನೆ. ಆತ ನೀರಿಗಾಗಿ ಪರಿತಪಿಸುತ್ತಿದ್ದಾನೆ, ಹಾಗೆಯೇ ನಾನು ಕಾವೇರಿ ಜಲಾನಯನ ಪ್ರದೇಶದಿಂದ ಬಂದರೂ ಕೂಡ ಒಂದು ಹನಿ ನೀರನ್ನು ಕುಡಿಯದವನು ಆಗಿದ್ದೇನೆ ಮತ್ತು ಅನುಭವಿಸದೇ ಇದ್ದವನು ಆಗಿದ್ದೇನೆ ಕಳೆದ ಸರ್ಕಾರದ ಪ್ರಯತ್ನದಿಂದ ಒಂದು ಪರಿಸ್ಥಿತಿ ಬಂದಿದೆ. ಈಗ ಕೊನೆಯ ಪಕ್ಷ ನಮ್ಮ ಕರ್ನಾಟಕ ರಾಜ್ಯದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ೩೬೦ ಟಿ.ಎಂ.ಸಿ ನೀರನ್ನು ಉಪಯೋಗಿಸಿಕೊಳ್ಳುವಂತಹ ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದಾರೆ. ಈ ೩೬೦ ಟಿ ಎಂ ಸಿ ನೀರನ್ನು ಪಡೆದುಕೊಂಡ ಮೇಲೆ ಉಳಿದ ನೀರನ್ನು ತಮಿಳುನಾಡಿಗೆ ಆಗಲಿ ಅಥವಾ ಬೇರೆ ಯಾವುದೇ ರಾಜ್ಯಕ್ಕೆ ಆಗಲಿ ಬಿಡಲಿ, ಇದಕ್ಕೆ ಯಾರದೇ ಅಭ್ಯಂತರ ಇಲ್ಲ: ಆದರೆ ನೀರು ಎಷ್ಟು ಶೇಖರಣೆ ಆಗುತ್ತದೆ. ಎಂದು ನೋಡಬೇಕು. ಹಿಂದಿನ ಕಾಲದಲ್ಲಿ ಆಗುತ್ತಿದ್ದ ಮಳೆಗೂ ಈಗ ಆಗುತ್ತಿರುವ ಮಳೆಗೂ, ಹಾಗೂ ಆಗಿನ ನೀರಿನ ಶೇಖರಣೆಗೂ ಈಗಿನ ಶೇಖರಣೆಯನ್ನೂ ನೋಡಬೇಕಾಗಿದೆ. ನಮ್ಮಲ್ಲಿರುವ ಜಲ ಸಂಪನ್ಮೂಲದ ಶೇಖರಣೆಯನ್ನು ನೋಡಿ ಕೊಂಡು ನಾವು ಬದುಕಿ, ನಂತರ ಬೇರೆಯವರನ್ನು ಬದುಕಿಸುವಂತಹ ಪ್ರಯತ್ನವನ್ನು ನಾವು ಮಾಡ ಬೇಕಾಗಿದೆ. ಅವರೂ ರೈತರೂ ನಾವೂ ರೈತರು. ತಮಿಳುನಾಡಿನವರು ನಮ್ಮ ಪಾಲಿನ ನೀರನ್ನು ಒಂದು ಅಗ್ರಹ ಪೂರ್ವಕವಾಗಿ ಕೇಳುತ್ತಿದ್ದಾರೆ. ಆ ಜನ ವರ್ಷಕ್ಕೆ ಮೂರು ಬೆಳೆ ಬೆಳೆಯತಕ್ಕವರು. ಕೊನೆ ಹಂತದ ಪ್ರದೇಶದಲ್ಲಿ ನಾವು ವರ್ಷಕ್ಕೆ ಒಂದು ಬೆಳೆ ಕೂಡ ಬೆಳೆಯುತ್ತಿಲ್ಲ. ಅವರು ನೀರಿನ ಕಂದಾಯ ವನ್ನು ಕೊಡುತ್ತಿದ್ದಾರೆ. ವಾಟರ್ ರೇಟ್ ಅನ್ನು ಸಹ ಕೊಡುತ್ತಿದ್ದಾರೆ. ಆದರೆ ಅವರಿಗೆ ನೀರು ಇಲ್ಲ. ನಾವು ವಾಟರ್ ರೇಟ್ ಕೊಟ್ಟಿದ್ದೇವೆ, ತರಿ ಕಂದಾಯವನ್ನು ಕೊಟ್ಟಿದೇವೆ. ಅವರೂ ನಮ್ಮ ಹೊಲ ಗದ್ದೆಗಳಿಗೆ ಕೊನೇ ಪ್ರದೇಶದಲ್ಲಿರತಕ್ಕಂಥ ಜಾಗಗಳಿಗೆ ನೀರು ಬಂದಿಲ್ಲ, ನಮ್ಮ ಭೂಮಿ ಅಚ್ಚು ಕಟ್ಟಿಗೆ

ಸೇರಿದ್ದರೂ ಕೂಡ ನೀರು ಬಂದಿಲ್ಲ. ಹೀಗಿದ್ದರೂ ಕೂಡ ಇರತಕ್ಕಂಥ ನೀರನ್ನು ನಾವು ಕೆಳಗೆ ಬಿಟ್ಟು ಇನ್ನೂ ಕೂಡ ಬರಡಾಗುವುದು ಅಂದರೆ ಅದು ನಮ್ಮ ಮಾರಣಾಂತಕವೇ ಸರಿ. ಇದು ಜಲಾನಯನ ಪ್ರದೇಶದ ವ್ಯಾಪ್ತಿಯ ಎಲ್ಲಾ ರೈತರುಗಳ ಮಾರಣಾಂತಿಕ ಪ್ರಶ್ನೆ. ಸಾವು ಬದುಕಿನ ಪ್ರಶ್ನೆ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷಿಣಿಯವರೆ, ಸನ್ಮಾನ್ಯ ಬೈರೆಗೌಡರು ಒಂದು ಮಾತನ್ನು ಹೇಳಿದರು. ಈ ಒಂದು ಅನೈತಿಕವಾದ ಒಪ್ಪಂದ 1924ರಲ್ಲಿ ಏನು ಆಯಿತೋ ಅವತ್ತಿನ ಪರಿಸ್ಥಿತಿಯೇ ಬೇರೆ, ಇವತ್ತಿನ ಪರಿಸ್ಥಿತಿಯೇ ಬೇರೆ. ಆಗ ಆಳರಸರು ಹಿಂದೆ ಇದ್ದಂಥ ಸರ್ಕಾರಕ್ಕೆ ಬಗ್ಗಿ ಸನ್ಮಾನ್ಯ ವಿಶ್ವೇಶ್ವರಯ್ಯನಂಥವರೂ ಕೂಡ ಕಣ್ಣಲ್ಲಿ ನೀರು ಇಟ್ಟು ಆ ಒಪ್ಪಂದಕ್ಕೆ ಸಹಿ ಹಾಕಬೇಕಾಗಿ ಬಂತು. ಆದರೆ ಅದನ್ನು ಧೈರ್ಯವಾಗಿ ಎದುರಿಸಿದ ಧೀಮಂತ ನಾಯಕ ಅಂದರೆ ಸನ್ಮಾನ್ಯ ದೇವರಾಜ ಅರಸ್ ಅವರು 1974ರಲ್ಲಿ ಆ ಒಂದು ಒಪ್ಪಂದ ಮುಗಿದ ಕೂಡಲೆ ನಮಗೆ ಆಗುವಷ್ಟು ನೀರನ್ನು ಹಿಡಿದುಕೊಂಡು ಉಳಿದ ನೀರನ್ನು ಬಿಡುತ್ತೇವೆಯೇ ಹೊರತು ನನ್ನ ಜನರನ್ನು, ನನ್ನ ರೈತರನ್ನು ನನ್ನ ಬಂಧುಗಳನ್ನು ನಾನು ಬಲಿ ಕೊಡುವುದಿಲ್ಲ ಎನ್ನತಕ್ಕಂಥ ದೃಢ ನಿರ್ಧಾರವನ್ನು ತೆಗೆದುಕೊಂಡು ಅದರಂತೆ ನಡೆದಂಥ ವ್ಯಕ್ತಿ ಅವರೊಬ್ಬರೆ. ಯಾವಾಗ ನಮ್ಮಲ್ಲಿ ದೃಢತ್ವ ಇರುತ್ತದೆ. ಧೈರ್ಯ ಇರುತ್ತದೆ ಆಗ ಯಾವ ಕಾರ್ಯವನ್ನಾದರೂ ಕೂಡ ಸಾಧಿಸಬಹುದು ಎನ್ನುವುದಕ್ಕೆ ಇದು ಒಂದು ಸಾಕ್ಷಿ. ಸನ್ಮಾನ್ಯ ಅಧ್ಯಕ್ಷಿಣಿಯವರೆ ಅವರೂ ರೈತರೇ, ನಾವೂ ರೈತರೇ. ಬೆಳೆಗೆ ನೀರು ಬೇಕು. ಅವರ ನಮ್ಮ ನೀರಿನಿಂದಲೆ ಅವರು ಬೆಳೆ ಮಾಡಬೇಕೇನು ? ಈ ಬಗ್ಗೆ ಕೆಲವು ವೈಜ್ಞಾನಿಕ ಸಲಹೆಗಳು ಬಂದಿವೆ. ತಮಿಳುನಾಡಿನಲ್ಲಿರತಕ್ಕಂಥ ನೀರು ಹೇಗಿದೆ ಎಂದರೆ. ಜಲಾನಯನ ಪ್ರದೇಶದ ಹತ್ತಿರ ಸಮುದ್ರಮಟ್ಟಕ್ಕೆ ಹತ್ತಿರ ಹತ್ತಿರ ಹೋಗುತ್ತಾ ಅಲ್ಲಿ ಕೇವಲ ಹತ್ತು ಅಡಿ ಬಾವಿ ಬಗೆದರೆ ಸುಮಾರು ಹತ್ತು ಗಂಟೆಗಳ ಕಾಲ ಹತ್ತು ಹೆಚ್.ಪಿ. ಮೋಟಾರ್ ಹಾಕಿಕೊಂಡು ಹೊಡೆದರೂ ಕೂಡ ನೀರು ಮುಗಿಯುವುದಿಲ್ಲ. ಅಷ್ಟು ನೀರು ಸಿಗುತ್ತದೆ. ಹೀಗಿರುವಾಗ ಅವರು ಅಂತರ್ಜಲವನ್ನು ಉಪಯೋಗಿಸಿಕೊಳ್ಳದೆ ಮೇಲಿಂದ ಬರತಕ್ಕಂಥ ನೀರೆ ಅವರಿಗೆ ಬೇಕು. ಕರ್ನಾಟಕದ ರೈತರಿಗೆ ಮಾರಣಾಂತಿಕವಾಗಿ ಹೋಗಲಿ. ನಾವಾದರೂ ನೀರನ್ನು ಪಡೆದುಕೊಳ್ಳೋಣ ಎಂದು ಅವರಿಗೆ ಇರತಕ್ಕಂಥ ಅತಿ ಆಸೆ ಸಲ್ಲದು ಎಂದು ನಾನಾದರೂ ಭಾವಿಸುತ್ತೇನೆ. ಮಾನ್ಯ ತಮಿಳುನಾಡಿನ ರೈತ ಬಾಂಧವರಲ್ಲಿ ನನ್ನ ವಿನಂತಿ ಇಷ್ಟೆ, ಅಲ್ಲಿ ನೀರು ಇದೆ, ಇರತಕ್ಕಂಥ ನೀರನ್ನು ಉಪಯೋಗಿಸಿಕೊಳ್ಳಲಿ. ಕರ್ನಾಟಕದಲ್ಲಿ 200 ಅಡಿ ಬಾವಿ ತೆಗೆದರೂ ನೀರು ಬರದೇ ಇರತಕ್ಕಂಥ ಪರಿಸ್ಥಿತಿ ಇದೆ. ಇಲ್ಲಿ ಮಳೆ ಕೂಡ ಕಡಿಮೆಯಾಗಿದೆ. ತಮಿಳುನಾಡಿನಲ್ಲಿ ಸಮುದ್ರ ತೀರದಷ್ಟು ಹತ್ತಿರದಲ್ಲಿ ನೀರು ಸಿಕ್ಕಿದರೂ ಕೂಡ ಅದನ್ನು ಉಪಯೋಗಿಸಿಕೊಳ್ಳದೆ ಕರ್ನಾಟಕದ ನೀರೇಬೇಕು ಎಂದು ಹಠ ಹಿಡಿಯತಕ್ಕಂಥ ಭಾವನೆ ಬೇಡ, ಅಸಹಕಾರ ಮನೋಭಾವನೆ ಕೂಡ ಬೇಡ. ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರ ಕೇಂದ್ರದಲ್ಲಿತ್ತು, ಅವರು ಸರಿಪಡಿಸಿಕೊಂಡು ಬಂದರು. ತಮಿಳುನಾಡಿನಲ್ಲಿ ಬೇರೆ ವಿರೋಧ ಪಕ್ಷಗಳ ಸರ್ಕಾರ ಇದ್ದರೂ ಕೂಡ ಸಮಾನ ರೀತಿಯಲ್ಲಿ ಇಬ್ಬರನ್ನೂ ಸುಧಾರಿಸಿಕೊಂಡು ಬರತಕ್ಕಂಥ ವ್ಯವಸ್ಥೆಯನ್ನು ಕೇಂದ್ರಸರ್ಕಾರ ಮಾಡುತ್ತಿತ್ತು. ಆದರೆ ಈಗ ಮಾಡಿರತಕ್ಕದ್ದು ಏನು ? ಕೇವಲ ಒಂದು ರಾಜ್ಯದ ಸರ್ಕಾರವನ್ನು ಒಂದು ರಾಜ್ಯದ ಜನತೆಯನ್ನು ಸುಪ್ರೀತಗೊಳಿಸುವುದಕ್ಕೋಸ್ಕರ, ಒಬ್ಬ ನಾಯಕರನ್ನು ಸುಪ್ರೀತಗೊಳಿಸುವುದಕ್ಕೋಸ್ಕರ ಈ ದೇಶದ, ರಾಷ್ಟ್ರದ ಸಂಪತ್ತನ್ನೇ ಒಂದು ರೀತಿ ಬರೆದುಕೊಡುವ ರೀತಿಯಲ್ಲಿ ಕೇಂದ್ರಸರ್ಕಾರ ಅಸಹಕಾರ ಧೋರಣೆಯನ್ನು ತಾಳಿಕೊಂಡು ಹೊರಟಿದೆ. ಹಿಂದೆ ಇಬ್ಬರನ್ನೂ ಕೇಳಿ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತಾ ಇರಲಿಲ್ಲವೇ ? ಆ ಭಾವನೆ ಈಗ ಎಲ್ಲಿ ಹೋಯಿತು ? ಇಷ್ಟು ಜಾಗ್ರತೆಗಾಗಿ ತೀರ್ಮಾನ ತೆಗೆದುಕೊಂಡು ನ್ಯಾಯಾಲಯದ ಮುಂದೆ ಒಪ್ಪಿಕೊಂಡು ನ್ಯಾಯಮಂಡಲಿ ಮಾಡೇಮಾಡುತ್ತೇವೆ ಎಂದು ಹೇಳಬೇಕಾಗಿತ್ತೇ ? ಹಿಂದೆ ನ್ಯಾಯಾಮಂಡಲಿಗಳು ಮಾಡಿದಂಥ ಕೆಲಸಗಳು ಏನಾಗಿವೆ ? ಹತ್ತಾರುವರ್ಷಗಳು ಕಳೆದು ತೀರ್ಮಾನ ಬಂದಿದೆ, ಆ ತೀರ್ಮಾನಕ್ಕೆ ಬರುವ ವೇಳೆಯಲ್ಲಿ......

ಶ್ರೀ ಡಿ.ಬಿ. ಚಂದ್ರೇಗೌಡ.—ನಾವು ಮಾಡಿಯೇ ಮಾಡುತ್ತೇವೆ ಎಂದು ಕೇಂದ್ರಸರ್ಕಾರದವರು ತೀರ್ಮಾನ ತೆಗೆದುಕೊಂಡರು ಎಂದು ತಾವು ಹೇಳಿದಿರಿ, ಅದು ಹಾಗೆ ಅಲ್ಲ. ಸರ್ವೋಚ್ಚ ನ್ಯಾಯಾಲಯದಲ್ಲಿ ನಿರ್ದೇಶನ ಕೊಟ್ಟರು ಎಂದು ಆ ರೀತಿ ಮಾಡಿದ್ದಾರೆ. ಆದ್ದರಿಂದ ರಿಕಾರ್ಡ್‌ನಲ್ಲಿ ತಪ್ಪು ಹೋಗುವುದು ಬೇಡ.

ಶ್ರೀ ವಾಟಾಳ್ ನಾಗರಾಜ್.—ಅದನ್ನು ತಡೆಯಬಹುದಾಗಿತ್ತು.

ಶ್ರೀ ಹಲಗೇಗೌಡ.—ಸರ್ವೋಚ್ಚನ್ಯಾಯಾಲಯ ನಿರ್ದೇಶನಕೊಟ್ಟರೂ ಕೂಡ ಕಾಲಾವಕಾಶ ತೆಗೆದುಕೊಂಡು ಈ ಸಮಸ್ಯೆಯನ್ನು ನಾವು ಪರಿಹರಿಸುತ್ತೇವೆ. ಮಾತುಕತೆಯಲ್ಲಿ ಭಾಗವಹಿಸುತ್ತೇವೆ. ಎಂದು ಸಮಾಧಾನಪಡಿಸತಕ್ಕಂಥ ಮಾತನ್ನಾದರೂ ಹೇಳಬೇಕಾಗಿತ್ತು. ಇಷ್ಟೊಂದು ಸೌಜನ್ಯವನ್ನೂ ಕೂಡ ಕೇಂದ್ರಸರ್ಕಾರ ತೋರಲಿಲ್ಲವಲ್ಲ ಎನ್ನತಕ್ಕಂಥ ವಿಷಾದ ನಮಗೆ ಇದೆ.

ಶ್ರೀಮತಿ ಚಂದ್ರಪ್ರಭ ಅರಸ್.— ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ಕೊಡುತ್ತದೆ ಎಂದು ಮೊದಲೇ ಗೊತ್ತಿತ್ತು ತಾನೇ ಕೇಂದ್ರಸರ್ಕಾರಕ್ಕೆ, ಈ ಬಗ್ಗೆ ಅವರ ಪಾತ್ರ ಏನಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ.— ಹಿಂದಿನ ಸರ್ಕಾರದ ದಾಖಲೆಸೂ ಇದೆ, ಕೊಡುತ್ತೇವೆ.

ಶ್ರೀಮತಿ ಚಂದ್ರಪ್ರಭ ಅರಸ್.— ಯಾವುದೇ ಸರ್ಕಾರ ಇರಲಿ.

ಒಬ್ಬ ಮಾನ್ಯ ಸದಸ್ಯರು.— ಹಿಂದೆ ಜನತಾ ಸರ್ಕಾರ ಅಧಿಕಾರದಲ್ಲಿತ್ತು, ಅವರು ಏನೂ ಮಾಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್.— ಹಿಂದಿನ ಸರ್ಕಾರ ಬಹಳ ಅನ್ಯಾಯಮಾಡಿದೆ.

ಶ್ರೀಮತಿ ಚಂದ್ರಪ್ರಭ ಅರಸ್.— ಈಗಿನ ಕೇಂದ್ರಸರ್ಕಾರದ ಪಾತ್ರ ಏನು, ಅವರು ಏಕೆ ಪ್ರತಿಪಾದನೆ ಮಾಡಲಿಲ್ಲ. ನಮಗೆ ಪ್ರತಿಪಾದನೆ ಮಾಡುವುದಕ್ಕೆ ಅವಕಾಶಕೊಡಿ ಎನ್ನುವ ಮಾತನ್ನು ಏತಕ್ಕೆ ಹೇಳಲಿಲ್ಲ. ನೀವು ಹೇಳಿದ್ದೆಲ್ಲಾ ಒಪ್ಪುತ್ತೇವೆ ಎಂದು ಮೊದಲೇ ಹೇಳಿಕೊಟ್ಟರು ಎಂದು ಕಾಣುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಹಿಂದಿನ ಸರ್ಕಾರದವರೂ ಕೂಡ ಇದೇ ಮಾತನ್ನು ಕೋರ್ಟಿಗೆ ಹೇಳಿದ್ದಾರೆ. ಆ ದಾಖಲೆ ಬೇಕಾದರೆ ಕೊಡುತ್ತೇವೆ.

ಶ್ರೀ ಹೇಗೇಗೌಡ.— ಈ ವಿಚಾರ ಬಂದಾಗ ಕಟ್ಟುಪ್ಪಣೆಗೆ ಒಳಗಾಗಬೇಕಾಗಿತ್ತು. ಸಂಧಾನದ ಮಾತುಕತೆಗೆ ಅವರು ಪ್ರಯತ್ನ ಮಾಡಬೇಕಾಗಿತ್ತು. ಕೇಂದ್ರ ಸರ್ಕಾರ ಪ್ರತೀಕಾರ ಮನೋಭಾವನೆಯಿಂದ ಈ ರೀತಿ ಮಾಡಿದೆಯೋ ಏನೋ ಎನ್ನುವುದನ್ನು ಅವರೇ ಹೇಳಬೇಕು. ಒಬ್ಬ ನಾಯಕನನ್ನು ಸುಪ್ರೀತಿಗೊಳಿಸುವುದಕ್ಕೋಸ್ಕರ ಇಡೀ ಕರ್ನಾಟಕದ ಜನತೆಗೆ ಅನ್ಯಾಯ ಮಾಡಿದ್ದು ಸರಿಯಲ್ಲ. ನಾವು ಕೂಡ ಭಾರತೀಯರೆ, ಆದರೂ ನಮ್ಮನ್ನು ವಂಚಿಸುವ ಮಟ್ಟಕ್ಕೆ ಹೋಗಿದ್ದಾರೆ. ಇವತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ನಮ್ಮವರೇ ಇದ್ದಾರೆ. ಅವರು ನಮ್ಮ ರಾಜ್ಯದ ಹಕ್ಕುಗಳನ್ನು ಕಾಪಾಡುವಲ್ಲಿ, ಕರ್ನಾಟಕದ ಪರಿಸ್ಥಿತಿಯನ್ನು ಅರಿತುಕೊಂಡು ಕಾಪಾಡುತ್ತಾರೆನ್ನುವ ಭರವಸೆ ನನಗಿದೆ. ಈ ವಿಚಾರದಲ್ಲಿ ಅವರು ಇದುವರೆಗೂ ಒಂದು ಚಕಾರ ಶಬ್ಧವನ್ನು ಕೂಡ ಆಡಿಲ್ಲ. ನಮ್ಮ ಸರ್ಕಾರ ಮತ್ತು ಮಂತ್ರಿಮಂಡಲ ಆ ದಿಸೆಯಲ್ಲಿಯೂ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಕೇಂದ್ರದ ಮಟ್ಟದಲ್ಲಿ ನಮ್ಮ ರಾಜ್ಯದ ಹಕ್ಕುಗಳನ್ನು ಕಾಪಾಡುವ ಬಗ್ಗೆ ಹೋರಾಟ ಮಾಡಬೇಕು. ಇದನ್ನು ಜಾಸ್ತಿ ಮಾಡಬೇಕು. ಕರ್ನಾಟಕದಲ್ಲಿ ಒಳ್ಳೆಯ ಜನರಿದ್ದಾರೆ, ನಮ್ಮ ರಾಜ್ಯ ಒಳ್ಳೆಯ ಭೂ ಭಾಗವನ್ನು ಒಳಗೊಂಡಿದ್ದು, ಸಮೃದ್ಧಿಯಾದಂಥ ನಾಡು ಎನ್ನುವಂಥ ಭಾವನೆ ಅವರಲ್ಲಿ ಬರುವಂತೆ ಮಾಡಬೇಕು. ಈ ಒಂದು ಕೆಲಸವನ್ನು ಅಧಿಕಾರ ವರ್ಗದವರು, ಸಾರ್ವಜನಿಕ ಜೀವನದಲ್ಲಿರತಕ್ಕ ವ್ಯಕ್ತಿಗಳು ಮಾಡಬೇಕು. ಈ ಒಂದು ಕೆಲಸವನ್ನು ಮಾಡದೇ ಇದ್ದರೆ, ಕರ್ನಾಟಕದ ಭಾವನೆಗಳು ಪ್ರತಿಧ್ವನಿತವಾಗುವುದಿಲ್ಲ. ಇವತ್ತು ಕೇಂದ್ರ ಮಟ್ಟದಲ್ಲಿ ಕೇರಳ ಮತ್ತು ತಮಿಳುನಾಡು ರಾಜ್ಯಗಳ ಭಾವನೆಗಳು ಮಾತ್ರ ಪ್ರತಿಧ್ವನಿತವಾಗುತ್ತಿವೆ. ಅದರಿಂದ ಅವರು ತಮ್ಮ ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳುತ್ತಾರೆ. ಯಾವುದೇ ಕಾರಣಕ್ಕೂ ನಮ್ಮ ಹಕ್ಕುಗಳನ್ನು ಮೊಟಕುಗೊಳಿಸುವುದಕ್ಕೆ ಅವಕಾಶ ಕೊಡಬಾರದು. ಇನ್ನೊಂದು ವರ್ಷದಲ್ಲಿ ೧೦–೧೨ ಲಕ್ಷ ಎಕರೆ ಭೂಮಿಗೆ ನೀರು ಉಣಿಸತಕ್ಕ ವ್ಯವಸ್ಥೆಯನ್ನು ಮಾಡಲೇಬೇಕಾಗುತ್ತದೆ. ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಪ್ರಾರಂಭವಾದಂಥ ಹೇಮಾವತಿ ಯೋಜನೆಗೆ ದೇವರಾಜ ಅರಸು ಅವರ ಕಾಲದಲ್ಲಿ ೩–೪ ಪಟ್ಟು ಹೆಚ್ಚು ಹಣ ಕೊಟ್ಟು ಕೆಲಸ ಚುರುಕುಗೊಳಿಸಿದರು. ಇವತ್ತು ಆ ಯೋಜನೆ ವೆಚ್ಚ ೮೦೦ ಕೋಟಿಗೂ ಮೀರಿದೆ. ಇವತ್ತು ಬಾಗೂರು ನವಿಲೆ ಸುರಂಗದ ಕೆಲಸ ಪೂರ್ತಿಯಾದರೆ, ಸುಮಾರು ೭ ಲಕ್ಷ ಎಕರೆಗೆ ನೀರು ಉಣಿಸತಕ್ಕ ವ್ಯವಸ್ಥೆಯಾಗುತ್ತದೆ. ಕಾವೇರಿ ನೀರಿನಲ್ಲಿ ಸುಮಾರು ೩೬೦ ಟಿಎಂಸಿ ನೀರನ್ನು ಬರೀ ವ್ಯವಸಾಯಕ್ಕೆ ಮಾತ್ರ ಕೊಡಬೇಕಾಗುತ್ತದೆ. ಇವತ್ತು ನಮಗೆ ತಿಳಿದಿರುವಂತೆ, ಎಲ್ಲ ಪಟ್ಟಣಗಳು ಮತ್ತು ನಗರಗಳು ಕಾವೇರಿ ನೀರಿನ ಮೇಲೆ ಅವಲಂಬಿತವಾಗಿವೆ. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲದೆ ಕಾವೇರಿ ನದಿಯುದ್ದಕ್ಕೂ ಬರತಕ್ಕ ತಾಲ್ಲೂಕುಗಳು ಹಳ್ಳಿಗಳೂ ಕುಡಿಯುವ ನೀರಿಗಾಗಿ ಕಾವೇರಿ ನದಿಯನ್ನೇ ಅವಲಂಭಿಸಬೇಕಾಗಿದೆ. ಇಂಥ ಒಂದು ಪರಿಸ್ಥಿತಿ ಇರುವಾಗ ನಾವು ಇವತ್ತು ೪೦೦ ಟಿಎಂಸಿ ನೀರನ್ನು ಉಳಿಸಿಕೊಳ್ಳಬೇಕಾಗಿದೆ. ವ್ಯವಸಾಯಕ್ಕೆ ೩೪೦ ಟಿಎಂಸಿ ನೀರು ಉಪಯೋಗಿಸುವುದಕ್ಕೆ ಬೇಕಾದ ಎಲ್ಲ ರೀತಿಯ ಇನ್‌ಫ್ರಾಸ್ಟ್ರಕ್ಚರ್ ಕೂಡ ತಯಾರಾಗಿದೆ. ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವಂಥ ಹಕ್ಕು ಕೊಡಬೇಕೆಂದು ವಾದಿಸಬೇಕು. ತಮಿಳುನಾಡಿನಲ್ಲಿ ಮೂರು ಬೆಳೆ ಬೆಳೆಯುವುದಕ್ಕೆ ಅವಕಾಶ ಇರುವಾಗ ನಾವು ಇಲ್ಲಿ ಕನಿಷ್ಟಪಕ್ಷ ಒಂದು ಬೆಳೆಯನ್ನಾದರೂ ಬೆಳೆಯುವುದಕ್ಕೆ ಅವಕಾಶ ಇರಬೇಕೆನ್ನುವ ವಾದವನ್ನು ಇಡಬೇಕು. ಪಂಚಾಯಿತಿ ರಚಿಸುವ ಮೊದಲು ನ್ಯಾಯಾಲಯಕ್ಕೆ

ಈ ವಿಷಯವನ್ನು ಹೇಳಬೇಕಾಗಿತ್ತು. ಇವತ್ತು ನ್ಯಾಯಾಲಯ ಏನು ಒಂದು ತೀರ್ಮಾನ ತೆಗೆದುಕೊಂಡಿದೆ. ಆ ಬಗ್ಗೆ ಹೇಳಬೇಕೆಂದರೆ, ಕರ್ನಾಟಕ ರಾಜ್ಯದ ರೈತರ ಕಷ್ಟನಷ್ಟಗಳ ಅರಿವು ಅವರಿಗೆ ಇಲ್ಲ ಎಂದು ಹೇಳಬೇಕಾಗಿದೆ. ಇವತ್ತು ಏನಾದರೂ ಆಗಲೀ, ಕಾವೇರಿ ನದಿಯ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ನಾವು ಯಾವ ತ್ಯಾಗಕ್ಕೂ ಸಿದ್ಧರಾಗೋಣ. ಕನ್ನಡ ನಾಡಿನ ಸಂಸ್ಕೃತಿಯನ್ನು ಉಳಿಸಿಕೊಳ್ಳೋಣ. ಈ ದಿಸೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳ ಶಾಸಕರು ನಾಡಿನ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಒಂದಾಗೋಣ.

ಕೋರ್ಟಿನ ತೀರ್ಮಾನದಂತೆ ಪಂಚಾಯಿತಿ ಮಾಡುವುದು ಇದ್ದರೆ ಅದಕ್ಕೆ ಸಂಪೂರ್ಣವಾಗಿ ನಮ್ಮ ವಿರೋಧವನ್ನು ವ್ಯಕ್ತಪಡಿಸಬೇಕು. ನಾವು ಪಂಚಾಯಿತಿಗೆ ಹೆದರಿ ಈ ಮಾತನ್ನು ಹೇಳುತ್ತಿಲ್ಲ ಎಂದು ಆಗಲೇ ನಮ್ಮ ನಾಯಕರು ಹೇಳಿದ್ದಾರೆ. ನಾವು ಪರಸ್ಪರ ಮಾತಿನ ಮೂಲಕ ತೀರ್ಮಾನ ಮಾಡಿಕೊಳ್ಳೋಣ, ನಾವು ಅಕ್ಕ ಪಕ್ಕದವರಾಗಿದ್ದೇವೆ. ನಾವೆಲ್ಲರೂ ಸಹೋದರರಾಗಿರತಕ್ಕವರು. ಇವೊತ್ತು ಕರ್ನಾಟಕ, ತಮಿಳುನಾಡು, ಕೇರಳ ಬೇರೆ ಬೇರೆ ಅಲ್ಲ. ನಾವು ಕೋರ್ಟಿನಲ್ಲಿ ಹೋಗಿ ಗುದ್ದಾಡುವ ಬದಲು ನಾವುಗಳೇ ಕುಳಿತುಕೊಂಡು ಪರಿಹರಿಸಿಕೊಳ್ಳಬಹುದು. ಈ ದೃಷ್ಟಿಯಿಂದ ನಾವು ಪರಸ್ಪರ ಮಾತುಕತೆ ಮೂಲಕ ಆ ಮಟ್ಟಕ್ಕೆ ಕೈ ಹಾಕಬೇಕೆ ಹೊರತು ಬೇರೆ ಏನೂ ಇಲ್ಲ. ಇವೊತ್ತು ಕೇಂದ್ರ ಸರ್ಕಾರದವರು ಮನಸ್ಸುಮಾಡಿ ನ್ಯಾಯಮಂಡಲಿಯ ಬಗ್ಗೆ ಏನು ನಿರ್ಧಾರ ಮಾಡಿದ್ದಾರೆ ಅದನ್ನು ಪುನರ್ ಪರಿಶೀಲಿಸಬೇಕು ಈಗಾಗಲೇ ನಾವು ಮೇಲ್ಮನವಿಯನ್ನು ಸಲ್ಲಿಸಿದ್ದೇವೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರಿಗೆ ಸದ್ಬುದ್ಧಿ ಬಂದು ಕರ್ನಾಟಕ ರೈತರ ಹಿತಚಿಂತನೆಯನ್ನು ಕಾಪಾಡಬೇಕು. ಆ ಬಗ್ಗೆ ವಿಧಾನ ಸಭೆಯ ಸದಸ್ಯರು, ಮತ್ತು ಸಾರ್ವಜನಿಕರು ಎಲ್ಲ ರೈತಬಾಂಧವರು ಸೇರಿ ಒತ್ತಾಯ ಮಾಡಬೇಕಾದ್ದು ಅಗತ್ಯವಿದೆ. ನಾವೆಲ್ಲರೂ ಪಂಚಾಯಿತಿಗೆ ಒಪ್ಪಿಸಿರುವುದನ್ನು ವಿರೋಧಿಸಬೇಕು. ಹಾಗೆಯೇ ಕೇಂದ್ರದ ಸಹಾಯವನ್ನು ಕೇಳಬೇಕು. ಪಂಚಾಯಿತಿಗೆ ಒಪ್ಪಿಸಿರುವುದನ್ನು ತಪ್ಪಿಸಿ, ಮಾತುಕತೆಯ ಮೂಲಕ ಇದನ್ನು ಬಗೆಹರಿಸಬಹುದು. ರಾಜ್ಯದಲ್ಲಿ ಸಾಮರಸ್ಯ ಉಂಟಾಗುವಂತೆ ಮಾಡಬೇಕು. ರಾಜ್ಯದ ರೈತರ ಹಿತವನ್ನು ಕಾಪಾಡಬೇಕೆಂದು ಹೇಳಿ ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಅಧ್ಯಕ್ಷಿಣಿಯವರೆ, ಈ ಚರ್ಚೆಗೆ ಉತ್ತರವನ್ನು ಕೊಡಲಿಕ್ಕೆ ನಾನು ಎದ್ದು ನಿಂತಿಲ್ಲ. ಇದರ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಸುದೀರ್ಘವಾದ ಉತ್ತರವನ್ನು ಕೊಡುತ್ತಾರೆ. ಈ ಚರ್ಚೆಯ ಮಧ್ಯದಲ್ಲಿ ನಾನು ಮಧ್ಯೆ ಪ್ರವೇಶ ಮಾಡಲಿಕ್ಕೆ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಎದ್ದು ನಿಂತಿದ್ದೇನೆ. ಕೆಲವು ಕಾನೂನಿಗೆ ಸಂಬಂಧಪಟ್ಟ ವಿಚಾರಗಳು, ಮತ್ತು ನ್ಯಾಯಾಲಯಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳ ಬಗ್ಗೆ ನಾವು ಸರ್ಕಾರದ ವತಿಯಿಂದ ಸ್ಪಷ್ಟೀಕರಣಗೊಳಿಸತಕ್ಕದ್ದು ಮತ್ತು ಇದರ ಬಗ್ಗೆ ನಾವು ಸರಿಯಾದಂಥ ಒಂದು ವಿಶ್ಲೇಷಣೆ, ವಿವರವನ್ನು ಸಹ ಸದನಕ್ಕೆ ಕೊಡುವಂಥ ಅವಶ್ಯಕತೆ ಇದೆ. ಎಂಬ ವಿಚಾರವನ್ನು ನಾನು ಮನವರಿಕೆ ಮಾಡಿಕೊಂಡು ಈ ಅವಕಾಶವನ್ನು ತಮ್ಮಿಂದ ಕೇಳಿ ಬಹಳ ಚುಟುಕಾಗಿ, ವಿಷಯಕ್ಕೆ ಸೀಮಿತವಾಗಿ, ಅಥವಾ ಕಾನೂನು ಅಥವಾ ನ್ಯಾಯಾಲಯಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಇಲ್ಲಿ ತರದೇ ಕೆಲವೊಂದು ವಿಚಾರಗಳನ್ನು ಸಭೆಯ ಮುಂದಿಡಬೇಕೆಂದು ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷಿಣಿಯವರೆ, ಬಹಳ ವರ್ಷಗಳಿಂದ ಅಂದರೆ ಬಹುಶಃ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ಒಂದು ರೀತಿಯ ತಾಂತ್ರಿಕ ಅಥವಾ ಕಾನೂನಿನ ಅದನ್ನು ಶಿಥಿಲ ಸಮರಗಳು ಎಂದು ಹೇಳಬಹುದು ಅಥವಾ ಒಂದು ರೀತಿಯಲ್ಲಿ ಬೇರೆ ಬೇರೆ ಒಂದು ವೇದಿಕೆಗಳಲ್ಲಿ ಸುಪ್ರೀಮ್ ಕೋರ್ಟಿನಲ್ಲಿ ಏನು ಒಂದು ರೀತಿಯಲ್ಲಿ ಈ ಒಂದು ತಾಂತ್ರಿಕ ಮತ್ತು ಕಾನೂನಿಗೆ ಸಂಬಂಧಪಟ್ಟಂಥ ಹೋರಾಟ ಸಂಘರ್ಷಣೆ ನಡೆಯುತ್ತಿತ್ತು ಅದು ಇವೊತ್ತು ಒಂದು ಹಂತಕ್ಕೆ ಬಂದಿದೆ. ಅದು ತಮಗೆ ಗೊತ್ತಿದೆ. ಅಧ್ಯಕ್ಷಿಣಿಯವರೆ, ಆರ್ಟಿಕಲ್ ೨೬೨ರ ಪ್ರಕಾರ ಏನು ಈಗ ನದಿ ನೀರಿನ ವಿವಾದ ಅಥವಾ ಅದನ್ನು ಬಗೆಹರಿಸಬಹುದಾದಂಥ ವಿವಿಧ ವಿಷಯಗಳ ಬಗ್ಗೆ ಸ್ಪಷ್ಟವಾದಂಥ ಒಂದು ಸೀಮಾರೇಖೆಯನ್ನು ನಮ್ಮ ಸಂವಿಧಾನ ಕರ್ತರು ಹಾಕಿ ಕೊಟ್ಟಿದ್ದಾರೆ. ಅದರ ಪರಿಮಿತಿಯಲ್ಲಿ ನ್ಯಾಯಾಲಯವಾಗಲಿ ಅಥವಾ ಯಾವುದೇ ಒಂದು ಸರ್ಕಾರವಾಗಲಿ ಕೆಲಸ ಮಾಡಬೇಕೆಂದು ಹಾಕಿಕೊಟ್ಟಂಥ ಒಂದು ಸೀಮಿತವಾದ ಪರಿಮಿತಿ ಆರ್ಟಿಕಲ್ ೨೬೨ರ ಬಗ್ಗೆ ತಮ್ಮ ಅನುಮತಿ ಪಡೆದು ಹೇಳುತ್ತೇನೆ.

"Parliment may, by law provide for the adjudication of any dispute or complaint with respect to the use, distribution or control of waters or any inter-state river or river valley:

Notwithstanding anything contained in this Constitution Parliament may be law provide that neither the Supreme Court nor any other court shall exercise jurisdiction in respect of any such dispute or complaint as is referred to in Clause (1).'' ಈ ಒಂದು ಕಾನೂನಿಗೆ ಅನ್ವಯಿಸಿ ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಕಾನೂನನ್ನು ಜಾರಿಗೆ ತಂದಿದ್ದೇವೆ. ಇಂತಹ ಸಮಸ್ಯೆಗಳು ಸಂಘರ್ಷಣೆಗಳು ಬಂದು ರಾಜ್ಯದ ಜೊತೆಯಲ್ಲಿಯಾಗಲೀ ಅಥವಾ ಮತ್ತೊಂದು ರಾಜ್ಯದ ಜೊತೆಯಲ್ಲಾಗಲೀ ಆದಾಗ ನೇರವಾಗಿ ಸುಪ್ರೀಂಕೋರ್ಟ್ ಅಥವಾ ಯಾವುದಾದರೂ ನ್ಯಾಯಾಲಯದ ಕಟಕಟೆಯನ್ನು ಪ್ರವೇಶ ಮಾಡುವ ಮೊದಲು ಅದಕ್ಕೆ ಬೇಕಾದಂತಹ ಒಂದು ಸಂಧಾನದ ವೇದಿಕೆಯನ್ನು ಕೊಡಬೇಕೆಂಬ ಸ್ಪಷ್ಟ ಉದ್ದೇಶದಿಂದ ಇದನ್ನು ಮಾಡಿಕೊಂಡಿದ್ದೇವೆ. ಇಂತಹ ಸಂಘರ್ಷಣೆಗಳನ್ನು ಹೋಗಲಾಡಿಸಬೇಕೆಂಬ ಸದುದ್ದೇಶದಿಂದ ನಮ್ಮ ಸಂವಿಧಾನದ ಕರ್ತೃಗಳು ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆ್ಯಕ್ಟ್ ಅನ್ನು ಕೂಡ ರಚನೆ ಮಾಡಿದ್ದಾರೆ. ಈ ರಾಷ್ಟ್ರದಲ್ಲಿ ಒಂದು ಒಳ್ಳೆಯ ಸದುದ್ದೇಶವನ್ನು ಬೆಳೆಸಬೇಕು ಸತ್ಸಂಪ್ರದಾಯವನ್ನು ಬೆಳೆಸಬೇಕೆಂಬುದ್ದೇಶದಿಂದ ಇದನ್ನು ಮಾಡಿದ್ದಾರೆ. ಸಂವಿಧಾನದ ಆರ್ಟಿಕಲ್ ೨೬೨ಕ್ಕೆ ಅನ್ವಯ ಮಾಡಿಕೊಂಡು ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆ್ಯಕ್ಟನ್ನು ಇಲ್ಲಿ ಕೊಟ್ಟಿದ್ದಾರೆ. ಅದರ ಪ್ರಕಾರ ಯಾವುದೇ ಒಂದ ರಾಜ್ಯ According to Section 3, if it appears to the Government of any State that a water dispute with the Government of any other State has arisen or is likely to arise by reason of the fact that the interest of the State or of any of the inhabitants there of in the waters of interstate river /river valley are likely to be affected prejudically etc., etc., the State Government may, in such form or manner as may be prescribed, request the Central Government to refer the water dispute to the Tribunal for adjudication.'' ಇದರಂತೆ ತಮಿಳುನಾಡಿನವರು ೧೯೮೬ರಲ್ಲಿ ಅರ್ಜಿಯನ್ನು ಕೇಂದ್ರ ಸರಕಾರಕ್ಕೆ ಕೊಟ್ಟರು. ಅವರು ಸುಪ್ರೀಂ ಕೋರ್ಟಿಗೆ ಹೋಗಿದ್ದು ಯಾವ ಸಂದರ್ಭದಲ್ಲಿ ಎಲ್ಲಿ ಹೋದರು ಎಂಬುದರ ಬಗ್ಗೆ ವಿವರವಾದ ಬೆಳವಣಿಗೆಯನ್ನು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಒಂದು ರಾಜ್ಯದವರು ಒಂದು ಅರ್ಜಿಯನ್ನು ಕೊಟ್ಟ ಕೂಡಲೇ ಅದನ್ನು ಟ್ರಿಬ್ಯೂನಲ್‌ಗೆ ಕೊಡಬೇಕೆಂದು ಹೇಳತಕ್ಕಂಥಾದ್ದು ಸರಿಯಲ್ಲ. ಏಕೆಂದರೆ ಸೆಕ್ಷನ್ ೪ (೧)ರ ಪ್ರಕಾರ

"when any request under Section 3 is received from any State Government in respect of any water dispute and the Central Govesnment is of the opinion that the water dispute cannot be settled by negotiation, the Central Government shall by Notification in the official gazette constitute a tribunal for adjudication of the water dispute.'' ಅದನ್ನು ಯಾವಾಗ ಟ್ರಿಬ್ಯೂನಲ್‌ಗೆ ಕೊಡಬೇಕೆಂದರೆ ಅದು ಕೇಂದ್ರ ಸರ್ಕಾರದ ಸಾರ್ವಭೌಮತ್ವದ ಪರಿಮಿತಿಗೆ ಬರುವುದಿಲ್ಲ. ಮತ್ತು ಸಂಧಾನದ ಮೂಲಕ ಅದನ್ನು ಬಗೆಹರಿಸಲಿಕ್ಕೆ ಆಗುವುದಿಲ್ಲ ಎಂಬ ಒಂದು ಮನವರಿಕೆ ಆದಾಗ ಮಾತ್ರ ಇದು ಸುಪ್ರೀಂ ಕೋರ್ಟಿನಲ್ಲಿ ಆಗತಕ್ಕಂಥಾದ್ದು ಅಲ್ಲ ಅಥವಾ ಯಾವುದೇ ರಾಜ್ಯಕ್ಕೆ ಅಂದರೆ ಆ ವ್ಯಾಜ್ಯಕ್ಕೆ ಸಂಬಂಧಪಟ್ಟಂತಹ ರಾಜ್ಯಗಳಿಗೆ ಮಾತ್ರ ಸೀಮಿತವಾದುದಲ್ಲ. ಇದನ್ನು ಸಂಧಾನದಿಂದ ಬಗೆಹರಿಸಲಿಕ್ಕೆ ಆಗುವುದಿಲ್ಲವೆಂಬ ಒಂದು ಅಭಿಪ್ರಾಯವನ್ನು ಕೇಂದ್ರ ಸರಕಾರ ತಾಳಿದರೆ ಮಾತ್ರ ಇದು ಸಾಧ್ಯವಾಗುತ್ತದೆ. That is the positive and active role which is contemplated under this Act read with Article 262 of the Constitution of India. ಇದು ಸಂವಿಧಾನ ಕೊಟ್ಟಂತಹ ರಾಷ್ಟ್ರೀಯ ಕರ್ತವ್ಯ ಅಥವಾ ಸಂವಿಧಾನದ ಮೂಲಕ ಬಂದಂತಹ ಒಂದು ಶಾಸನ ಇದು ಕೊಟ್ಟಂತಹ ಕರ್ತವ್ಯದ ಜವಾಬ್ದಾರಿಯನ್ನು ನಿರ್ವಹಿಸತಕ್ಕಂಥಾದ್ದು ಯಾವುದೇ ರಾಜ್ಯಗಳಿಗೆ ಸಂಬಂಧಪಟ್ಟಂಥಾದು ಅಲ್ಲ ಅಥವಾ ಸುಪ್ರೀಂ ಕೋರ್ಟಿಗೆ ಮಾತ್ರ ಸಂಬಂಧಪಟ್ಟಂಥಾದ್ದು ಅಲ್ಲ. ಇದು ಸಂಪೂರ್ಣವಾಗಿ ಕೇಂದ್ರ ಸರಕಾರದ ಅದರ ಸಾರ್ವಭೌಮತ್ವಕ್ಕೆ ಸಂಬಂಧಪಟ್ಟಂಥಾದ್ದು ಅದರ ಪರಿವ್ಯಾಪ್ತಿಗೆ ಸಂಬಂಧಪಟ್ಟಂತಹ ವಿಚಾರವಾಗಿದೆ. ಅದು ಸಂಪೂರ್ಣವಾಗಿ ಈ ಶಾಸನದಲ್ಲಿ ಈ ಸಂವಿಧಾನದಲ್ಲಿ ಒಡಮೂಡಿದೆ ಎಂಬುದನ್ನು ಈ ಸದನಕ್ಕೆ ನಾನು ತಿಳಿಸಲಿಚ್ಛಿಸುತ್ತೇನೆ. ಆದರೆ ಇವತ್ತು ಸುಪ್ರೀಂ ಕೋರ್ಟಿನಲ್ಲಿ ಏನು ವ್ಯಾಜ್ಯಗಳು ಇವೆ ಅವು ಬಹಳ ಸಮಯದಿಂದ ಇವೆ. ಕೇವಲ ೧೯೮೩ರಿಂದ ಮಾತ್ರ ಈ ವ್ಯಾಜ್ಯಗಳು

ಸುಪ್ರೀಂಕೋರ್ಟಿಗೆ ಬಂದಿರತಕ್ಕವಲ್ಲ. ಈಗ ತೀರ್ಮಾನವಾಗಬೇಕಾಗಿರತಕ್ಕಂಥ ವ್ಯಾಜ್ಯಗಳು ಏನಿವೆ ಇವು ಗಳನ್ನು ತಮಿಳ್ನಾಡಿನ ರೈತರು ೨೬-೧೧-೧೯೭೪ರಲ್ಲಿ ಹೂಡಿರಬಹುದು. ಆದರೆ ಇದರ ಇತಿಹಾಸವನ್ನು ನೋಡಿದರೆ ಈಗ ನಡೆದಿರತಕ್ಕ ಕೆಲವು ಘಟನಾವಳಿಗಳನ್ನು ಹೋಲಿಸಿ ನೋಡಿದರೆ, ಸಮಾಲೋಚನೆಮಾಡಿ ನೋಡಿದರೆ ಗೊತ್ತಾಗುತ್ತದೆ. ಇದಕ್ಕೆ ನಾನು ಯಾವುದೇ ರಾಜಕೀಯ ಸಂಬಂಧವನ್ನು ಕಲ್ಪಿಸಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ನ್ಯಾಯಾಲಯದ ವೇದಿಕೆಯಲ್ಲಿ ನಡೆದಿರತಕ್ಕ ಘಟನಾವಳಿ ಗಳನ್ನು ಈ ಸದನದ ಮುಖೇನ, ಸದನದ ಸದಸ್ಯರ ಮುಖೇನ ನಮ್ಮ ಕರ್ನಾಟಕ ರಾಜ್ಯದ ಜನರ ಗಮನಕ್ಕೆ ತರುವುದಾದರೆ Writ petition No. 303 of 1971 on the file of the Supreme Court. ತಂಜಾವೂರು ಜಿಲ್ಲೆಯ ಕಾವೇರಿ ವಾಟರ್ ಪ್ರೊಟೆಕ್ಷನ್ ಕಮಿಟಿ ಕೋ ಆಪರೇಟಿವ್ ಲಿಮಿಟೆಡ್, ಕುಂಭಕೋಣಂ ಇವರು ಈ ರಿಟ್ ಪಿಟಿಷನನ್ನು ೧೯೭೧ನೇ ಇಸವಿಯಲ್ಲಿ ಸುಪ್ರೀಂ ಕೋರ್ಟಿಗೆ ಹಾಕಿದಾಗ ಅಂದರೆ ಮೊದಲನೇ ರಿಟ್ ಪಿಟಿಷನ್ ಹಾಕಿದವರು ಎಂದರೆ ಮುರಸೋಲಿ ಮಾರನ್‌ರವರು. Sri Murasoli Maran. who is now the Union Minister was the first petitioner in Write petition No 303 of 1971. ಈಗ ಇವರು ಕೇಂದ್ರ ಸರ್ಕಾರದ ಸಚಿವರಾಗಿದ್ದಾರೆ ಇದು ಸುಪ್ರೀ ಕೋರ್ಟಿನ ವ್ಯಾಪ್ತಿಗೆ ಬರುವುದಿಲ್ಲ. ಈ ವ್ಯಾಜ್ಯವನ್ನು ಅಲ್ಲಿ ವ್ಯವಹರಿಸುವುದಕ್ಕಾಗುವುದಿಲ್ಲವೆಂದು it was dismissed as withdrawn on 24-7-75. ೧೯೭೫ನೇ ಇಸವಿಯಲ್ಲಿ ಈ ಒಂದು ವ್ಯಾಜ್ಯವನ್ನು ಸುಪ್ರೀಂ ಕೋರ್ಟಿನಲ್ಲಿ ಸನ್ಮಾನ್ಯ ಮುರಸೋಲಿ ಮಾರನ್‌ರವರು ಸಾಧನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಈಗ ಇದನ್ನು ಸಾಧನೆ ಮಾಡಿದ್ದಾರೆ. ಇದು ಒಂದು ವಿಷಾದನೀಯ ಸಂಗತಿ, ಆಗ ಅವರಿಗೆ ಇದು ಸಾಧ್ಯ ಆಗಿರಲಿಲ್ಲ. ಏಕೆಂದರೆ, ಸುಪ್ರೀಂ ಕೋರ್ಟ್, ಒಪ್ಪಲಿಲ್ಲ, ಇದು ಅವರ ಜ್ಯೂರಿಸ್‌ಡಿಕ್ಷನ್‌ನಲ್ಲಿರಲಿಲ್ಲ. That was got withdrawn. What could not be achieved at that particular point of time and the very same first petitioner of Writ Petition No. 303 of 1971, he could achieve it today. ಈ ದಿವಸ ಈ ಪರಿಸ್ಥಿತಿ ಯಾವ ರೀತಿ ಮುಂದುವರಿಯುತ್ತಿದೆ ಎಂಬುದನ್ನು ನೋಡಬಹುದು. ಈಗ ಅನೇಕ ಸನ್ಮಾನ್ಯ ಸದಸ್ಯರು ಈ ಬಗ್ಗೆ ಹೇಳಿದರು. ಆದರೆ ನಾನು ಅದರ ಬಗ್ಗೆ ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ಏಕೆಂದರೆ ಮಾನ್ಯ ಸದಸ್ಯರಾದ ಬೈರೇಗೌಡರು ೧೯೨೪ರ ಅಥವಾ ಅದರ ಹಿಂದಿನ ಎಲ್ಲ ಘಟನಾವಳಿ ಗಳನ್ನೂ ಹೇಳಿದ್ದಾರೆ. ಆದ್ದರಿಂದ ನಾನು ವಿವರಕ್ಕೆ ಹೋಗುವುದಿಲ್ಲ. ಆದರೆ ಇಲ್ಲಿ ಒಂದು ವಿಚಾರ ಎಂದರೆ ಸೆಕ್ಷನ್ ೨೪ರಲ್ಲಿ ಚಕ್ರಾಧಿಪತ್ಯದ ಪ್ರಭಾವವನ್ನು ಸಾಮಂತರಾಜರ ಮೇಲೆ ಹೇರಿದಂಥ ಪ್ರಸಂಗ ೧೯೨೪ರಲ್ಲಿ ಏನು ನಡೆಯಿತು ಅದೇ ಚಕ್ರಾಧಿಪತ್ಯದ ಮತ್ತೊಂದು ಪ್ರಭಾವವಾಗಿ ಈ ಕರ್ನಾಟಕ ರಾಜ್ಯವನ್ನು ಸಾಮಂತ ರಾಜ್ಯವಾಗಿ ಪರಿಗಣಿಸಿದರೋ ಏನೋ ಎಂಬ ಭಾವನೆ ಬರುತ್ತಿದೆ. This has got to be resisted by any farmers of any State. ನಾನು ಇದರ ಬಗ್ಗೆ ಹೆಚ್ಚಿನ ವಿಶ್ಲೇಷಣೆಗೆ ಹೋಗುವುದಿಲ್ಲ. ಟಿಪ್ಪುಸುಲ್ತಾನ್‌ನ ಮೇಲೆ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಹೋದಂಥ ಕತೆಯನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.
ಆದರೆ ತಮಿಳುನಾಡಿನ ಸಮಸ್ಯೆ ಇವತ್ತಿನ ಸಮಸ್ಯೆಯಲ್ಲ, ೧೯೨೪ರಲ್ಲಿ ಅಥವಾ ಅದಕ್ಕೂ ಹಿಂದೆ. ಇದ್ದಂಥ ಸಮಸ್ಯೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ರಾಜಕೀಯ ಲೇಪವನ್ನು ಹಾಕುವುದು ಬಿಟ್ಟು ಹೇಳಿದೆ.

SHRI M. VEERPPA MOILY.—I am not mixing.

SHRI D.B. CHANDRE GOWDA.—You are making a vital charge against the Central Minister as if he has used his influence.

SHRI M. VEERAPPA MOILY.—I neversaid.

SHRI D.B. CHANDRE GOWDA.—What else it is? ಸರ್ವೋಚ್ಚ ನ್ಯಾಯಾಲಯದಲ್ಲಿ ಕೊಟ್ಟಿರತಕ್ಕಂಥ ಒಂದು ನಿರ್ದೇಶನವನ್ನು ಜಾರಿಗೊಳಿಸಿದ ಕೇಂದ್ರ ಸರ್ಕಾರದ ಮೇಲೆ ಅದರ ಹಿಂದೆ ನಡೆದಂಥ ಪ್ರಸಂಗಗಳನ್ನೆಲ್ಲಾ ಕೆಲವೊಂದು ಕಾರಣಕ್ಕಾಗಿ ನಾನು ಇಲ್ಲಿ ಹೇಳಲಿಲ್ಲ. ಈಗ ಅದನ್ನು ತರಬೇಕೆಂದು ಕಾಣುತ್ತದೆ. ಅವಕ್ಕೆ ತಾವು ಅವಕಾಶವನ್ನು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮ್ಮ ಮನಸ್ಸಿನಲ್ಲಿ ಏನಿದೆ ಅದರಂತೆ ಸಂಪೂರ್ಣವಾಗಿ ವಾಸ್ತವವಾದ ಘಟನಾವಳಿಯನ್ನು ಈ ಸದನದಲ್ಲಿ ಇಡುತ್ತೇನೆ. ಅದರ ಬಗ್ಗೆ ವಾದ ಮಾಡುವುದಕ್ಕೆ ನಾನು ಹೋಗುವುದಿಲ್ಲ. ನಾನು ಚರ್ಚೆಯನ್ನು ಕೂಡ ಮಾಡುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಆ ಕೆಲಸ ಮಾಡುತ್ತಾರೆ. ಆದರೆ ಸುಪ್ರೀಮ್ ಕೋರ್ಟಿನಲ್ಲಿ ಏನು ನಡೆಯಿತು...

ಶ್ರೀ ಡಿ.ಬಿ. ಚಂದ್ರೇಗೌಡ.—It has gone on record. ರಿಟ್ ಪಿಟೀಷನ್ ೩೦೩ ಅನ್ನು ೧೯೭೦ನೇ ಇಸವಿಯಲ್ಲಿ ಶ್ರೀ ಮುರಸೋಳಿ ಮಾರನ್ ಎನ್ನತಕ್ಕಂಥವರು ಹಾಕಿದ್ದರು. ಅವರು ಈವತ್ತು ಕೇಂದ್ರದ ಮಂತ್ರಿಯಾಗಿ ಆಗ ಸಾಧ್ಯವಾಗದಿದ್ದುದನ್ನು ಈಗ ಸಾಧ್ಯ ಮಾಡಿಕೊಂಡಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ. ೧೯೭೭ನೇ ಇಸವಿಯಲ್ಲಿ ರಿಟ್ ಪಿಟೀಷನ್ ವಾಪಸ್ ತೆಗೆದುಕೊಂಡು ಆಗ ಏನು ಮಾಡಲಿಕ್ಕೆ ಸಾಧ್ಯವಾಗಲಿಲ್ಲವೋ ಅದನ್ನು ಈಗ ಸಾಧ್ಯ ಮಾಡಿಕೊಂಡಿದ್ದಾರೆಂದು ಹೇಳಿದರು. ಅಷ್ಟಕ್ಕೇ ಅವರು ಬಿಟ್ಟಿಲ್ಲ, ಮತ್ತೊಂದು ಹೆಜ್ಜೆ ಮುಂದಕ್ಕೆ ಹೋಗಿ ಅವರು ಏನು ಹೇಳಿದ್ದಾರೆಂದರೆ ಕರ್ನಾಟಕ ರಾಜ್ಯ ಒಂದು ಸಾಮಂತ ರಾಜ್ಯ ಎನ್ನುವ ಭಾವನೆ ಜನರಲ್ಲಿ ವ್ಯಕ್ತವಾಗುವುದಕ್ಕೆ ಈ ಒಂದು ನಿರ್ಣಯದ ಮೂಲಕ ಸಾಧ್ಯವಾಗುತ್ತದೆಂದು ಹೇಳಿದ್ದಾರೆ. ಹಿಂದೆ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಮೇಲೆ ಇದನ್ನು ಮಾಡಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಅದರ ವಿರುದ್ಧವಾದ ವಾದವನ್ನು ತಾವು ಮಾಡುತ್ತಿದ್ದೀರಿ. Where does it lead to?

ಒಬ್ಬ ಮಾನ್ಯಸದಸ್ಯರು.—ಆಗ ಸನ್ಮಾನ್ಯ ಎನ್.ಟಿ. ರಾಮರಾವ್‌ರವರು ನಮ್ಮ ಶಂಕರಾನಂದರ ಮೇಲೆ ಸಾರ್ವಜನಿಕವಾಗಿ ಟೀಕೆ ಮಾಡಿದ್ದರು. ಕರ್ನಾಟಕ ರಾಜ್ಯದವರು ಎಂದು ಅವರು ಹೇಳಿದ್ದು ಉಂಟು.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಎನ್.ಟಿ ರಾಮರಾವ್‌ರವರು ಹಾಗೆ ಮಾಡಿದರು, ಅದಕ್ಕಾಗಿ ನಾವು ಮಾಡಬೇಕೆಂದು ಇಲ್ಲ. ಈ ಬಗ್ಗೆ ನೆನ್ನೆ ಮಾನ್ಯ ಸಭಾನಾಯಕರು ನಡೆದುಕೊಂಡ ರೀತಿಗಾಗಿ ಇವತ್ತು ಸರ್ಕಾರದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಮಂತ್ರಿಗಳಾಗಿ ತಾವು ಮಾಡತಕ್ಕಂಥ ವಾದಕ್ಕೆ ಅರ್ಥಾತ್ ಯಾವ ಸಂಬಂಧವೂ ಇಲ್ಲ. ಕೇಂದ್ರದ ಜೊತೆಗೆ ಯಾವರೀತಿ ವ್ಯವಹಾರ ಮಾಡಬೇಕೆಂದು ಹೇಳಿಬಿಡಿ, ಬೇಕಾದರೆ ಆ ರೀತಿ ಮಾಡೋಣ.

SRI M.D. NANJUNDASWAMY.—The Hon. Law Minister is casting aspersions on the highest judiciary in the country. ಮಾನ್ಯ ಮುರಸೋಳಿ ಮಾರನ್‌ರವರು ಆಗ ಮಾಡಲಿಕ್ಕೆ ಆಗದಿದ್ದದನ್ನು ಈಗ ಸಾಧನೆ ಮಾಡಿದ್ದಾರೆ, ಕಾರಣ ಅವರು ಕೇಂದ್ರದ ಮಂತ್ರಿಯಾಗಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದರು. That definitely amounts to casting aspersions on the highest judiciary. Whoever it is whether Shri Murasoli Maran is the Union Minister or the President of the Indian Republic but once you say that he has achieved what he could not achieve as an ordinary Member of Parliament, it means so many things, It means that he has influenced the Members of the Supreme Court.

SRI M. VEERAPPA MOILY.—Not necessarily.

SHRI M.D. NANJUNDASWAMY.—Yes. Definitely, yes. How could he achieve it unless he does not have a case on merits? How could he do it? I will be happy if the Hon. Law Minister amends his statement.

ಶ್ರೀ ಎಂ. ವೀರಪ್ಪಮೊಯ್ಲಿ.—ಬಹುಶಃ ನಾನು ಅನೇಕ ಘಟನಾವಳಿಗಳನ್ನು ನೋಡಿ ಏನು ಹೇಳುತ್ತಿದ್ದೇನೆ ಎಂದರೆ ಇವರಲ್ಲಿ ಯಾವ ಇನ್‌ಟರ್‌ಫಿಯರೆನ್ಸ್ ಇಲ್ಲ. ಯಾವ ತರಹದ ಇಂಟರ್‌ಪ್ರಿಟೇಷನೂ ಮಾಡುತ್ತಿಲ್ಲ. ೧೯೭೧ ರಿಂದ ಸುಪ್ರೀಂ ಕೋರ್ಟಿನಲ್ಲಿ ಏನು ನಡೆದಿದೆ ಅಥವಾ ಸುಪ್ರೀಂ ಕೋರ್ಟಿನಲ್ಲಿ ಯಾವ ಅರ್ಜಿದಾರರು ಅರ್ಜಿ ಹಾಕಿದ್ದಾರೆ ಅಲ್ಲಿ ಏನು ನಡೆದಿದೆ ಎಂಬ ಘಟನಾವಳಿಗಳನ್ನು ಹೇಳುತ್ತಿದ್ದೇನೆ. ಅದರಲ್ಲಿ ಅಲ್ಪಾಂಶ ಏನಾದರು ತಪ್ಪಿದ್ದರೆ...

SRI H. EKANTHAIAH.—You are attributing certain motives on the Union Minister.

SRI D. B. CHANDRE GOWDA.—There are two things. One is, as rightly pointed out by the Professor, you are attributing motives to the judgement of the Supreme Court. Secondly, you are bringing the name of the person, who is a Central Cabinet Minister. ಅಷ್ಟಕ್ಕೆ ಹೇಳಿಬಿಡಲಿಲ್ಲ. ಆಗ ಸಾಧ್ಯವಾಗದಿದ್ದುದನ್ನು ಈಗ ಸಾಧ್ಯ ಮಾಡಿದ್ದಾರೆಂದು ಹೇಳಿರುವುದು ರೆಕಾರ್ಡ್‌ನ್ನಗೆ ಹೋಗಿದೆ.

SRI M. VEERAPPA MOILY.—That is not the stand of the Government of India to day

SRI D. B. CHANDRE GOWDA.—He is an Hon. Member of Parliament and he is representing the nation as a Minister. Can we cast such aspersions on the Floor of the House which has gone on record? ನಾಳೆ ದಿವಸ ಇದು ಸಂಸತ್ತು ಮತ್ತು ಶಾಸನಸಭೆಯ ಸಂಘರ್ಷಕ್ಕೆ ಎಡೆಮಾಡಿಕೊಡತಕ್ಕ ಸಂದಿಗ್ಧ ಪರಿಸ್ಥಿತಿ ಉಂಟಾಗಬಹುದು. ಜವಾಬ್ದಾರಿಯುತ ಮಂತ್ರಿಯಾದ ಹಾಗೂ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಯಾದ ನಿಮ್ಮಿಂದ ನಾನು ಅದನ್ನು ಬಯಸುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದರಲ್ಲಿ ಯಾರ ಮೇಲೂ ಕೂಡ ಆಕ್ಷೇಪ ಮಾಡತಕ್ಕ ಪ್ರಶ್ನೆ ಉದ್ಭವವಾಗುವುದಿಲ್ಲ. ಆ ಉದ್ದೇಶ ಕೂಡ ನನಗೆ ಇಲ್ಲ ; ಸುಪ್ರೀಂ ಕೋರ್ಟ್‌ನಲ್ಲಿ ಏನು ತೀರ್ಮಾನವಾಗಿದೆ ಅದು ಏಕೆ ತೀರ್ಮಾನವಾಯಿತು? ಸುಪ್ರೀಂ ಕೋರ್ಟ್ ಮುಂದೆ ಈಗಿರತಕ್ಕ ಕೇಂದ್ರ ಸರ್ಕಾರದ ಅಡಿಷನಲ್ ಸಾಲಿಸಿಟರ್ ಜನರಲ್ ಏನು ಬೇಡಿಕೆಯನ್ನು ಸಲ್ಲಿಸಿದ್ದಾರೆ, ಏನು ಆರ್ಗ್ಯುಮೆಂಟ್ ಮಾಡಿದ್ದಾರೆ. ಅದಕ್ಕೆ ಅನುಗುಣವಾಗಿ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟಿದೆ. ಅದನ್ನು ನಾವು ಮರೆಯಬಾರದು. That is not a reflection.

ಶ್ರೀ ಸಿ. ಬೈರೇಗೌಡ.—ಅಷ್ಟೇ ಅಲ್ಲ, ಕೇಂದ್ರ ಸರ್ಕಾರದ ನಿಲುವು ಮೊದಲು ಏನಿತ್ತು ?

ಶ್ರೀ ಎಂ, ವೀರಪ್ಪ ಮೊಯ್ಲಿ.—ಕೇಂದ್ರ ಸರ್ಕಾರದ ನಿಲುವಿನ ವಿಚಾರಕ್ಕೆ ಇವತ್ತು ನಾವು ಬರುವುದು ಇದ್ದರೆ ಜಡ್ಜ್‌ಮೆಂಟಿನ ಪ್ಯಾರಾ ಲನ್ನು ನೋಡಬೇಕಾಗುತ್ತದೆ. ನಾನು ಅದಕ್ಕೆ ಆಮೇಲೆ ಬರುತ್ತೇನೆ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ ಆ ಒಂದು ವಿಚಾರವನ್ನು ಸಹ ನಾವು ಇಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅದೇನೆಂದರೆ ಕೇಂದ್ರ ಸರ್ಕಾರದವರು ಮೊದಲಿನಿಂದಲೂ ಕೂಡ ಅಫಿಡವಿಟ್ ಹಾಕಿದ್ದಾರೆ, ಅವರ ಅಡಿಷನಲ್ ಸಾಲಿಸಿಟರ್ ಜನರಲ್ ಸುಪ್ರೀಂ ಕೋರ್ಟಿನಲ್ಲಿ ಆರ್ಗ್ಯುಮೆಂಟ್ ಮಾಡಿದ್ದಾರೆ. ನಮ್ಮ ಅಡ್ವೋಕೇಟ್ ಜನರಲ್ ಕೂಡ ವಾದ ಮಾಡಿದ್ದಾರೆ. ಸೀನಿಯರ್ ಅಡ್ವೋಕೇಟ್ ಜನರಲ್ ಅವರೂ ಕೂಡ ಆರ್ಗ್ಯುಮೆಂಟ್ ಮಾಡಿದ್ದಾರೆ. ಈ ರಿಟ್ ಏನು ದಾಖಲು ಮಾಡಿದ್ದಾರೆ, ಇದರ ಜ್ಯುರಿಸ್‌ಡಿಕ್ಷನ್ ಸುಪ್ರೀಂ ಕೋರ್ಟ್‌ಗೆ ಇಲ್ಲವೆಂದು ಕೇಂದ್ರ ಸರ್ಕಾರ ಮತ್ತು ನಮ್ಮ ಸರ್ಕಾರ ಕೂಡ ಆರ್ಗ್ಯು ಮಾಡಿದೆ. For the first time the Additional Solicitor General, who submitted a report on 26-4-90 stated that they will submit to the Court. That means the jurisdiction of the argument was given up, and surrendered

SRI D. B. CHANDREHGOWDA.—May I correct the records? What the same Solicitor General said when your Government was there ?

(Interruptions)

SRI VEERAPPA MOILY.—I will complete. I thought I can go back to para 8 of judgement letter. I will now come direct to that. ಇಲ್ಲಿ ಒಂದೊಂದು ವಾಕ್ಯಕ್ಕೂ ಈ ರೀತಿ ಎದ್ದುನಿಂತರೆ ನನಗೆ ಮಾತನಾಡುವುದು ಕಷ್ಟವಾಗುತ್ತದೆ,

"Mr. Goswamy, the learned Additional Solicitor General, appearing for the Union of India informed on 26th April, 1990 in the presence of the Counsel for the other parties that the Central government did not Want to undertake any further negotiations and leave the matter for disposal by the Court."

ಯಾವ ಅಡಿಷನಲ್ ಸಾಲಿಸಿಟರ್ ಜನರಲ್, ಯಾವ ಕೇಂದ್ರ ಸರ್ಕಾರ ೧೯೮೩ರಿಂದ ೨೫ನೇ ತಾರೀಖು ಏಪ್ರಿಲ್ ೧೯೯೦ರವರೆಗೆ ಸುಪ್ರೀಂ ಕೋರ್ಟಿಗೆ ಜ್ಯುರಿಸ್‌ಡಿಕ್ಷನ್ ಇಲ್ಲ ಎಂದು ಕಟುವಾಗಿ ವಾದ ಮಾಡುತ್ತಾ ಬಂದು, ೨೬ನೇ ತಾರೀಖು ಏಪ್ರಿಲ್ ೧೯೯೦ರಂದು "We will leave the matter for disposal by the Court," ಎಂದು ಹೇಳಿದರೆ ಏನು ಅರ್ಥ ಆಯಿತು ? ಸುಪ್ರೀಂ ಕೋರ್ಟಿಗೆ ಜ್ಯುರಿಸ್‌ಡಿಕ್ಷನ್ ಇದೆ ನೀವು ಈ ಬಗ್ಗೆ ವ್ಯವಹಾರ ಮಾಡಬಹುದು, ತೀರ್ಪು ಕೊಡಬಹುದು, ಎಂದು ಹೇಳಿದರೆ ಏನರ್ಥ ?

ಶ್ರೀ ಡಿ. ಬಿ. ಚಂದ್ರೇಗೌಡ.—ಮುಂದೆ ಹೇಳಿ.

Sri M. VEERAPPA MOILY.—Iwill read every part of the judgement before this House, let the people of Karnataka, and let the people of the country know about it. This is total abdication of duty cast upon the Central Government under the provisions of the Constitutions and under the provisions of Inter-State Water Disputes Act. Abdication in favour of whom ? Abdication of duty in favour of Tamil Nadu. That means the Government of India surrendered to Tamil Nadu. Why ? That is what I have said. What could not be achieved, under the Writ Petition No. 303 1971 by Mr. Marasoli Maran, as a First Petitioner could be achieved now when he happens to be a Minister. I do not say that he has influenced Additional Solicitor General. But that is the view of the Government of India, represented by the Additional Solicitor General. I do not think the Additional Solicitor General would not upon himself on a particular aspect of the case and represent the views of the Central Government and submit the jurisdiction, which is conferred by the Constitution of India. That means, the very Government of India went against the letter and spirit of the Constitution of India. What is more required ? ನಾವು ಈ ಸ್ಟೇಜ್‌ನಲ್ಲಿದ್ದೇವೆ. ನಾನು ಇವತ್ತು ವೈಯಕ್ತಿಕವಾಗಿ ಯಾರನ್ನೂ ದೂರುವುದಕ್ಕೆ ನಿಂತಿಲ್ಲ. ಆದರೆ ಎರಡು ದಶಕಗಳ ಕಾಲ ಯಾವ ಕಾನೂನು ಪಂಡಿತರುಗಳು ಚಾಣಾಕ್ಷ ಇಂಜಿನಿಯರುಗಳು ತಾಂತ್ರಿಕವಾಗಿ ಕಾನೂನಿನ ಮುಖಾಂತರ ಸುಪ್ರೀಂ ಕೋರ್ಟಿನಲ್ಲಿ, ಗೌರ್ನಮೆಂಟ್ ಆಫ್ ಇಂಡಿಯಾದಲ್ಲಿ ರೈತರ ಪರವಾಗಿ ವಾದ ಮಾಡಿಕೊಂಡು ಬಂದರೋ ಅದನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. I am coming back to the same proceedings that you want to refer to. I will read the extract of the proceedings of the Supreme Court itself. Nothing else about it. ೧೯೮೩ರಿಂದ ೨೬-೪-೮೮ರವರೆಗೆ ರಾಜ್ಯ ಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ಅದರ ಪರವಾಗಿ ವಾದ ಮಾಡಿದಂಥ ಅಡ್ವೋಕೇಟ್ಸ್ ಆಗಲೀ ಯಾವತ್ತೂ ಕೂಡ ಬಿಟ್ಟುಕೊಟ್ಟಿರಲಿಲ್ಲ. That goes to the credit of the earlier Government, that goes to the credit of your Government also, and our legal pandits, our engineers who fought tooth and nail for it. ರಾತ್ರಿ ಹಗಲು ಶ್ರಮ ಪಟ್ಟಿದ್ದಾರೆ. But what happened ? Shall I refer to this ? "Upon hearing the

Counsel, the Court made the following Order," The darkest day on cauvery not started to-day, not started when we took over but started on 19-9-88 when a Joint Press Statement of Governor of Tamilnadu and Chief Minister of Karnataka was issued. ಆವತ್ತಿನ ದಿವಸ ಸನ್ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿ ಶ್ರೀ ಎಚ್. ಡಿ. ದೇವೇಗೌಡರು ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳಾಗಿದ್ದರು.

ಅವರು ಪಾರ್ಟಿಸಿಪೇಟ್ ಮಾಡಿದ್ದರು. ಪೂರ್ತಿ ಡಿಸ್‌ಕಷನ್ ಅನ್ನು ನಾನು ಓದುವುದಿಲ್ಲ ಕೆಲವು ಭಾಗ ಮಾತ್ರ ಓದುತ್ತೇನೆ. "Discussion took place in a very cordial atmosphere and both sides made earnest and sincere efforts to find common grounds so as to reach an amicable settlement of disputes between the two States." It was cordial and hospitable. But operational portion is "Notwithstanding these earnest efforts on both sides they could not reach any common meeting point." Talks have failed. ಪತ್ರಿಕೆಯಲ್ಲಿ ಬಂತು. ಅದರ ಮುಂದಿನ ದಿನವೇ ವಿರೋಧ ಪಕ್ಷದಲ್ಲಿದ್ದ ನಾನು ತೀವ್ರವಾದಂತಹ ಪ್ರತಿಭಟನೆಯನ್ನು ವ್ಯಕ್ತ ಮಾಡಿದ್ದೆ. ಅದೂ ಪತ್ರಿಕೆಯಲ್ಲಿ ಕೂಡ ಬಂದಿದೆ. I issued a Statement. I don't leave even a piece of paper. I will refer to all papers. It may be inconvenient to some people. But, I cannot help it. On the basis of this joint press statement, on 30-9-1988 the Supreme Court passes this order.– "We have perused the affidavit filed on behalf of the State of Tamil Nadu and the joint press Statement of the Governor of Tamil Nadu and the Chief Minister of Karnataka issued on 19-9-1988. The learned Additional Solicitor General appearing for the Union of India and the learned Counsel appearing for the different parties including the Advocatee General of Karnataka, including also the Additional Solicitor General agreed that talks have failed." I will come back to that. The Advocate-General who was appearing at that time, of course on the brief from the State Government and at that time Sri Deve Gowda was the PWD Minister and at that time Sri Bommai was the Chief Minister and it is they who reported that the talks have failed, and the Advocate-General appearing on their behalf reported to the Supreme Court that the talks have failed. I will read everoy sentence, and every word of it.

ಶ್ರೀ ಪಿ.ಜಿ.ಆರ್. ಸಿಂಧ್ಯ.—ತಾವು ಯೀಲ್ಡ್ ಆಗುವುದಾದರೆ ನಾನು ಒಂದು ಮಾತನ್ನು ಹೇಳುತ್ತೇನೆ. ನಿಮಗೆ ಬೇಕಾಗಿರತಕ್ಕಂಥಾದ್ದನ್ನು ಮಾತ್ರ ಓದುತ್ತೀರಿ ಉಳಿದುದನ್ನು ಓದುವುದಕ್ಕೆ ನೀವು ತಯಾರಿಲ್ಲ.

SRI M. VEERAPPA MOILY.—I am sorry. I am on my legs. ನಾನು ಎಲ್ಲವನ್ನು ಓದುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ವಿರೋಧ ಪಕ್ಷದ ನಾಯಕರು, ಉಪ ನಾಯಕರು ಮಾತನಾಡ ಬಯಸಿದರೆ ಅವರಿಗಾದರೂ ತಾವು ಅವಕಾಶ ಮಾಡಿಕೊಡಬೇಕು. ಅವರು ಎದ್ದಾಗ ಕುಳಿತುಕೊಳ್ಳುವ ಸೌಜನ್ಯ ನಿಮಗೆ ಇಲ್ಲ. It is very bad.

(ಗೊಂದಲ)

SRI **M. VEERAPPA MOILY**.—Why very bad ? Have some patience I will read every sentence. Next paragraph says ;

> "The learned Additional Solicitor-General says in view of this situation the Government of India now bound to make appropriate orders as required under the Act wants 3 weeks' time. The learned Advocate-General of Karnataka says that this application is not maintainable and the relief sought is not available in these proceedings. This question has, therefore' been examined by the Court. We accord ingly adjourn the matter for hearing on 29th October, 1988. In the meantime the Union of India is at liberty to make its own order as it may be advised."

ಎಲ್ಲವನ್ನೂ ಓದುತ್ತೇನೆ. I will read verything. ಅವಸರವನ್ನು ನಾನು ಮಾಡುತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾವು ಅವಸರ ಏಕೆ ಮಾಡಿದೆವು ಎಂದರೆ ಮುಖ್ಯ ಮಂತ್ರಿಗಳು ಯಾರು ಎಂದು ಹೇಳಿದಿರಿ ಅಡ್ವೋಕೇಟ್ ಜನರಲ್ ಯಾರು ಎಂದು ಹೇಳಿದಿರಿ, ಸಾಲಿಸಿಟರ್ ಜನರಲ್ ಯಾರು ಎಂದು ಹೇಳಿದಿರಿ, ಆಗ ಪ್ರಧಾನ ಮಂತ್ರಿಗಳು ಯಾರು ಇದ್ದರು ಎಂಬುದನ್ನು ಏಕೆ ಹೇಳಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಕಂಟೆಸ್ಟಿಂಗ್ ಪಾರ್ಟೀಸ್ ಇಲ್ಲಿ ಯಾರು ಇದ್ದರು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಕರ್ನಾಟಕ ಮತ್ತು ತಮಿಳುನಾಡು ಇಲ್ಲಿ ಕಂಟೆಸ್ಟಿಂಗ್ ಪಾರ್ಟೀಸ್ ಆಗಿದ್ದರು.

೩-೦೦ ಪಿ. ಎಂ.

Both of them report that the talks have failed. For Government of India, what is the role left to them ? I am just asking you. ನಾವು ಇಬ್ಬರು ಫೇಲ್ ಆಗಿದ್ದೇವೆ ಟಾಕ್ಸ್‌ನಲ್ಲಿ. ಅಡಿಶನಲ್ ಸಾಲಿಸೀಟರ್ ಜನರಲ್ ಆಫ್ ಇಂಡಿಯಾ ಅವರು ಏನು ಮಾಡಬೇಕು, ಕೇಂದ್ರ ಸರ್ಕಾರ ಏನು ಮಾಡಬೇಕು. That is the question posed by the Govt. of Karnataka. ಅವರು ಈ ರೀತಿಯ ಧೋರಣೆ ಯನ್ನು ತೆಗೆದುಕೊಂಡಾಗ ಲೀಗಲ್ ಇಂಪ್ಲಿಕೇಶನ್ ಏನೆಂಬುದು ಅವರಿಗೆ ಗೊತ್ತಾಗಲಿಲ್ಲವೇ ? ನಮ್ಮ ಕರ್ನಾಟಕದ ರೈತರ ಹಿತಾಸಕ್ತಿಯನ್ನು ಬಲಿ ಕೊಡಬೇಕೆಂದು ಈ ರೀತಿ ಮಾಡಿದರೆಂದು ಆಪಾದನೆ ಮಾಡಲಿಕ್ಕೆ ನಾನು ಸಿದ್ಧವಿಲ್ಲ. ಟಾಕ್ಸ್‌ನಲ್ಲಿ ಫೇಲ್ ಆಗಿದ್ದೇವೆ ಸುಪ್ರೀಂಕೋರ್ಟ್‌ನಲ್ಲಿ ಏನು ಒಪ್ಪಿ ಕೊಂಡಿದ್ದೇವೆ ? ಅದರ ಔಚಿತ್ಯವನ್ನು ಪ್ರಶ್ನೆ ಮಾಡುತ್ತಿದ್ದೇನೆ. ಆದರೆ ದಿನಾಂಕ ೩೦-೯-೧೯೮೮ರ ಘಟನಾವಳಿಯಲ್ಲಿ ಏನು ನಡೆದಿದೆ ಅದು ನಮಗೆ ಕರಾಳ ದಿವಸ. ಏಕೆಂದರೆ the Supreme Court has given the impression not to-day not after our Hon. Chief Minister had met Sri Karunanidhi. ಏಕೆಂದರೆ ಉನ್ನತವಾದ ಸುಪ್ರೀಂಕೋರ್ಟ್ ಏನಿದೆ, ಆ ಶ್ರೇಷ್ಟ ನ್ಯಾಯಾಲಯದ ಮುಂದೆ ಈ ರೀತಿಯ ಹೇಳಿಕೆಗಳು ಈ ರೀತಿಯ ಒಪ್ಪಂದ ಇವು ಗಳನ್ನು ಮಾಡಿದ ಮೇಲೆ ಇಡೀ ಚಿತ್ರ, ಲೀಗಲ್ ಪಂಡಿತರು, ಇಂಜಿನಿಯರ್‌ಗಳು ಸಂಘರ್ಷಣೆ ಮತ್ತು ಹೋರಾಟ ಮಾಡಿಕೊಂಡು ಬಂದರು ಕಾಶ್ಮೀರದ ಬಗ್ಗೆ ಹೋರಾಟ ಮಾಡುವಾಗ ಅದೊಂದು ತರಹ ಜನರಲ್ ತಿಮ್ಮಯ್ಯನವರು ಹೇಳುತ್ತಿದ್ದರು ಏನೆಂದರೆ ಮುಂದೆ ಹೊರಟು ಬಂದಾಗ 'You lay down arms.' ಎಂದು On 30-9-1988 the whole case of Karnataka was demoralised, not by us. Who has done it ? That is the questi on that we have to recall with facts. ತಾವು ಬೇಕಾದರೆ ಪ್ರೊಸಿಡಿಂಗ್ಸನ್ನು ನೋಡಬೇಕು ಕೇಂದ್ರ ಸರ್ಕಾರ ಏನು ಮಾಡಿತ್ತು ಎಂದು ತಮಗೆ ಗೊತ್ತಿದೆ. Please see the proceedings dated 27-10-1988. ಕೇಂದ್ರ ಸರ್ಕಾರ ನಮ್ಮ ಸಹಾಯಕ್ಕೆ ಬಂದಿದೆ. ೨೭-೧೦-೧೯೮೮ರಲ್ಲಿ ಯಾರು ಪ್ರಧಾನ ಮಂತ್ರಿಗಳಾಗಿದ್ದರು ಎಂದು ಕೇಳಿದ್ದೀರಿ. ಯಾರು ಸಾಲಿಸೀಟರ್ ಜನರಲ್ ಆಫ್ ಇಂಡಿಯಾ ಆಗಿದ್ದರು. ಯಾವ ಪಕ್ಷದ ಕೇಂದ್ರಸರ್ಕಾರವಿತ್ತೆಂದು ತಾವು ಕೇಳುತ್ತಿದ್ದೀರಿ. ನಾವು ತಪ್ಪು

ಮಾಡಿದ್ದರೂ. ಕರ್ನಾಟಕ ಸರ್ಕಾರ ತಪ್ಪು ಮಾಡಿದ್ದರು ಕೇಂದ್ರಸರ್ಕಾರ ತಪ್ಪು ಮಾಡಲಿಕ್ಕೆ ಒಪ್ಪಲಿಲ್ಲ Because senior leaders must have prevailed upon the Government and I know we have prevailed upon the Govesnment of India at that time. This is the copy of the Subreme Court proceedings. ತಮ್ಮ ಹತ್ತಿರ ಕಾಪಿ ಇಲ್ಲ, ಕಾಪಿಇದ್ದಿದ್ದರೆ ತಾವು ಈ ರೀತಿ ಹೇಳುತ್ತಿರಲಿಲ್ಲ. ಇದು ಸುಪ್ರೀಂಕೋರ್ಟ್ ಪ್ರೊಸೀಡಿಂಗ್ಸ್ ಕಾಪಿ.

"Upon hearing, the application for impleading filed by Sri K. R. Nagaraj is allowed."

ನಾವು ಕೈಕಟ್ಟಿ ಕುಳಿತು ತಮಿಳುನಾಡಿಗೆ ನೀರು ಕೊಟ್ಟು ಆಗಿದೆ. ಮುಂದಿನ ಪ್ಯಾರಾದಲ್ಲಿ ಏನಾಗಿದೆ ಎಂಬುದನ್ನು ನೋಡಿ. ಅದು ಈ ರೀತಿ ಇದೆ. When the report went to the Supreme Court that the talks have failed, it is only there–after the farmers have gone and got themselves impleaded, it was a little late at that time. ಕೇಂದ್ರ ಸರ್ಕಾರದ ಪರವಾಗಿ ಅಡಿಶನಲ್ ಸಾಲ್‌ಸೀಟರ್ ಜನರಲ್ ಆಫ್ ಇಂಡಿಯಾ ಅವರು ನಾವು ಅದನ್ನು ಸಂಧಾನದ ಮೂಲಕ ತೀರ್ಮಾನ ಮಾಡುತ್ತೇವೆಂದು ಅವೊತ್ತು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದಾರೆ. What is the proceedings ? That is before the Supreme Court. It says.

"The Additional Solicitor-General wants some time for the Union Government to apply its mind for an amicable settlement of the dispute and assures us that he willnot ask for any further adjournment."

ಶ್ರೀ ಬಿ. ಹೆಚ್. ಬನ್ನಿಕೋಡ್.—ಕೊನೆಗೆ ಏನು ಕೇಳಿದ್ದಾರೆ ಅದನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ಸಹ ಹೇಳುತ್ತೇನೆ.

"In view of this assurance this matter stands adjourned for 3 weeks and the Government of India coming to the conclusion that the dispute cannot be amicably settled it should also come to the conelusion within the time granted as to whether the matter is being referred to the Tribunal under the Act. Call the matter on 16-11-1988."

ಅಲ್ಲಿಂದ ಅಡಿಶನಲ್ ಸಾಲಿಸಿಟರ್ ಜನರಲ್ ಟೈಮ್ ಕೇಳುತ್ತಲೇ ಬಂದರು. ೨೦-೭-೮೮ರ ವರೆಗೂ ಅವರು ಟೈಮ್ ಕೇಳಿದರು. Even on 16-11-88 time was sought. Amicable settlementಗೆ ಅವಕಾಶವನ್ನು ಕೇಳುತ್ತಲೆ ಬಂದರು, ಈಗ ಇನ್ನೊಂದು ವಿಚಾರ, ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರ ಹೇಳಿದರು. ಏನೆಂದರೆ ಜಡ್ಜಮೆಂಟ್ ನಲ್ಲಿ ಸೀರಿಯಸ್ ಡಿಸ್‌ಪ್ಯೂಟ್ ಏನೂ ಮಾಡಿಲ್ಲ ಎಂದು ನಮ್ಮ ಸರ್ಕಾರ ಅಥವಾ ಕೇಂದ್ರ ಸರ್ಕಾರ about jurisdictonal point ಅಂತ ಹೇಳಿ ಒಂದು ವಿಚಾರ ಹೇಳಿದರು. ಪೇಜ್ ೭ರಲ್ಲಿ ತಾವು ನೋಡಬೇಕು. ಏಕೆಂದರೆ ಜಡ್ಜ್‌ಮೆಂಟಿನ ಒಂದೇ ಭಾಗ ನೋಡಿದರೆ ಸಾಲದು. ಪೇಜ್ ೭ರಲ್ಲಿ No serious dispute howeuer has been raised before us...ಅಂತ ಕೇಳಿ ಹೇಗೆ ಇದೆಯೋ ಅದೇ ಪ್ರಕಾರ ಈ ಪೇಜ್ ೧೮-೧೯ರಲ್ಲಿ Review petition ಕೂಡ ನಾವು ಹೇಳಿದ್ದೇವೆ, ಮತ್ತು ಈ ಜಡ್ಜ್‌ಮೆಂಟ್‌ನಲ್ಲಿ ಕೂಡ jurisdictional pointಅನ್ನು ನಾವು attack ಮಾಡಿದ್ದೇವೆ It is on page 3 para 2—'The State of Karnataka by filing several affidavits has opposed the maintainability of the petition as also tenability plea for relief. Union of india in the Ministry of Water Resources has also opposed the maintainability of the application. Reliance has been placed on Section 11 of the Act which we shall presently make a reference. ಇದು ಜಡ್ಜ್‌ಮೆಂಟ್‌ನಲ್ಲಿದೆ. ನಾವು serious disput

ಅನ್ನು ಆರ್ಗ್ಯುಮೆಂಟ್‌ನಲ್ಲಿ ಕೂಡ ಮಾಡಿದ್ದೇವೆ. Even that find a place in the very same judgement which was referred to by the Hon'ble Leader of Opposition. ಆದ್ದರಿಂದ maintainability ಬಗ್ಗೆ ಏನೂ ಸೀರಿಯಸ್ ಡಿಸ್‌ಪ್ಯೂಟ್ ಮಾಡಲೇ ಇಲ್ಲ ಎಂದು ಒಂದು ಕಡೆ ಜಡ್ಜ್‌ಮೆಂಟ್‌ನಲ್ಲಿದೆ. ಅದೇ ಜಡ್ಜ್‌ಮೆಂಟ್‌ನಲ್ಲಿ ನೋಡಿದರೆ ಆ ಡಿಸ್‌ಪ್ಯೂಟ್ ರೈಸ್ ಮಾಡಿದ್ದು ಇದೆ. There is some self-contradiclon. I am not going to comment upon it. ಆದರೆ ರಿವ್ಯೂ ಪಿಟಿಶನ್ ಏನು ಸುಪ್ರೀಂ ಕೋರ್ಟಿಗೆ ಹಾಕಿದ್ದೇವೆ ಅದರಲ್ಲಿ ಈ ಕಂಟ್ರಾಡಿಕ್ಷನನ್ನು ನಾವು ಸುಪ್ರೀಂ ಕೋರ್ಟಿನ ಗಮನಕ್ಕೆ ತಂದಿದ್ದೇವೆ. ಇನ್ನೊಂದು ವಿಚಾರ ಅದು ಬಹಳ ಪ್ರಾಮುಖ್ಯವಾಗಿದೆ. ಅದು ಏನೆಂದು ಹೇಳಿದರೆ ಪೇಜ್ ೧೦ರಲ್ಲಿ ೨ನೇ ಪ್ಯಾರಾದಲ್ಲಿದೆ. ಸುಪ್ರೀಂ ಕೋರ್ಟ್ ಜಡ್ಜಮೆಂಟ್‌ನಲ್ಲಿ ಅವರು ಏನು ಹೇಳಿದ್ದಾರೆ ಎಂದರೆ ೨೬ adjournments within a period of five years and several more adjcurnments by this court to accomodate three States for negot ations are certainly sufficient opportunity and these two States ಅಂತ ಹೇಳಿದ್ದಾರೆ. ಆದರೆ it is on record. ನಾವು ರಿವ್ಯೂ ಪಿಟಿಷನ್‌ನಲ್ಲಿ ಕೂಡ ಅದನ್ನು ಕಾಣಿಸಿದ್ದೇವೆ. ಈ ೫ ವರ್ಷದಲ್ಲಿ ೨೬ ಪ್ರಯತ್ನಗಳು ನಡೆದೇ ಇಲ್ಲ. factually it was incorrect. We have referred to in the review petition. ಈ ೫ ವರ್ಷದಲ್ಲಿ there was only one time adjournment and it was on 5-4-90 ೫ ವರ್ಷದಲ್ಲಿ ೨೬ ಪ್ರಯತ್ನಗಳು ಮಾಡಿದ್ದು ಎಂದು ಸುಪ್ರೀಂ ಕೋರ್ಟ್ ಹೇಳಿದೆ, Factually it is incorrect. ಅದು ೫-೪-೯೦ರಲ್ಲಿ ಮಾತ್ರ ಏನು ಒಂದು ಮೀಟಿಂಗನ್ನು ಕೇಂದ್ರ ಸರ್ಕಾರದ ನೀರಾವರಿ ಸಚಿವರು ಕರೆದಿದ್ದಾರೆ. ಅದರ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ ಆ ದಿವಸ ಪಾರ್ಲಿಮೆಂಟಿನ ಅಧಿವೇಶನಕ್ಕೆ ಅವರು ಆಗಾಗ ಹೋಗಲಿಕ್ಕೆ ಇದ್ದ ಕಾರಣ ಮೀಟಿಂಗ್ ಕಂಕ್ಲೂಡ್ ಆಗಲಿಲ್ಲ. Then it was postponed to 20-4-90 on which date Central Minister could not come. ಬಹಳ ಆಶ್ಚರ್ಯವೆಂದು ಹೇಳಿದರೆ ೨೪-೪-೯೦ ರಂದು ಅಡಿಶನಲ್ ಸಾಲಿಸಿಟರ್ ಜನರಲ್ ಕೋರ್ಟಿನಲ್ಲಿ ಏನು ಹೇಳುತ್ತಾರೆ ಎಂದರೆ ೨೦ನೇ ತಾರೀಖಿನಲ್ಲಿ ಮಂದ್ರಾಸಿನಲ್ಲಿ ಮೀಟಿಂಗ್ ಮಾಡಲಿಕ್ಕೆ ಆಗಲಿಲ್ಲ, ಕೇಂದ್ರ ಸಚಿವರು ಹೋಗಲಿಕ್ಕೆ ಆಗಲಿಲ್ಲ ಎಂದು. ೧೨-೫-೯೦ಕ್ಕೆ ಮೀಟಿಂಗ್ ಅನ್ನು ನಾವು ಕರೆದಿದ್ದೇವೆ ಎಂದು ಅಡಿಶನಲ್ ಸಾಲಿಸಿಟರ್ ಜನರಲ್ on behalf of Government of India has represented to the Supreme Court. ಇದು ಪ್ರಾಮುಖ್ಯವಾದ ವಿಚಾರ. ೨೪ ರಂದು ಈ ಸಬ್‌ಮಿಶನ್ ಅನ್ನು ಅಡಿಶನಲ್ ಸಾಲಿಸಿಟರ್ ಜನರಲ್ ಸುಪ್ರೀಂ ಕೋರ್ಟಿಗೆ ಮಾಡುತ್ತಾರೆ. ೧೨-೫-೯೦ಕ್ಕೆ ಅಮಿಕಬಲ್ ಸೆಟ್ಲ್‌ಮೆಂಟ್‌ಗೆ ಸಂಬಂಧಪಟ್ಟ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆದಿದ್ದಾರೆ. ಕೇಂದ್ರಮಂತ್ರಿಗಳ ಮಧ್ಯಸ್ಥಿಕೆಯಲ್ಲಿ ಮಾಡುವುದು ಮಾತ್ರವಲ್ಲ, ನಮಗೆ ಟೆಲೆಕ್ಸ್ ಕೂಡ ಬರುತ್ತದೆ. On 25-4-90 telex was actually sent from the Government of India ie., Water Resources Ministry to the respective States. 24ಕ್ಕೆ ಸಬ್ಮಿಮೆಂಟ್ ಮಾಡಬೇಕೆಂದು ತೀರ್ಮಾನ ಮಾಡಿ, ೨೫-೪-೯೦ಕ್ಕೆ ಟೆಲೆಕ್ಸ್ ಮೆಸೇಜ್ ಕಳುಹಿಸುತ್ತಾರೆ. ಅನಂತರ ೨೬ರಂದು ಅದೇ, Additional Solicitor General goes to the Supreme Court and makes a submission that the Central Government don't want to undertake any further negotiations and leave the matter for disposal to the Court. ಕೇಂದ್ರ ಸರ್ಕಾರ ಒಂದು ದಿವಸದಲ್ಲಿ, ಅದೇ ಒಂದು ರಾತ್ರಿಯಲ್ಲಿ ಇಂತಹ ಗಹನವಾದ, ಗಂಭೀರವಾದ ವಿಷಯವನ್ನು, ಲಕ್ಷಾಂತರ ರೈತರ ಜೀವನ್ಮರಣಕ್ಕೆ ಸಂಬಂಧಪಟ್ಟ ವಿಚಾರವನ್ನು ನಿರ್ಲಕ್ಷ್ಯತನದಿಂದ ನೋಡಿಕೊಂಡು ನಿರ್ಣಯ ಮಾಡುವುದಾದರೆ, ಇದಕ್ಕೆ, ಏನು ಹೇಳಬೇಕು? This is what has happened in the Supreme Court.

ಶ್ರೀ ವಾಟಾಳ್ ನಾಗರಾಜ್.—ನೀವು ಈ ರೀತಿ ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮುಂದೆ ಏನು ಮಾಡಬೇಕೆಂಬುದನ್ನು ಹೇಳಿ, ನಿಮ್ಮ ಸರ್ಕಾರದ ನಿಲುವು ಏನು ಎಂಬುದನ್ನು ಹೇಳಿ...

(ಗೊಂದಲ)

ಶ್ರೀ ಬಿ. ಎಂ. ಇದಿನಬ್ಬ.—ಸತ್ಯವನ್ನು ಕೇಳಿ, ಅನಂತರ ಏನು ಬೇಕಾದರೂ ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಹುಚ್ಚಮಾಸ್ತಿಗೌಡರು ನಿನ್ನೆ ದಿವಸ ಹೇಳಿದಂಥ ವೇದಾಂತ ತಮಗೆ ಅನ್ವಯಿಸುವುದಿಲ್ಲವೇ ? ಈ ಸದನದಲ್ಲಿ ವಿವರವಾದ ಚರ್ಚೆಗೆ ಹೋಗುವುದು ಬೇಡ, ಇದರಿಂದ ಮುಂದೆ ರೈತರಿಗೆ ತೊಂದರೆಯಾಗುತ್ತದೆಂದು ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ. ಆರ್. ಎಲ್. ಜಾಲಪ್ಪ.—ಸನ್ಮಾನ್ಯ ರಾಜೀವ್ ಗಾಂಧಿಯವರು, ಚುನಾವಣಾ ಸಮಯದಲ್ಲಿ ಹೋಗಿ ಚುನಾವಣಾ ಭಾಷಣದಲ್ಲಿ ಹೇಳಿದ್ದಾರೆ. ಕರ್ನಾಟಕದವರು ರೇಷ್ಮೆ ಕೊಡುತ್ತಾ ಇಲ್ಲ, ಕರ್ನಾಟಕದವರು ನೀರು ಕೊಡುತ್ತಾ ಇಲ್ಲ. ನಮ್ಮ ಪಕ್ಷಕ್ಕೆ ವೋಟು ಕೊಟ್ಟರೆ ಎಲ್ಲವನ್ನೂ ಸರಿ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಮೊಯ್ಲಿಯವರು ಶಾಂತಿಯಿಂದ ಮಾತನಾಡಿದರೆ, ಎಲ್ಲವು ಸರಿಹೋಗುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಈ ರಾಜ್ಯವನ್ನು ಉದ್ಧಾರ ಮಾಡಿರುವುದು ಎಲ್ಲರಿಗೂ ಗೊತ್ತಿದೆ. ಈಗ ಸಿದ್ಧಾಂತ ಹೇಳುವುದಕ್ಕೆ ಹೋಗುತ್ತಿದ್ದಾರೆ...

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ನಿಮ್ಮ ವಾದದಿಂದ ಈ ರಾಜ್ಯದ ರೈತರಿಗೆ ಏನಾದರೂ ಅನುಕೂಲವಾಗುವುದಾದರೆ, ಇದನ್ನೇ ಮುಂದುರಿಸಬಹುದು. ಇದಕ್ಕೆ ನಮ್ಮದೇನೂ ತಕರಾರು ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಈಗಾಗಲೇ ತಮಗೆ ಮನವಿ ಮಾಡಿಕೊಂಡಿದ್ದೇನೆ. ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ನ್ಯಾಯಾಲಯದಲ್ಲಿ ಅಥವಾ ಕಾನೂನು ವಿಚಾರದಲ್ಲಿ ಏನು ನಡೆಯಿತು ಅದನ್ನು ವಾಸ್ತವಿಕವಾಗಿ. ವಸ್ತುನಿಷ್ಠವಾಗಿ ಈ ಸದನದ ಗಮನಕ್ಕೆ ತರತಕ್ಕದ್ದು ನನ್ನ ಕರ್ತವ್ಯ. ಅದನ್ನು ನಾನು ಇವತ್ತು ಮಾಡಿದ್ದೇನೆ. ತಮಗೆ ಗೊತ್ತಿದ್ದ ಪ್ರಕಾರ ನಾವು ಎಫ್. ಎಸ್. ನಾರಿಮನ್‌ರನ್ನು ಇದಕ್ಕೆ ನೇಮಿಸಿದ್ದೆವು. ನರ್ಮದಾ ಪ್ರಾಜೆಕ್ಟ್ ಡಿಸ್ಪ್ಯೂಟ್‌ನಲ್ಲಿ ೧೫ ವರ್ಷಗಳ ಕಾಲ ವಾದ ಮಾಡಿ ಅವರು ಅದರಲ್ಲಿ ಗೆದ್ದಿದ್ದಾರೆ. ಅಂತಹ ಒಬ್ಬ ಪ್ರಮುಖ ನ್ಯಾಯವಾದಿಯನ್ನು, ಕರ್ನಾಟಕದ ಪರವಾಗಿ ಸುಪ್ರೀಂಕೋರ್ಟಿನಲ್ಲಿ ವಾದ ಮಾಡಲು ನಮ್ಮ ಪರವಾಗಿ ಇಟ್ಟಿದೆವು. ಅವರು ಚೆನ್ನಾಗಿ ವಾದ ಕೂಡಾ ಮಾಡಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅವರನ್ನು ನಾವು ಎಂಗೇಜ್ ಮಾಡಿದ್ದು.

ಶ್ರೀ ಎಂ. ವೀಪ್ಪಮೊಯಿಲಿ.—ಹೌದು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದ ವಸ್ತುನಿಷ್ಠೂರವಾಗಿ ಕೋರ್ಟಿನಲ್ಲಿ ಏನು ನಡೆಯಿತು ಅದನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಮುಂದೆ ಸನ್ಮಾನ್ಯ ಸದಸ್ಯರು ವಿರೋಧ ಪಕ್ಷದ ನಾಯಕರು ಏನು ವಿಚಾರಗಳನ್ನು ಹೇಳಿದ್ದಾಗ ಅದಕ್ಕೆ ನಮ್ಮ ನಾಯಕರು ಉತ್ತರ ಕೊಡುತ್ತಾರೆ. ಆದುದರಿಂದ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಮರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ತಾವು ಇಂಟರ್‌ವೀನ್ ಮಾಡಿ ಕೇಂದ್ರ ಸರ್ಕಾರದ ಮೇಲೆ ದೊಡ್ಡ ಚಾರ್ಜ್‌ಗಳನ್ನು, ಮಂತ್ರಿಗಳ ಮೇಲೆ ಮಹತ್ತರವಾದ ಗಹನವಾದ ಚಾರ್ಜ್‌ಗಳನ್ನು ಮಾಡಿದ್ದೀರಿ. ಅದು ದಾಖಲೆಗೆ ಹೋಗಿದೆ. ದಾಖಲೆಯಲ್ಲಿ ಇರತಕ್ಕಂಥಾದ್ದು ಏನೇನು ಹೇಳಿದರು, ಏನೇನು ಬಿಟ್ಟರು ಎಂಬುದಕ್ಕೆ ರೆಕಾರ್ಡ್ಸ್ ತರಿಸಿ ನೋಡಬೇಕಾಗುತ್ತದೆ. ಅವರು ಬಹಳ ಮುಖ್ಯವಾಗಿ ಪ್ರಸ್ತಾವ ಮಾಡಿದ್ದು ಎಂದರೆ ನಾರಿಮನ್‌ರವರು ನಮ್ಮ ಪರವಾಗಿ ವಾದ ಮಾಡಿದರು ಎಂಬುದು. ನಾನು ಇದನ್ನು ಹೇಳುವುದಕ್ಕೆ ಹೋಗಲಿಲ್ಲ ದಾಖಲೆಯೊಳಗೆ ನಾರಿಮನ್ ನಮ್ಮ ಪರವಾಗಿ ವಾದ ಮಾಡಿದರು ಸರ್ವೋಚ್ಚನ್ಯಾಯಾಲಯಕ್ಕೆ ಜ್ಯೂರಿಸ್‌ಡಿಕ್ಷನ್ ಇಲ್ಲ ಎಂದು ವಾದ ಮಾಡಿದರು, ನಾವು ಅದನ್ನು ಒಪ್ಪಲಿಲ್ಲ ಎಂದು ಕೊನೆಯವರೆಗೆ ಎಲ್ಲೂ ಹೇಳಲಿಲ್ಲ. ಇವರು ೧೯೮೮-೧೯೮೯ರ ಸ್ಟೇಟ್‌ಮೆಂಟ್ ಬಗ್ಗೆ ಹೇಳುತ್ತಾ ಅದನ್ನು ಕೋಟ್ ಮಾಡಿರುತ್ತಾರೆ "We have perused the affidavit filed by the State of Tamil Nadu. ಆ ಕಾಲಕ್ಕೆ ತಮಿಳುನಾಡಿನಲ್ಲಿ ರಾಷ್ಟ್ರಪತಿ ಆಡಳಿತ ಅಂದರೆ ರಾಜ್ಯಪಾಲರ ಆಡಳಿತ ಇತ್ತು. ಕರ್ನಾಟಕ ರಾಜ್ಯದಲ್ಲಿ ಜನಪ್ರಿಯ ಸರಕಾರ ಇತ್ತು. ಅದು ಯಾವುದೇ ಪಕ್ಷಕ್ಕೆ ಸೇರಿರಲಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇನ್ನೊಮ್ಮೆ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ.—ರಾಜ್ಯಪಾಲರ ಆಡಳಿತ ಅಂದರೆ ರಾಷ್ಟ್ರಪತಿಗಳ ಆಡಳಿತ ತಮಿಳುನಾಡಿನಲ್ಲಿತ್ತು. ಕೇಂದ್ರ ಸರ್ಕಾರದ ಆಡಳಿತ ಅಲ್ಲಿತ್ತು. ಕರ್ನಾಟಕದಲ್ಲಿ ಜನಪ್ರಿಯ ಸರಕಾರ ಇತ್ತು. ಜನರಿಂದ ಆಯ್ಕೆಯಾದ ಸರಕಾರ ಇತ್ತು. ಆಗ ಅವರದ್ದು ಏನು on the General statment made by the Governor and the Chief Minister on 19-9-88 the Learned Addition Solicitor appearing for Government said that the talks failed ಎಂದು ಹೇಳಿದರು ಎಂದು ಅವರು ಏನು ಹೇಳಿದ್ದಾರೆ ಅವರ ಬಗ್ಗೆ ನಾನು ಏನು ಹೇಳುತ್ತೇನೆ ಎಂದರೆ between Governor and the elected Chief Minister ಇದು ಚರ್ಚೆ ಅಲ್ಲ. ಆಗ ಏನು ಹೇಳಿದರು ಎಂದರೆ ಸಧ್ಯದಲ್ಲಿ ಚುನಾವಣೆ ಬರುವುದು ಇದೆ. ಜನಪ್ರಿಯಂ ಸರಕಾರ ಬಂದಮೇಲೆ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಕುಳಿತುಕೊಂಡು ಚರ್ಚೆ ಮಾಡಿ ಎಂದು ಹೇಳಿದರು. This is one aspect, ಕರ್ನಾಟಕದ ಅಡ್ವೊಕೇಟ್ ಜನರಲ್ ಕೋರ್ಟಿನಲ್ಲಿ ಏನು ಹೇಳುತ್ತಾರೆ ಅದು ಇರಲಿ, ಸಾಲಿಸಿಟರ್ ಜನರಲ್ ಆಫ್ ಇಂಡಿಯಾ ಏನು ಹೇಳಿದ್ದಾರೆ ಎಂದರೆ Learned Additional Solicitor General of India appearing for the Union of India and the Learned Counsel appearing for different States including the Advocate General agreed that the talks have failed ಒಪ್ಪಿಕೊಂಡಿದ್ದಾರೆ. ಮುಂದೆ ಕರ್ನಾಟಕದ ಅಡ್ವೊಕೇಟ್ ಜನರಲ್ ಏನು ಹೇಳುತ್ತಾರೆ ಎಂದರೆ Learned Additional Solicitor General says inview of this situation the Government of India has now to make proper orders as required under the Act. That is the submission. He goes on record submitting to the most highest authority of the country and the highest legal authority of the nation. ಆರ್ಡರ್ಸ್ ಮಾಡಿ ಎಂದು ಹೇಳುತ್ತಾರೆ. ಅಡ್ವೊಕೇಟ್ ಜನರಲ್ ಆಫ್ ಕರ್ನಾಟಕ ಏನು ಹೇಳುತ್ತಾರೆಂದರೆ

Learned Advocate General of Karnataka says that this application is not maintainable He maintained the same status. Now you cannot charge that the Advocate General has not maintained and correct him politically and what was doing ? ಅಂದರೆ He did say, whereas in the latest case there is no evidence to show that the Advocate appeared on behalf of Karnataka has argued the case on behalf of Karnataka and has asked for adjournment...೨೫ನೇ ತಾರೀಖಿಗೆ ಫೈನಲ್ ಹಿಯರಿಂಗ್ ಇತ್ತು. ಆವತ್ತು ಸಬ್‌ಮಿಟ್ ಮಾಡಿದ್ರು ೨೬ಕ್ಕೆ ಇವರು ಕರೆದಿದ್ದರು. ಸಾಲಿಸಿಟರ್ ಜನರಲ್ ಆಫ್ ಇಂಡಿಯಾ ಹೇಳಿದರು—'What was our Advocate General doing ? What was his submission ? What did he say ; before the court—bring all the records. What did he say ? I would like to know through you Madam. Let the whole argument be placed before the House. I want to know. Let it be placed. It is easy to make a charge but it is not that easy to get out of it and substantiate...ನಾನು ತಮ್ಮನ್ನು ಕೇಳುತ್ತೇನೆ, ಯಾವ ಸಂದರ್ಭದಲ್ಲಿ ಈ ತೀರ್ಪು ಬಂತು ? ಕೇಂದ್ರ ಸರ್ಕಾರವನ್ನು ನೀವು ಹೊಣೆ ಮಾಡುವಾಗ ನಾನು ನಮ್ಮ ಪರವಾಗಿ ಮಾಡಿಲ್ಲ ಅಥವಾ ಮಾಡಿದ್ದಾರೆಂದು ಆಗಲಿ ನಾನು ಏನನ್ನೂ ಹೇಳುತ್ತಿಲ್ಲ. ಕೇಂದ್ರ ಸರ್ಕಾರದ ಬಗ್ಗೆ ಕೂಡ ನಾನು ನಿನ್ನೆ ಹೇಳಿದ್ದೇನೆ. ಕೇಂದ್ರ ಸರ್ಕಾರ ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಏನೋ ಮಾಡಬೇಕಾಗಿತ್ತು, ಅದನ್ನು ಮಾಡಿದರು. ಈ ವಿಚಾರದಲ್ಲಿ ಕೇಂದ್ರ ಸರ್ಕಾರ ನಮ್ಮ ಪಕ್ಷದ್ದು ಎಂದು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ, ಅವರು ಇದನ್ನು ವಿಚಾರ ಮಾಡಬೇಕಾಗಿತ್ತು. ದಿನಾಂಕ ೫-೪-೯೦ ರಂದು ಕೇಂದ್ರ ಸರ್ಕಾರ ಒಂದೇ ಒಂದು ಮೀಟಿಂಗ್ ಕರೆದಿದ್ದಾರೆ ಎಂದು ಇವತ್ತು ಮಾನ್ಯ ಕಾನೂನು ಮಂತ್ರಿಗಳು ಏನು ಹೇಳಿದರು ಅದು ಸರಿಯಲ್ಲ, ಅವರು ಇನ್ನೂ ಒಂದು ಮಾತು ಹೇಳಿದರು, ಏನೆಂದರೆ ಕಳೆದ ೫ ವರ್ಷಗಳಲ್ಲಿ ಏನೂ ಚರ್ಚೆ ನಡೆಯಲಿಲ್ಲ ಎಂದು. ದಿನಾಂಕ ೫-೪-೯೦ ರಂದು ಒಂದೇ ಒಂದು ಮೀಟಿಂಗ್ ಮಾತ್ರ ಕರೆದಿದ್ದರು ಎಂದು ಅವರು ಹೇಳಿದರು, ಹಾಗಾದರೆ

ಕಳೆದ ೫ ವರ್ಷಗಳಲ್ಲಿ ಹಿಂದೆ ಇದ್ದ ಕೇಂದ್ರ ಸರ್ಕಾರ ಏತಕ್ಕೆ ಮಾತುಕತೆ ನಡೆಸಲಿಲ್ಲ ಅವರಿಗೆ ಯಾರು ಅಡ್ಡಿಯಾಗಿದ್ದರು, ಕೇಂದ್ರ ಸರ್ಕಾರದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸತಕ್ಕ ಮಂತ್ರಿಗಳೇ ಇದ್ದರು, ಅವರೇತಕ್ಕೆ ಆಗ ನೆಗೋಷಿಯೇಷನ್ಸ್ ಮಾಡಲಿಲ್ಲವೆನ್ನುವ ಪ್ರಶ್ನೆಯನ್ನು ನಾನು ಕೇಳ ಬೇಕಾಗುತ್ತದೆ. ಮತ್ತೆ ಅಲ್ಲಿ ರಾಜ್ಯಪಾಲರ ಆಡಳಿತವಿದ್ದಂತಹ ಕಾಲದಲ್ಲಿ ಮುಂದೆ ಚುನಾವಣೆಗಳು ಆಗಲಿ, ಚುನಾವಣೆಗಳು ಆದ ಮೇಲೆ ಬರತಕ್ಕಂಥ ಸರ್ಕಾರಗಳು ಇದನ್ನು ತೀರ್ಮಾನ ಮಾಡಲಿ ಎನ್ನುವ ದೃಷ್ಟಿಯಿಂದ ಅಂದಿನ ಮುಖ್ಯಮಂತ್ರಿಗಳು ಮತ್ತು ರಾಜ್ಯಪಾಲರ ನಡುವೆ ನಡೆದ ಮಾತುಕತೆಗಳು ಮುರಿದು ಬಿದ್ದಿವೆ ಎನ್ನುವ ಮಾತನ್ನು ಅವರು ಹೇಳಿದ್ದರೆ ಆಗಿನ ಪರಿಸ್ಥಿತಿ ಏನು ಎನ್ನುವುದನ್ನು ನಾವು ಒಪ್ಪಿಕೊಳ್ಳಲೇ ಬೇಕಾಗಿತ್ತು, ಇಲ್ಲಿ ಬಹಳ ಮುಖ್ಯವಾದ ಒಂದು ಚಾರ್ಜ್ ಏನೆಂದರೆ. ಕೇಂದ್ರ ಸರ್ಕಾರಕ್ಕೆ ಸಂಧಾನದ ಮೂಲಕ ಬಗೆಹರಿಸಲಾಗುವುದಿಲ್ಲವೆಂದು ಮನವರಿಕೆ ಆದರೆ ಮಾತ್ರ ಸೆಕ್ಷನ್ ೨೬೨ (೩)ನ್ನು ಪ್ರೆಸ್ ಮಾಡಬೇಕು. Yes I agree what was the circumstances prevailing at that point of time ? ೧೯ನೇ ತಾರೀಖು ತಮಿಳುನಾಡಿನ ವಿಧಾನ ಸಭೆಯಲ್ಲಿ ಸರ್ವಾನುಮತದ ನಿರ್ಣಯವೊಂದನ್ನು ಅಂಗೀಕಾರ ಮಾಡಿದ್ದಾರೆ. ನಾವು ಸಹ ಇವತ್ತು ಒಂದು ಸರ್ವಾನುಮತದ ನಿರ್ಣಯವನ್ನು ಮಾಡಿದಿದ್ದರೆ ಇದು ಅಷ್ಟು ದೊಡ್ಡದಾಗುತ್ತಿರಲಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ನಾವು ವಿರೋಧ ಮಾಡುವುದಕ್ಕೆ ಆಗುತ್ತಿರಲಿಲ್ಲ. ಅವರು ಆ ಒಂದು ನಿರ್ಣಯವನ್ನು ಅಸ್ತ್ರವನ್ನಾಗಿ ಇಟ್ಟುಕೊಂಡು ಕೇಂದ್ರ ಸರ್ಕಾರದ ಮೇಲೆ ತಮಿಳುನಾಡು ಸರ್ಕಾರದವರು ತಮ್ಮ ಹೋರಾಟವನ್ನು ಪ್ರಾರಂಭ ಮಾಡಿದರು. ಶಾಸನ ಸಭೆ ಕೊಟ್ಟಂತಹ ಅಧಿಕಾರವನ್ನು ವಿರೋಧಿಸಿ ಹೋಗುವುದಕ್ಕೆ ಸಾಧ್ಯವಿಲ್ಲ, ಅವರ ಒಂದು ಆಧಾರದ ಮೇಲೆಯೇ ಅವರು ಮಾತುಕತೆಗೆ ನಾವು ಬರುವುದಿಲ್ಲವೆಂದು, ಇದೇ ಕೊನೆ ಎಂದು ಹೇಳಿದರು. ಯಾರೇ ಒಬ್ಬ ಮುಖ್ಯಮಂತ್ರಿ ಶಾಸನ ಸಭೆಗೆ ವಿರುದ್ಧವಾಗಿ ಇರತಕ್ಕಂಥ ಒಂದು ತೀರ್ಮಾನವನ್ನಾಗಲಿ ಅಥವಾ ಶಾಸನ ಸಭೆಯ ನಿರ್ಣಯಕ್ಕೆ ವಿರುದ್ಧವಾಗಿ ಒಂದು ಚಕಾರವನ್ನು ಹೊರಗಡೆ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆ ಹೇಳುವುದಾದರೆ ತಾನು ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವುದಕ್ಕೆ ಸಿದ್ಧವಾಗಿ ಆ ಮಾತನ್ನು ಹೇಳಬೇಕಾಗುತ್ತದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ಅವರು unanimous resolution was passed but on the contrary what has happened in Karnataka ? You should have taken the opinion of the House by convening an urgent Assembly Session. ತಮಗೆ ನಾನು ಹೇಳುತ್ತೇನೆ ತಾವು ಸಹ ೩ ದಿವಸಗಳಲ್ಲಿ ಒಂದು ಮೀಟಿಂಗನ್ನು ಕರೆದು ಪರಿಸ್ಥಿತಿ ಈ ರೀತಿ ಆಗಿದೆ ನಾವೇನು ಮಾಡಬೇಕು ಎಂದು ನಮ್ಮನ್ನು ಕೇಳಬಹುದಿತ್ತು. ನಮ್ಮ ಮುಖ್ಯಮಂತ್ರಿ ಆ ಮಾರ್ಗವನ್ನು ಅನುಸರಿಸಲಿಲ್ಲ. ಜೊತೆಗೆ ಕೇಂದ್ರ ಸರ್ಕಾರಕ್ಕೆ ನೆಗೋಷಿಯೇಶನ್ಸ್ ಸಾಧ್ಯವಿಲ್ಲ ಎಂದು ಅವರು ಹೇಳಿದ್ದು ಗೊತ್ತಾದ ಮೇಲೆ ಆದರೂ ತಾವು ಶಾಸನ ಸಭೆಯನ್ನು ಕರೆದು ನಾವೀಗ ಏನು ಮಾಡಬೇಕೆಂಬ ಬಗ್ಗೆ ಇಲ್ಲಿ ಚರ್ಚೆ ಮಾಡಬಹುದಿತ್ತು. ಆ ಕೆಲಸ ಸಹ ತಾವು ಮಾಡಲಿಲ್ಲ. ಅವರು ಸಂಧಾನಕ್ಕೆ ಬರುವುದಿಲ್ಲವೆಂದು ಹೇಳಿದ ಮೇಲೆ ಕೇಂದ್ರ ಸರ್ಕಾರ ಏನು ಮಾಡಬೇಕು ? ಶ್ರೀಮಾನ್ ವೀರೇಂದ್ರ ಪಾಟೀಲರೇ ಪ್ರಧಾನಮಂತ್ರಿಗಳಾಗಿದ್ದರೂ ಕೂಡ ಅವರು ಮಾತುಕತೆಗೆ ಬರುವುದಿಲ್ಲ ಸಂಧಾನ ಸಾಧ್ಯವೇ ಇಲ್ಲ ಎಂದಾಗ ಏನು ಮಾಡಬೇಕು ಎನ್ನುವ ಬಗ್ಗೆ ತಾವೇ ನಮಗೆ ಬೆಳಕು ಚೆಲ್ಲಬೇಕು. ಅವರು ಬರುವುದಿಲ್ಲವೆಂದು ಹೇಳಿದ್ದಾರೆ. ಅವರು ಬರದೇ ಇರುವುದಕ್ಕೆ ಕಾರಣವೇನು? ಶಾಸನ ಸಭೆಯ ಸರ್ವಾನುಮತದ ನಿರ್ಣಯ ಅವರಲ್ಲಿ ಇದೆ. ನಮ್ಮ ಕೈಯಲ್ಲಿ ಏನು ಇದೆ ? ಏನೂ ಇಲ್ಲ. ಆದ್ದರಿಂದಲೇ ಅವರು ಸಂಧಾನಕ್ಕೆ ಬರುವುದಿಲ್ಲವೆಂದು ಹೇಳಿದರು. ಆದ್ದರಿಂದ ಸಂಧಾನಕ್ಕೆ ಬರುವುದಿಲ್ಲವೆಂದು, ಸಂಬಂಧಪಟ್ಟ ಸರ್ವೋಚ್ಚ ನ್ಯಾಯಾಲಯದಲ್ಲಿ ಸಂಧಾನದ ಬಾಗಿಲನ್ನು ಮುಚ್ಚಿದ್ದೇವೆಂದು ಹೇಳಿದ ಮೇಲೆ, ಅದನ್ನು ಒಪ್ಪುವುದಕ್ಕೆ ಸಿದ್ಧವಿಲ್ಲವೆಂದು...

ಶ್ರೀ ವಾಟಾಳ್ ನಾಗರಾಜ್.—ಕೇಂದ್ರ ಸರ್ಕಾರ ಅನ್ಯಾಯ ಮಾಡಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಇಲ್ಲವೆಂದು ಹೇಳಲಿಲ್ಲ. He had not exhausted all the powers which have been existed under the Act. ನಾನು ಪ್ರಾರಂಭದಲ್ಲೇ ಅದನ್ನು ಹೇಳಿದ್ದೇನೆ. ಅಲ್ಲಿ ಏನು ಹೇಳುತ್ತಾರೆ, ಯಾವುದೇ ಒಂದು ರಾಜ್ಯ ಸರ್ಕಾರ ಪಂಚಾಯಿತಿಯಿಂದ ಇದು ತೀರ್ಮಾನವಾಗುವುದಿಲ್ಲ ಎನ್ನತಕ್ಕಂಥಾದ್ದನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರೆ ಸಾಕು ಕೇಂದ್ರ ಸರ್ಕಾರಕ್ಕೆ ಆಪ್ಷನ್ ಇಲ್ಲ. In addition to saying that we are not prepared for negotiationst there is a direction of the Supreme Court to the effect that 'you shall' refer the

matter within one month. ಏನು ಆಪ್‌ಷನ್ ಇವತ್ತು ಕೇಂದ್ರ ಸರ್ಕಾರದಲ್ಲಿತ್ತು ಮತ್ತು ಹಿಂದೆ ೧೯೭೧ನೇ ಇಸವಿಯಲ್ಲಿ ಮಾನ್ಯ ಮುರಸೋಲಿಮಾರನ್‌ರವರು ಹಾಕಿದಂಥ ರಿಟ್‌ಪಿಟಿಷನ್...

ಶ್ರೀ ಟಿ. ಎಂ. ಮಂಜುನಾಥ್.—ಈ ವಾದ ವಿವಾದ ಮಾಡುವ ಬದಲು ಏನಾದರು ಒಂದು ತೀರ್ಮಾನಕ್ಕೆ ಬನ್ನಿ. ಇದು ಬಹಳ ದೊಡ್ಡ ವಿಚಾರ ಇದೆಲ್ಲಾ ಮುಗಿದು ಹೋಗಿದೆ.

(ಗೊಂದಲ)

ಶ್ರೀ ಡಿ. ಬಿ, ಚಂದ್ರೇಗೌಡ.—೨೦ ವರ್ಷಗಳಿಂದ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತಲ್ಲ, ಆಗ ಎಷ್ಟು ಪ್ರಾಜೆಕ್ಟ್‌ಗಳು ಕ್ಲಿಯರ್ ಆಯಿತು ?

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಈ ದಿವಸ ಶಾಸನಸಭೆ ಕಡತದಲ್ಲಿ ಏನು ಹೋಗಿದೆ ಅದರಲ್ಲಿ, ಕೇಂದ್ರದ ಮಂತ್ರಿಗಳ ಮೇಲೆ ವೈಯಕ್ತಿಕವಾಗಿ ಮಂತ್ರಿಗಳ ಹೆಸರನ್ನು ಎತ್ತಿ ಮಾತನಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಪಿತೂರಿ ನಡೆದಿರುವುದನ್ನು ಒಪ್ಪಿಕೊಳ್ಳುತ್ತೀರಿ ತಾನೆ ?

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್.—ಕೇಂದ್ರ ಸರ್ಕಾರ ಮಾಡಿತೆಂದು ಹೇಳುವುದಲ್ಲ. ಮುಖ್ಯವಾಗಿ ನಮ್ಮ ರಾಜ್ಯದ ರೈತರ ಹಿತ ರಕ್ಷಣೆಯನ್ನು ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.— ಹಾಗಿದ್ದರೆ, ಇದುವರೆಗೆ ಏಕೆ ಸುಮ್ಮನೆ ಕುಳಿತಿದ್ದಿರಿ ? ಮಾನ್ಯ ವಾಟಾಳ್ ನಾಗರಾಜ್‌ರವರು ಪಿತೂರಿ ವಿಚಾರ ಹೇಳಿದರು. ಅವರು ಹೇಳಿದರೆ ಅದು ಅವರ ಅಭಿಪ್ರಾಯ. ಆದರೆ, ಒಂದು ಸರ್ಕಾರದ ಪ್ರತಿನಿಧಿಯಾಗಿ ಇಡೀ ರಾಜ್ಯದ ೪ ಕೋಟಿ ಕನ್ನಡಿಗರ ಪ್ರತಿನಿಧಿಯಾಗಿ, ಮಂತ್ರಿ ಮಂಡಲದ ಒಬ್ಬ ಸದಸ್ಯರು ಹೇಳಿದ್ದು ಶಾಸನ ಸಭೆಯ ಕಡತದಲ್ಲಿ, ಹೋಗಿದೆ......ಅದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ.

SRI M. VEERAPPAMOILY.—Did I say you are not a petitoner...

ಶ್ರೀ ಟಿ.ಎಂ. ಮಂಜುನಾಥ್.—ಅವರೇನು ಅನ್‌ಪಾರ್ಲಿಯಮೆಂಟರಿ ವರ್ಡ್ ಯೂಸ್ ಮಾಡಿಲ್ಲ. ಏನಿದೆ ಎಂಬುದನ್ನು ವಸ್ತುತಃ ಹೇಳಿದ್ದಾರೆ. ಏತಕ್ಕೆ ಈ ರೀತಿ ವಾದ ಮಾಡುತ್ತೀರಿ ?

ಶ್ರೀ ಡಿ. ಬಿ. ಚಂದ್ರೇಗೌಡ.— ನಾನು ಹೇಳುವ ತನಕ ಕೇಳಿ.

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್.-- ಮಾನ್ಯ ಚಂದ್ರೇಗೌಡರ ಬಗ್ಗೆ ನನಗೆ ಗೌರವ ಇದೆ. ವಿಷಯಕ್ಕೆ ಬನ್ನಿ.

ಶ್ರೀ ಎಂ. ವೀರಪ್ಪಮೊಯಿಲಿ.— ತಮಗೆ ಒಬ್ಬ ರಿಟ್‌ಪಿಟಿಷನರ್ ವ್ಯಕ್ತಿತ್ವ ಹಾಗೂ ಅವರ ಘನತೆ ಬಹಳ ಮುಖ್ಯವಾಯಿತೇ ಹೊರತು ಈ ರಾಜ್ಯದ ರೈತರ ಪ್ರಶ್ನೆ ನಿಮಗೆ ಮುಖ್ಯವಾಗಲಿಲ್ಲ. I am very sorry for your concern for one person. How you are surrendering the interest of the people of Karnataka so blatently, so unashamedly by your party ?

(Interruption)

3-30 P.M.

(ಗೊಂದಲ)

SRI D. B. CHANDREGOWDA.— I am asking the Chair...

ಇವೊತ್ತು ಕೇಂದ್ರದ ಒಬ್ಬ ಜವಾಬ್ದಾರಿ ಮಂತ್ರಿಯ ಮೇಲೆ...ನಾನು ಕೇಂದ್ರ ಸರ್ಕಾರದ ಪರವಾಗಿ ವಕಾಲತ್ತು ವಹಿಸುತ್ತಾ ಇಲ್ಲ. Let me make myself very clear. ಇವೊತ್ತು ಕೇಂದ್ರದ ಒಬ್ಬ ಜವಾಬ್ದಾರಿಯುತ ಮಂತ್ರಿಯ ಬಗ್ಗೆ ಹೇಳಿದ್ದು ಈ ಸದನದ ಕಡತದಲ್ಲಿ ಹೋಗಿದೆ. ಇವರು ತಮ್ಮ ಮಂತ್ರಿ ಪದವಿಯನ್ನು ಬಳಸಿಕೊಂಡು ಇದನ್ನು ಹೇಳಿದ್ದಾರೆ

SRI M. VEERAPPAMOILY.—The very same Karunanidhi took objction in T. N. assembly for Mr. Ramakrishna Hegde for having joined with the Chief Minister in submitting the memorandum ಅಲ್ಲಿ ತಮಿಳುನಾಡಿನ ಅಸೆಂಬ್ಲಿಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರನ್ನು ರೈಸ್ ಮಾಡಬಹುದು? ಇಲ್ಲಿ ನಮ್ಮ ವಿಧಾನಸಭೆಯಲ್ಲಿ ಮಾತ್ರ ಮುರಸೋಲಿಮಾರನ್‌ರವರ ಹೆಸರನ್ನು ಎತ್ತಬಾರದು ಎಂದರೆ ಏನು ಅರ್ಥ ? That to in regard to the writ petition.

ಶ್ರೀ ಡಿ. ಬಿ. ಚಂದ್ರೇಗೌಡ.— ರಾಮಕೃಷ್ಣ ಹೆಗಡೆಯವರು ನಿಯೋಗದೊಡನೆ ಹೋಗಿದ್ದರು ಎಂದು ಹೇಳುವುದಕ್ಕೂ, ಕೇಂದ್ರ ಸರಕಾರದ ಜವಾಬ್ದಾರಿ ಮಂತ್ರಿಯಾದ ಕಾರಣಕ್ಕಾಗಿ ಸುಪ್ರಿಮ್ ಕೋರ್ಟ್‌ನಲ್ಲಿ ಅವರ ಪರವಾಗಿ ತೀರ್ಪು ಬಂತು ಎಂದು ಹೇಳುವುದಕ್ಕೂ ಬಹಳಷ್ಟು ವ್ಯತ್ಯಾಸ ಇದೆ. ಅದು ಕಡತದಲ್ಲಿ ಉಳಿಯಬೇಕೆನ್ನುವುದಾದರೆ ಇಲ್ಲವೇ ನೀವು ಅದನ್ನು ಉಳಿಸಿಕೊಳ್ಳಬೇಕೆನ್ನುವುದಾದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ನಾನು ತಮ್ಮನ್ನು ಕೇಳುವುದೇನೆಂದರೆ, ತಾವುಗಳು ದಯವಿಟ್ಟು ಕಡತ ತರಿಸಿ ನೋಡಿ, ಇಂಥ ಜವಾಬ್ದಾರಿಸ್ಥಾನದಲ್ಲಿರುವವರು, ಕೇಂದ್ರದ ಒಬ್ಬ ಮಂತ್ರಿ ತನ್ನ ಸ್ಥಾನವನ್ನು ಬಳಸಿಕೊಂಡು ಸರ್ವೋಚ್ಚನ್ಯಾಯಾಲಯದಲ್ಲಿ ಇಂಥ ಒಂದು ತೀರ್ಪು ಪಡೆದರು ಎನ್ನ ತಕ್ಕಂಥ ಅರ್ಥ ಬರುವ ಹಾಗೆ ಮಾತನಾಡಿದ್ದಾರೆ, ಅದು ಕಡತದಲ್ಲಿ ಇದೆ, ಅದು ಇರಬೇಕೆಂದಿದ್ದರೆ ಇರಲಿ...

ಶ್ರೀ ವೀರೇಂದ್ರಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ನಾನು ಮುರಸೋಲಿ ಮಾರನ್ ಅಥವಾ ರಾಮಕೃಷ್ಣ ಹೆಗಡೆಯವರಿಗೆ ಸಂಬಂಧಪಟ್ಟ ವಿಚಾರಗಳಿಗೆ ನಾನು ಹೋಗುವುದಿಲ್ಲ. ಈಗ ನಿನ್ನೆಯಿಂದ ಸುಮಾರು ಎರಡು ಮೂರು ಸಲ ಮಾನ್ಯ ವಿರೋಧಪಕ್ಷದ ನಾಯಕರು ಒಂದು ವಿಚಾರನ್ನು ಮೇಲಿಂದ ಮೇಲೆ ಪ್ರಸ್ತಾಪ ಮಾಡುತ್ತಾ ಇದ್ದಾರೆ. ಅದನ್ನು ಅವರು ಇನ್ನೂ ಸ್ವಲ್ಪ ಸ್ಪಷ್ಟೀಕರಿಸಿದರೆ ನನಗೆ ಉತ್ತರ ನೀಡುವುದಕ್ಕೆ ತುಂಬಾ ಅನುಕೂಲವಾಗುತ್ತದೆ. ಅವರು ಹೇಳಿದ ಪ್ರಕಾರ ತಮಿಳುನಾಡು ವಿಧಾನಸಭೆಯಲ್ಲಿ ಒಂದು ನಿರ್ಣಯ ಮಾಡಿದರು. ಆ ನಂತರ ಇನ್ನು ಮುಂದೆ ಸಂಧಾನಕ್ಕೆ ಹೋಗ ತಕ್ಕಂಥದ್ದು ಇಲ್ಲ, ಅದಕ್ಕಾಗಿ ಮುಖ್ಯ ಮಂತ್ರಿಯವರು ಕೈಕಟ್ಟಿ ಕುಳಿತುಕೊಂಡರು. ಇಂಥ ಒಂದು ಪರಿಸ್ಥಿತಿಯು ನಿರ್ಮಾಣ ಆದಾಗ ಟ್ರಿಬ್ಯುನಲ್ ರಚನೆ ಬಿಟ್ಟು ಎರಡನೇ ಗತಿ ಇಲ್ಲ ಎನ್ನುವಂಥ ಪರಿಸ್ಥಿತಿ ಬಂತು. ಆದರೆ ನಮ್ಮ ಮುಖ್ಯ ಮಂತ್ರಿಯವರು ನಮ್ಮ ಅಸೆಂಬ್ಲಿಯನ್ನು ಕರೆಯಲಿಲ್ಲ, ಅಸೆಂಬ್ಲಿಯನ್ನು ಕರೆದಿದ್ದರೆ ನಾವು ಇಲ್ಲಿ ಏನು ನಿರ್ಣಯ ಮಾಡುತ್ತಿದ್ದೇವೋ ಅದರ ಪರಿಣಾಮವಾಗಿ ಸುಪ್ರಿಮ್ ಕೋರ್ಟ್ ಮೇಲೆ ಮತ್ತು ಕೇಂದ್ರ ಸರಕಾರದ ಮೇಲೆ ಏನಾದರೂ ಪರಿಣಾಮ ಆಗುತ್ತಿತ್ತು, ಆ ರೀತಿಯಾಗಿ ನಾವು ಏನಾದರೂ ಅಸೆಂಬ್ಲಿಯನ್ನು ಕರೆದಿದ್ದರೆ ತಾವುಗಳು ಹೇಳುವಂಥ ಒಂದು ನಿರ್ಣಯವನ್ನು ಮಾಡಿದ್ದರೆ ಇವೊತ್ತು ಉದ್ಭವಿಸಿದಂಥ ಪರಿಸ್ಥಿತಿ ಉದ್ಭವಿಸುತ್ತಾ ಇರುತ್ತಿರಲಿಲ್ಲ ಎಂಬ ಇಂಪ್ರೆಷನ್ ಬರುವ ರೀತಿಯಲ್ಲಿ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಒಂದು ವೇಳೆ ವಿಧಾನಸಭೆಯನ್ನು ಕರೆಯದೇ ಇದ್ದುದರಿಂದ ತಪ್ಪಾಗಿದೆ ಎಂದು ಹೇಳುವುದಾದರೆ ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಒಂದು ವೇಳೆ ಅಸೆಂಬ್ಲಿ ಕರೆದಿದ್ದರೆ ಏನು ಮಾಡಬಹುದಾಗಿತ್ತು ? ನಿಮ್ಮ ಲೆಕ್ಕದಲ್ಲಿ ಹೇಳಬಹುದಾದರೆ ನಾವುಗಳು ಬಂದು ಅಸೆಂಬ್ಲಿ ಸೇರಿ ಇಂಥ ಒಂದು ನಿರ್ಣಯ ಮಾಡಿದ್ದರೆ ಇವೊತ್ತು ಬಂದಿರತಕ್ಕಂಥ ಪರಿಸ್ಥಿತಿಯು ಒದಗಿಬರುತ್ತಿರಲಿಲ್ಲ ಎಂಬ ಬಗ್ಗೆ ಒಂದು ಸ್ಪಷ್ಟೀಕರಣ ನೀಡಿದರೆ ನನಗೆ ಉತ್ತರಿಸಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ನಾನು ಈ ಬಗ್ಗೆ ಪದೇ ಪದೇ ಹೇಳಿದ ವಿಚಾರವನ್ನು ತಾವುಗಳು ಅರ್ಥ ಮಾಡಿಕೊಂಡಿಲ್ಲ ಎಂದು ಕಾಣುತ್ತದೆ. [illegible]ನೇ ತಾರೀಖು ಪ್ರಧಾನ ಮಂತ್ರಿಯವರು ಕರ್ನಾಟಕ ರಾಜ್ಯದ ಪ್ರವಾಸಕ್ಕೆ ಬಂದಾಗ ಒಬ್ಬರು ಪತ್ರಿಕಾ ಪ್ರತಿನಿಧಿಗಳು ಸರ್ವೋಚ್ಚ ನ್ಯಾಯಾಲಯದ ತೀರ್ಮಾನಕ್ಕೆ ಮುಂಚೆ ತಮಿಳುನಾಡು ಮುಖ್ಯ ಮಂತ್ರಿಗಳ ಜೊತೆಗೆ ಸಂಧಾನ ಮಾಡಬಹುದಿತ್ತು ಎಂದು ಕೇಳಿದ್ದಕ್ಕೆ, ಪ್ರಧಾನಿಯವರು ಹೇಳಿದ್ದೇನೆಂದರೆ ತಮಿಳುನಾಡಿನ ವಿಧಾನಸಭೆಯು ಸರ್ವಾನುಮತದ ನಿರ್ಣಯವನ್ನು ಮಾಡಿತ್ತು, ಆದುದರಿಂದ...

ಶ್ರೀ ವೀರೇಂದ್ರಪಾಟೀಲ್.— ಅಲ್ಲಿ ಏನೇ ಆಗಿರಲೀ... ಅದು ಬೇರೆ. ನಾವು ವಿಧಾನಸಭೆ ಕರೆದಿದ್ದರೆ ಹಾಗೂ ಏನು ಮಾಡಿದ್ದರೆ ಇವೊತ್ತಿನ ಪರಿಸ್ಥಿತಿಯು ಉದ್ಭವವಾಗುತ್ತಿರಲಿಲ್ಲ ಎಂಬುದನ್ನು ತಾವುಗಳು ದಯಮಾಡಿ ಹೇಳಿ...

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಸ್ವಲ್ಪ ಸಮಾಧಾನವಾಗಿ ಕೇಳಿ. ತಮಿಳುನಾಡು ವಿಧಾನಸಭೆ ಈ ಬಗ್ಗೆ ಸರ್ವಾನುಮತದ ನಿರ್ಣಯ ಮಾಡಿ ಟ್ರಿಬ್ಯೂನಲ್‌ಗೆ ರೆಫರ್ ಮಾಡುವಂತೆ ಅಲ್ಲಿಯ ಮುಖ್ಯಮಂತ್ರಿಗಳಿಗೆ ಹೇಳಿದ್ದು. ಆ ಕಾರಣದಿಂದ ನೆಗೋಸಿಯೇಷನ್‌ಗೆ ಅವಕಾಶ

ಇರಲಿಲ್ಲವೆಂದು ಹೇಳಿದಿರಿ. ನಾವು ಅದಕ್ಕೆ ತದ್ವಿರುದ್ಧವಾಗಿ ಇದರ ನಿರ್ಣಯವನ್ನು ಟ್ರಿಬ್ಯೂನಲ್‌ಗೆ ಬಿಡಕೂಡದು, ಬದಲಿಗೆ ನ್ಯಾಷನಲ್ ಕೌನ್ಸಿಲ್ ಮುಂದೆ ಇದನು ತಂದು ಚರ್ಚಿಸಬೇಕೆಂಬ ಬಗ್ಗೆ ನಾವು ಸಂಪೂರ್ಣವಾಗಿ ಒಪ್ಪಿದ್ದೆವು. ಇದರ ಪೂರ್ಣ ಜವಾಬ್ದಾರಿಯನ್ನು ಮುಖ್ಯಮಂತ್ರಿಗಳಿಗೆ ನಾವು ಬಿಟ್ಟು ಪ್ರಧಾನಮಂತ್ರಿಗಳಿಗೆ ತಿಳಿಸಬೇಕೆಂದಿದ್ದೆವು ಇದನ್ನು ನೀವು ಪ್ರಧಾನ ಮಂತ್ರಿಗಳ ಬಳಿ ಪದೇ ಪದೇ ಪ್ರಸ್ತಾಪ ಮಾಡಬೇಕಾಗಿತ್ತು. ಇದರಿಂದ ನಾವು ಈಗ ವಂಚಿತರಾಗಿದ್ದರೂ ಈಗಿನಂತೆ ಪ್ರಧಾನ ಮಂತ್ರಿಗಳು ಈ ಸಂಬಂಧದಲ್ಲಿ ಇಂತಹ ನಿರ್ಣಯ ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಮೊದಲೇ ಈ ಸದನ ಕರೆದು ಈ ಬಗ್ಗೆ ನಾವು ಒಂದು ನಿರ್ಣಯ ಮಾಡಿ ನಿಮ್ಮ ಕೈಗೆ ಅಧಿಕಾರ ಕೊಟ್ಟಿದ್ದರೆ ವಾದ ಮಾಡುವುದಕ್ಕೆ ನಿಮಗೆ ಶಕ್ತಿ ಬರುತ್ತಿತ್ತು.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುವುದೇನೆಂದರೆ, ಅಲ್ಲಿ ತಮಿಳುನಾಡಿನ ಮುಖ್ಯ ಮಂತ್ರಿಗಳು ಮತ್ತು ಅಲ್ಲಿನ ಅಸೆಂಬ್ಲಿಯಲ್ಲಿ ಒಂದು ಠರಾವು ಪಾಸ್ ಆಗಿದ್ದು ಅವರ ಲೀಗಲ್‌ಸೆಲ್ ಅಡ್ವೈಸ್ ಮೇಲೆ. ಏಕೆಂದರೆ ಸಂಧಾನಕ್ಕೆ ನಾವು ಸಿದ್ಧವಿಲ್ಲವೆಂದು ಅವರು ಹೇಳಿದ ಮೇಲೆ ಅಸೆಂಬ್ಲಿ ನಿರ್ಣಯ ಮಾಡಿದ ಮೇಲೆ ಮತ್ತೆ ಸಂಧಾನ ಮಾಡಬೇಕಾಗಿತ್ತು ಎನ್ನುವುದಕ್ಕೆ ಯಾವುದೇ ಸ್ಕೋಪ್ ಇಲ್ಲ. ಇದನ್ನು ಸುಪ್ರೀಂ ಕೋರ್ಟಿಗೆ ಮುಸದಟ್ಟು ಮಾಡಿಕೊಡಲೆಂದೇ ಅವರು ನಿರ್ಣಯ ಮಾಡಿದರು. ಆದರೆ ತಾವು ಏನು ಹೇಳಿದಿರಿ ೧೧ನೇ ತಾರೀಖಿನೊಳಗೆ ಏನಾದರೂ ನಾವು ಇಂಟರ್‌ಸ್ಟೇಟ್ ಕೌನ್ಸಿಲ್‌ಗೆ ಇದನ್ನು ರೆಫರ್ ಮಾಡಬೇಕೆಂದು ಈ ಸಭೆ ಕರೆದು ನಿರ್ಣಯ ಮಾಡಿದ್ದಿದ್ದರೆ ಪ್ರಧಾನಮಂತ್ರಿಗಳು ಅದನ್ನು ಗಮನಿಸುತ್ತಿದ್ದರೆಂದು ತಾವು ಹೇಳಿದಿರಿ. ಆ ಪ್ರಶ್ನೆ ಈಗ ಇಲ್ಲವೇ ಇಲ್ಲ, ೨೪ನೇ ತಾರೀಖು ಸುಪ್ರೀಂ ಕೋರ್ಟ್ ಡೈರೆಕ್ಷನ್ ಕೊಟ್ಟುಬಿಡ್ತು. ಆಗ ಸುಪ್ರೀಂ ಕೋರ್ಟ್ ಮುಂದೆ ಕೇಂದ್ರ ಏನು ನಿಲುವು ತೆಗೆದುಕೊಳ್ಳಬಹುದಿತ್ತೋ ಅದನ್ನು ರಾಜ್ಯದ ಹಿತದೃಷ್ಟಿಯಿಂದ ಕೇಂದ್ರ ತೆಗೆದುಕೊಳ್ಳಲಿಲ್ಲ. ೨೪ನೇ ತಾರೀಖಿನೊಳಗೆ ತಮಿಳುನಾಡು ಅಸೆಂಬ್ಲಿಯವರು ಮುಖ್ಯಮಂತ್ರಿಗಳಿಗೆ ನಿರ್ಣಯ ಕೊಟ್ಟುಬಿಟ್ಟಿದ್ದರು. ಇನ್ನು ಸಂಧಾನಕ್ಕೆ ಹೋಗ ಬೇಡಿ ಎಂದು. ನಾವೇನಾದರೂ ತಾವು ಹೇಳಿದ ಪ್ರಕಾರ ಇಂಟರ್‌ಸ್ಟೇಟ್‌ಕೌನ್ಸಿಲ್‌ಗೆ ಇತ್ಯರ್ಥಕ್ಕಾಗಿ ಹೋಗಬೇಕೆಂದು ನಿರ್ಣಯ ಮಾಡಿದ್ದರೂ ಪ್ರಧಾನ ಮಂತ್ರಿಗಳ ಮುಂದೆ ಹೋಗಬೇಕಾಗಿತ್ತೇ ಹೊರತು ಸುಪ್ರೀಂ ಕೋರ್ಟ್ ಮುಂದೆ ಹೋಗುವುದಕ್ಕೆ ಬರುತ್ತಿರಲಿಲ್ಲ. ಅದಕ್ಕೆ ನಾನು ಹೇಳಿದೆ, ನಾವು ಸಭೆ ನಡೆಸದೆ ಏನೋ ಅನಾಹುತ ಮಾಡಿದೆವು ಎಂಬ ವಾತಾವರಣವನ್ನು ಕೆಲವರು ನಿರ್ಮಾಣ ಮಾಡುತ್ತಿರುವುದು ಕಾಣುತ್ತಿದೆ. ನಾನು ೧೧ನೇ ತಾರೀಖು ಪ್ರಧಾನಮಂತ್ರಿಯವರಿಗೆ ಹೇಳಿದರೂ ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್ ಆದದ್ದೇ ಮೇ ೨೮ನೇ ತಾರೀಖಿನಲ್ಲಿ ಅದಕ್ಕೆ ಮೊದಲು ಆ ಸಭೆ ರಚಿಸಬೇಕೆಂದಿತ್ತೇ ಹೊರತು ಅಲ್ಲಿಯವರೆಗೂ ಕಾನ್‌ಸ್ಟಿಟ್ಯೂಟ್ ಆಗಿರಲಿಲ್ಲ. ಮೇ ತಿಂಗಳ ೨೮ರಂದು ಅದನ್ನು ರಚನೆ ಮಾಡಿದ್ದು. ಇಂತಹ ಕೌನ್ಸಿಲ್ ಇಲ್ಲದೆಯೇ ಇಲ್ಲಿ ನಾವು ಏನು ನಿರ್ಣಯ ಮಾಡಬಹುದಿತ್ತೆಂಬುದು ನನಗೆ ಅರ್ಥವಾಗುತ್ತಿಲ್ಲ. ಈ ಸಂಸ್ಥೆಯೇ ಅಸ್ತಿತ್ವ ದಲ್ಲಿ ಇಲ್ಲದಿದ್ದರೆ ನಾವು ಏನು ನಿರ್ಣಯ ಮಾಡುವುದು ಇದನ್ನು ಯಾರ ಗಮನಕ್ಕೆ ತರಬೇಕಾಗಿತ್ತು ? ಪ್ರಧಾನಮಂತ್ರಿಗಳಿಗೆ ಏತಕ್ಕೆ ಹೇಳಲಿಲ್ಲ ಎಂದರೆ ಪ್ರಶ್ನೆ ಇದ್ದದ್ದು ಪ್ರಧಾನಮಂತ್ರಿಗಳ ಮುಂದೆ ಅಲ್ಲ, ಸುಪ್ರೀಂ ಕೋರ್ಟ್ ಮುಂದೆ. ಸುಪ್ರೀಂ ಕೋರ್ಟ್ ಮುಂದೆ ಒಂದು ವೇಳೆ ಈ ಸಭೆ ಕರೆದು ಒಂದು ನಿರ್ಣಯ ತೆಗೆದುಕೊಂಡು ನಾವು ಇಂಟರ್‌ಸ್ಟೇಟ್ ಕೌನ್ಸಿಲ್‌ಗೆ ಹೋಗುತ್ತೇವೆಂದು ವಿಧಾನ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯವನ್ನು ಮಾಡಿದ್ದೇವೆಂದು ಹೇಳಿದ್ದರೆ ಏನೋ ಆಗುತ್ತಿತ್ತು, ಆ ರೀತಿ ಮಾಡದೇ ಇರುವುದರಿಂದ ನಮ್ಮ ಕೈ ಕಟ್ಟಿಹೋಯಿತು ಎಂಬುದು ತಮ್ಮ ಭಾವನೆಯೇ ? ಇಲ್ಲಿ ನಾವು ನಿರ್ಣಯ ಮಾಡಿದ್ದರೆ ಸುಪ್ರೀಂ ಕೋರ್ಟ್‌ನವರು ನಿರ್ಣಯವನ್ನು ಕೊಡಲು ಹಿಂದು ಮುಂದು ನೋಡುತ್ತಿದ್ದರೆಂಬ ಲೆಕ್ಕದಲ್ಲಿ ಈ ಮಾತನ್ನು ಹೇಳುತ್ತಿದ್ದೀರಾ ? ಇದಕ್ಕೆ ಕಾರಣಗಳೇನು ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಕೇಳಿದ ಪ್ರಶ್ನೆಗೆ ತಾವು ಉತ್ತರ ಹೇಳಬೇಕು. ಆ ರೀತಿ ಮಾಡಿದ್ದರೆ ಸರ್ವೋಚ್ಚ ನ್ಯಾಯಾಲಯದ ಕೈಕಟ್ಟಬಹುದಾಗಿತ್ತು. ಈ ಪ್ರಶ್ನೆ ಏತಕ್ಕೆ ಬಂತೆಂದರೆ ಶ್ರೀ ವೀರಪ್ಪ ಮೊಯಿಲಿಯವರು ಏನು ಹೇಳಿದರು ಅಂದರೆ, ಒಂದು ವೇಳೆ ಇಂಟರ್‌ಸ್ಟೇಟ್ ಕೌನ್ಸಿಲ್ ಇಲ್ಲದೆ ಇದ್ದರೂ ನ್ಯಾಷನಲ್ ವಾಟರ್ ಪಾಲಿಸಿ ಮಾಡುವ ತನಕ ಇದನ್ನು ಪಂಚಾಯಿತಿಗೆ ರೆಫರ್ ಮಾಡಬೇಡಿ ಎಂದು ಕೇಂದ್ರ ಸರ್ಕಾರದವರು ಹೇಳಬೇಕಾಗಿತ್ತು ಅಥವಾ ಬೇರೆ ಏನಾದರೂ ಒಂದನ್ನು ಹೇಳಬೇಕಾಗಿತ್ತು ಎಂದು, ನಿಮ್ಮಲ್ಲಿ ಈ ನಿಲುವು ಇದ್ದರೆ ನನ್ನ ವಾದ ಏನೂ ಇಲ್ಲ. ಆದರೆ ನನ್ನ ವಾದ ಎಲ್ಲಿಬರುತ್ತದೆ ಎಂದರೆ ನೇರವಾಗಿ ನೀವು ಕೇಂದ್ರ ಸರ್ಕಾರದ ಮಂತ್ರಿಯವರನ್ನು ಚಾರ್ಜ್ ಮಾಡಿ ಅವರ ಇನ್‌ಫ್ಲೂಯನ್ಸ್‌ನಿಂದ ಜಡ್ಜ್‌ಮೆಂಟ್ ಬಂತು ಎಂದು ಏನು ತಮ್ಮ ವಾದ ಇದೆ ಅದಕ್ಕೆ ನನ್ನ ಆಕ್ಷೇಪಣೆ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷಣಿಯವರೆ, ನಮಗೆಲ್ಲ ಗೊತ್ತಿರುವಂತೆ ಇದುವರೆಗೆ ಯಾವುದೇ ಒಂದು ತೀರ್ಮಾನದ ಬಗ್ಗೆ ಸುಪ್ರೀಂ ಕೋರ್ಟ್‌ನವರಿಂದ ಟ್ರಿಬ್ಯೂನಲ್ ನೇಮಕ ಮಾಡತಕ್ಕದ್ದು ಈ ನೀರಾವರಿ ಹಂಚಿಕೆಯಲ್ಲಿ ಇದುವರೆಗೂ ಈ ದೇಶದ ಇತಿಹಾಸದಲ್ಲಿ ನಡೆದಿಲ್ಲ, ನಾನು ಹೇಳುವುದು ನಮ್ಮ ರಾಜ್ಯ ಸರ್ಕಾರ ಹಿಂದೆ ಇದ್ದಿದ್ದು ಇರಬಹುದು, ಅಥವಾ ಈಗ ಇರುವುದು, ನಮ್ಮ ಪ್ರಧಾನಿಯವರ ಅಥವಾ ಕೇಂದ್ರ ಸರ್ಕಾರದ ಕೈವಾಡದಿಂದ ಈ ರಾಜ್ಯಕ್ಕೆ ದ್ರೋಹವಾಗಿದೆ ಇರಬಹುದು ಎಂಬುದರ ಬಗ್ಗೆ ಯಾವುದೇ ಸಂಶಯ ಇಲ್ಲ. ಯಾವ ವಿಷಯದಲ್ಲಿ ಸುಪ್ರೀಂ ಕೋರ್ಟ್‌ಗೆ ಜುರಿಸ್‌ಡಿಕ್ಷನ್ ಇರಲಿಲ್ಲವೆಂಬುದು ನಮಗೆ ಅರ್ಥವಾಗಿದೆ. ಇದನ್ನು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುವುದರಲ್ಲಿ ನಾವು ಪ್ರಧಾನಿಯವರನ್ನು ಮನವೊಲಿಸಿ ಅವರ ಅಡ್ವೊಕೇಟ್ ಜನರಲ್ ಅಥವಾ ಸಾಲಿಸಿಟರ್ ಜನರಲ್‌ರವರ ಮೂಲಕ ಸುಪ್ರೀಂ ಕೋರ್ಟ್‌ನವರಿಗೆ ಕನ್ವಿನ್ಸ್ ಮಾಡುವುದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರೆಂದು ನಾವು ತಿಳಿದುಕೊಂಡಿದ್ದೇವೆ. ಎರಡನೆಯದಾಗಿ ಪ್ರಧಾನಿಯವರನ್ನು ಈ ಬಗ್ಗೆ ಕನ್ವಿನ್ಸ್ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಮೇ ೩೧ರಂದು ಇಂಟರ್‌ಸ್ಟೇಟ್ ಕೌನ್ಸಿಲ್ ರಚನೆ ಮಾಡಬೇಕೆಂಬ ವಿಚಾರವಿತ್ತು. ಅವರು ಸುಪ್ರೀಂ ಕೋರ್ಟ್‌ಗೆ ಈ ವಿಚಾರದ ಬಗ್ಗೆ ಹೊಸ ವ್ಯವಸ್ಥೆಯನ್ನು ಏನು ಮಾಡುತ್ತಿದ್ದೇವೆ. ಅದಕ್ಕೆ ಸಮಯ ಬೇಕಾಗಿದೆ ಇದನ್ನು ಮಾತುಕತೆಯ ಮೂಲಕ ಬಗೆಹರಿಸುತ್ತೇವೆ ಅಥವಾ ಇಂಟರ್‌ಸ್ಟೇಟ್ ಕೌನ್ಸಿಲ್ ಮೂಲಕ ಬಗೆಹರಿಸುತ್ತೇವೆ ಎಂದು ಹೇಳಿ ಸುಪ್ರೀಂಕೋರ್ಟಿಗೆ ಕನ್ವಿನ್ಸ್ ಮಾಡಬೇಕೆಂದು ಪ್ರಧಾನಿಯವರ ಮನವೊಲಿಸುವುದರಲ್ಲಿ ತಾವು ವಿಫಲರಾಗಿದ್ದೀರಿ. ವಿರೋಧ ಪಕ್ಷದ ನಾಯಕರು ಪ್ರಧಾನಿಯವರ ಬಳಿ ಹೋದಂತಹ ಸಂದರ್ಭದಲ್ಲಿ ನನಗೆ ತಿಳಿದ ಮಾಹಿತಿ ಪ್ರಕಾರ ಈ ವಿಚಾರವನ್ನು ಇಂಟರ್‌ಸ್ಟೇಟ್ ಕೌನ್ಸಿಲ್‌ಗೆ ವಹಿಸಬೇಕೆಂಬ ಅಭಿಪ್ರಾಯವನ್ನು ಪ್ರಧಾನಿಯವರು ಸ್ವತಃ ಕೊಟ್ಟರು ಎಂದು, ಆದರೆ ಸುಪ್ರೀಂ ಕೋರ್ಟಿಗೆ ಕನ್ವಿನ್ಸ್ ಮಾಡುವುದರಲ್ಲಿ ಏತಕ್ಕೆ ಅವರು ವಿಫಲರಾದರು. ನಮ್ಮ ವಿರೋಧ ಪಕ್ಷದ ನಾಯಕರಿಗೆ ಬಹಳ ಜವಾಬ್ದಾರಿ ಇದೆ. ಇವತ್ತು ನಾವೆಲ್ಲ ಸೇರಿ ಕೇಂದ್ರ ಸರ್ಕಾರ ನಮ್ಮ ಜೊತೆಯಲ್ಲಿ ಇರಬೇಕಾದರೆ, ನಿಮ್ಮದೇ ಕೇಂದ್ರ ಸರ್ಕಾರ ಇರಬೇಕಾದರೆ ಈ ರಾಜ್ಯದ ಜನತೆಗೆ ದ್ರೋಹ ಆಗುತ್ತಿದ್ದರೆ ಶ್ರೀ ಚಂದ್ರೇಗೌಡರು ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರು ಪ್ರಧಾನಿಯವರನ್ನು ಕನ್ವಿನ್ಸ್ ಮಾಡಿ ಸುಪ್ರೀಂ ಕೋರ್ಟ್‌ಗೆ ಸರಿಯಾದ ರೀತಿಯಲ್ಲಿ ಮನವಿ ಮಾಡಿದ್ದರೆ ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ.

ಉಪಾಧ್ಯಕ್ಷಣಿಯವರು.—ನೇರವಾಗಿ ಏನು ಕೇಳಬೇಕು ಅದನ್ನು ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೇರವಾಗಿ ಕೇಳುವುದಕ್ಕೆ ಬರುವುದಿಲ್ಲ, ನಾನು ನೇರವಾಗಿ ಕೇಳುವುದನ್ನು ಹೊಸದಾಗಿ ಕಲಿಯಬೇಕು.

ಉಪಾಧ್ಯಕ್ಷಣಿಯವರು.—ಈಗ ಬೇರೆಯವರು ಮಾತನಾಡುವವರು ಇದ್ದಾರೆ, ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಇನ್ನು ೫-೬ ಜನ ಮಾತನಾಡುವವರು ಇದ್ದಾರೆ. ಶ್ರೀ ಬೈರೇಗೌಡರೇ ನೀವೂ ಸಹ ಮುಕ್ಕಾಲು ಗಂಟೆ ಮಾತನಾಡಿದ್ದೀರಿ.

ಶ್ರೀ ಸಿ. ಬೈರೇಗೌಡ.—ಪ್ರಪಂಚ ಏನೂ ಹಾಳಾಗುವುದಿಲ್ಲ. ಇದು ಬಹಳ ಮುಖ್ಯವಾದಂತಹ ವಿಚಾರ, ಏಕೆ ಆತುರ ಮಾಡುತ್ತಿದ್ದೀರಿ ? ಈವತ್ತು ಅಲ್ಲದೆ ಇದ್ದರೆ, ಇನ್ನೂ ೩ ದಿವಸ ಆಗಲಿ, ಏತಕ್ಕೆ ಆತುರ ಮಾಡುತ್ತಿದ್ದೀರಿ ?

ಉಪಾಧ್ಯಕ್ಷಣಿಯವರು.—ಕ್ಲಾರಿಫಿಕೇಷನ್ ಬೇಕಾದರೆ ಕೇಳಿ, ಆದರೆ ತಾವು ಭಾಷಣ ಮಾಡಬೇಡಿ.

ಶ್ರೀ ಸಿ. ಬೈರೇಗೌಡ.—ಅದನ್ನೇ ಕೇಳುತ್ತಿದ್ದೇನೆ. ಮಾನ್ಯ ಕಾನೂನು ಮಂತ್ರಿಗಳು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಕೇಳಬೇಕಾಗಿದೆ ?

ಉಪಾಧ್ಯಕ್ಷಣಿಯವರು.—ನೇರವಾಗಿ ಪ್ರಶ್ನೆ ಕೇಳಿ ;

ಶ್ರೀ ಸಿ. ಬೈರೇಗೌಡ.—ನೇರವಾಗಿ ಇಲ್ಲಿಂದ ನಾನು ಅಲ್ಲಿಗೆ ಹೋಗಿಬಿಡಲಾ ?

ಉಪಾಧ್ಯಕ್ಷಣಿಯವರು.—ತಾವು ಪ್ರಶ್ನೆಯನ್ನು ದೊಡ್ಡದಾಗಿ ಮಾಡಬೇಡಿ.

ಶ್ರೀ ಸಿ. ಬೈರೇಗೌಡ.—ನೇರವಾಗಿ ಎಂದರೆ ಯಾವರೀತಿ ?

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ಮಾನ್ಯ ಸದಸ್ಯರು ಮಾತನಾಡುವ ಧಾಟಿ ಸರಿಯಲ್ಲ. ಹಿರಿಯ ಸದಸ್ಯರು ಈ ರೀತಿ ಮಾತನಾಡುತ್ತಿರುವುದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ.—ನೇರವಾಗಿ ಎಂದರೆ ಯಾವರೀತಿ ?

ಉಪಾಧ್ಯಕ್ಷಣಿಯವರು.—ಸುತ್ತಿ ಬಳಸದೆ ನೀವು ಏನು ಕೇಳುತ್ತೀರೋ ಅದನ್ನು ನೇರವಾಗಿ ಕೇಳಿ.

ಶ್ರೀ ಸಿ. ಬೈರೇಗೌಡ.—ಕಾನೂನು ಮಂತ್ರಿಗಳು ಮಾತನಾಡುವಾಗ ೮೮ರಲ್ಲಿ ಅಂದಿನ ಮುಖ್ಯ ಮಂತ್ರಿಯಾಗಿದ್ದ ಬೊಮ್ಮಾಯಿ ಅವರು ಮತ್ತು ರಾಜ್ಯಪಾಲರು ಈ ಒಂದು ಮಾತುಕತೆಯಲ್ಲಿ ಭಾಗ ವಹಿಸಿದ್ದಾರೆಂಬುದರ ಬಗ್ಗೆ ಏನು ಹೇಳಿದ್ದಾರೆ, ಅದು ಫೈಲ್‌ನಲ್ಲಿ ಇದೆಯೋ ಎಂಬುದನ್ನು ತಾವು ಹೇಳ ಬೇಕು. ಇಲ್ಲಿ ಮುಖ್ಯವಾಗಿರತಕ್ಕಂಥ ಪ್ರಶ್ನೆ ಮಾತುಕತೆ ಫೇಲ್ ಆಯಿತು ಎಂದು ಇಟ್ಟುಕೊಳ್ಳೋಣ ಆದರೆ ಇದು ಸುಪ್ರೀಂ ಕೋರ್ಟ್‌ನ ಜುರಿಸ್‌ಡಿಕ್ಷನ್‌ಗೆ ಬರುವುದಿಲ್ಲ, ಅಂತಹ ಅವಕಾಶ ಸಿಗತಕ್ಕಂಥದ್ದು ಎಂದರೆ ಅದು ಕೇಂದ್ರಸರ್ಕಾರಕ್ಕೆ. ಆದರೆ ಅವತ್ತಿನ ದಿವಸ ಅದು ಸುಪ್ರೀಂ ಕೋರ್ಟ್‌ನ ಜೂರಿಸ್ ಡಿಕ್ಷನ್‌ಗೆ ಬಂದಿರಲಿಲ್ಲ, ಅದನ್ನು ಸ್ವಲ್ಪ ದಯವಿಟ್ಟು ಅದನ್ನೇ ಒಂದು ದೊಡ್ಡ ವಿಚಾರವಾಗಿ ರಾಜ್ಯಪಾಲರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಸೇರಿ ಈ ಮಾತುಕತೆ ಫೇಲ್ ಆಯಿತು ಎನ್ನತಕ್ಕಂಥದ್ದನ್ನು ದೊಡ್ಡದಾಗಿ ತಾವು ಹೇಳಿದ್ದೀರಲ್ಲಾ, ಆಗಲೂ ಕೂಡಾ ಕೇಂದ್ರಸರ್ಕಾರಕ್ಕೆ ಅಧಿಕಾರ ಇತ್ತೇ ವಿನಹಾ ಸುಪ್ರೀಂ ಕೋರ್ಟ್‌ಗೆ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ, ತೀರ್ಮಾನವನ್ನು ಮಾಡುವುದಕ್ಕೆ, ತೀರ್ಪನ್ನು ಕೊಡುವುದಕ್ಕೆ ಯಾವುದೇ ರೀತಿಯ ಅಧಿಕಾರ ಇರಲಿಲ್ಲ. ಇದನ್ನು ಸ್ವಲ್ಪ ದಯವಿಟ್ಟು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಇದರ ಬಗ್ಗೆ ಚರ್ಚೆ ಮಾಡಲು ಅಧಿವೇಶನವನ್ನು ಕರೆದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳಿದರು. ಇದು ಅವತ್ತಿನ ದಿವಸ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆ್ಯಕ್ಟ್‌ನಲ್ಲಿ ಇರತಕ್ಕಂಥ ಒಂದು ಲ್ಯಾಕುನಾ ಎಂದರೆ ಯಾರಿಗೋ ಇಷ್ಟ ಬಂದಾಗ ನಾವು ಸಭೆಗೆ ಬರುವುದಿಲ್ಲ ಎಂದು ಬೇರೆಯವರು ಹೇಳುತ್ತಾರೆ. ಆಗ ಕೇಂದ್ರಸರ್ಕಾರದ ಜವಾಬ್ದಾರಿ ಎಂದರೆ ಇಂತಹ ಅಧಿಕಾರವನ್ನು ಪಡೆಯುವ ಅವಕಾಶ ಈ ಆ್ಯಕ್ಟ್‌ನಲ್ಲಿ ಇಲ್ಲದಿರುವ ಕಾರಣ ನಾವು ವಿಧಾನಸಭೆಯನ್ನು ಕರೆದು ಇದನ್ನು ಮಾತುಕತೆಯ ಮೂಲಕ ಕೇಂದ್ರಸರ್ಕಾರ ಬಗೆಹರಿಸಬೇಕಾಗಿತ್ತು ಅಥವಾ ಇಂಟರ್‌ಸ್ಟೇಟ್ ಕೌನ್ಸಿಲ್ ಮೂಲಕ ಇದನ್ನು ಬಗೆಹರಿಸ ಬೇಕು ಎಂಬ ತೀರ್ಮಾನವನ್ನು ನಾವು ಮಾಡಿರುವುದರಿಂದ ಕೇಂದ್ರಸರ್ಕಾರ ಈ ಕಾನೂನನ್ನು ಬದಲಾವಣೆ ಮಾಡತಕ್ಕಂಥ ತಿದ್ದುಪಡಿಯನ್ನು ಮಾಡತಕ್ಕಂಥ ಆಲೋಚನೆಯನ್ನು ಮಾಡಬೇಕೆಂದು ಹೇಳ ಬಹುದಾಗಿತ್ತು. ಇವತ್ತು ಇಡೀ ದೇಶದಲ್ಲಿ ಈ ರೀತಿಯಾದಂಥ ಒಂದು ವಾತಾವರಣ ಇದೆ. ಇದು ಸರಿಯಲ್ಲ, ಈಗ ಇರತಕ್ಕಂಥ ಕಾನೂನು ಸರಿಯಾಗಿಲ್ಲ, ಇದನ್ನು ಮಾರ್ಪಾಡು ಮಾಡಬೇಕು, ಇದನ್ನು ತಿದ್ದುಪಡಿ ಮಾಡಬೇಕಾಗಿರತಕ್ಕಂಥ ಒಂದು ಆಲೋಚನೆ ಇವತ್ತಿನ ದಿವಸ ಇಡೀ ದೇಶದಲ್ಲಿದೆ. ಅದಕ್ಕಾಗಿ ನಾವು ಒತ್ತಾಯವನ್ನು ಮಾಡಬಹುದಾಗಿತ್ತು. ಇದನ್ನು ತಿದ್ದುಪಡಿ ಮಾಡಬೇಕೆಂದು ನಾವು ವಿಧಾನ ಸಭೆಯನ್ನು ಕರೆದು ನಿರ್ಣಯ ಮಾಡಬಹುದಾಗಿತ್ತು. ಕಾನೂನನ್ನು ತಿದ್ದುಪಡಿ ಮಾಡಿ ಅವರು ಬರುವುದಿಲ್ಲ ಎಂದರೆ ಕೇಂದ್ರಸರ್ಕಾರ ಬಲಾತ್ಕಾರವಾಗಿ ಅವರನ್ನು ಕರೆಸಬೇಕು ಎನ್ನತಕ್ಕಂಥದ್ದಕ್ಕೆ ಕೇಂದ್ರಸರ್ಕಾರಕ್ಕೆ ಅಧಿಕಾರವನ್ನು ಕೊಡತಕ್ಕಂಥದ್ದು, ಕಾನೂನನ್ನು ಬದಲಾವಣೆ ಮಾಡಿ ಒಂದು ತೀರ್ಮಾನವನ್ನಾದರೂ ಕೂಡಾ ಕೇಂದ್ರಸರ್ಕಾರ ಮಾಡುವುದಕ್ಕೆ ಅದಕ್ಕೆ ಆಲೋಚನೆ ಮಾಡುವುದಕ್ಕೆ ಒಂದು ಅವಕಾಶ ಆಗುತ್ತಿತ್ತು, ಅದನ್ನೂ ಕೂಡ ನಾವು ಮಾಡಲಿಲ್ಲ. ತಮಿಳುನಾಡಿನವರು ಏನು ರಾಜಕೀಯ ಪ್ರಭಾವವನ್ನು ಬೀರಬೇಕೋ ಅದನ್ನು ಬೀರಿದ್ದಾರೆ. ಏನು ಮಾಡಬೇಕೋ ಅದನ್ನು ಮಾಡಿದ್ದಾರೆ. ನೀವು ಏನು ಮಾಡಿದಿರಿ ? ಎಷ್ಟು ಸಾರಿ ಈ ವಿಚಾರದಲ್ಲಿ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ್ದೀರಿ ? ಅಲ್ಲಿರತಕ್ಕಂಥ ಕಾನೂನು ಮಂತ್ರಿಗಳನ್ನು ಎಷ್ಟು ಸಾರಿ ಭೇಟಿ ಮಾಡಿದ್ದೀರಿ ? ಅಲ್ಲಿರತಕ್ಕಂಥ ನೀರಾವರಿ ಮಂತ್ರಿಗಳನ್ನು ಎಷ್ಟು ಸಾರಿ ಭೇಟಿ ಮಾಡಿದ್ದೀರಿ ? ನೀವು ನಿಮ್ಮ ರಾಜಕೀಯ ವರ್ಚಸ್ಸನ್ನು, ನಿಮ್ಮ ರಾಜಕೀಯ ಸ್ಥಾನವನ್ನು ತಾವು ಯಾವ ರೀತಿ ಉಪಯೋಗಿಸಿದ್ದೀರಿ? ನಮ್ಮ ರಾಜ್ಯದ ಲೋಕಸಭಾ ಸದಸ್ಯರನ್ನು ಈ ಬಗ್ಗೆ ಯಾವ ರೀತಿ ಉಪಯೋಗ ಮಾಡಿಕೊಂಡಿದ್ದೀರಿ ಎನ್ನತಕ್ಕಂಥದ್ದು ಕೂಡಾ ಇಲ್ಲಿ ಪ್ರಧಾನವಾಗುತ್ತದೆ. ತಾವು ಉತ್ತರವನ್ನು ಕೊಡುವಾಗ ದಯವಿಟ್ಟು ಇದಕ್ಕೆಲ್ಲಾ ಉತ್ತರವನ್ನು ಕೊಡಬೇಕು ಎಂದು ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಸಭಾಧ್ಯಕ್ಷಿಣಿಯವರೇ, ನಿನ್ನೆ ದಿನ ಮಾನ್ಯ ಮುಖ್ಯಮಂತ್ರಿಯವರು ಈ ಒಂದು ಕಾವೇರಿ ವಿವಾದವನ್ನು ಕುರಿತು ಒಂದು ನಿರ್ಣಯ ವನ್ನು ಮಂಡಿಸಿರತಕ್ಕಂಥ ವಿಚಾರದಲ್ಲಿ ನಾನು ಇದಕ್ಕೆ ಒಕ್ಕೊರಲಿನ ಬೆಂಬಲವನ್ನು ಸೂಚಿಸುತ್ತೇನೆ. ನಿನ್ನೆಯಿಂದಲೂ ಸಹಿತ ಈ ಸದನದಲ್ಲಿ ಬಹಳ ಮಟ್ಟಿಗೆ ಚರ್ಚೆ ಈ ಬಗ್ಗೆ ನಡೆಯುತ್ತಿದೆ. ಬಹಳ ಜನ ಹಿರಿಯ ಸದಸ್ಯರುಗಳು ಅವರವರ ಅನುಭವಗಳನ್ನು ಅವರ ಅನಿಸಿಕೆಗಳನ್ನು ಕಾವೇರಿ ವಿವಾದದ ಬಗ್ಗೆ ಅವರದೇ ಆದಂಥ ದಾಟಿಯಲ್ಲಿ ಈ ಒಂದು ಸದನದಲ್ಲಿ ಮಂಡಿಸಿದ್ದಾರೆ. ನಾನಾದರೂ ಹೇಳುವುದಿಷ್ಟೆ, ಈಗಾಗಲೇ ನಿನ್ನೆಯಿಂದ ಸಾಕಷ್ಟು ವಿಚಾರವನ್ನು ಚರ್ಚೆ ಮಾಡಿ ನೀರಾವರಿಗೆ ಏನೇನು ಆದ್ಯತೆಯನ್ನು ಕೊಡಬೇಕಾಗಿತ್ತು, ಆ ರೀತಿ ಆದ್ಯತೆಯನ್ನು ಕೊಟ್ಟಿಲ್ಲ ಎಂಬುವುದರ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಇನ್ನು ಈಗಾಗಲೇ ನಮ್ಮ ಕೆಲವು ಹಿರಿಯ ಸದಸ್ಯರುಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ ಯಾವ

ಯಾವ ವರ್ಷಗಳಲ್ಲಿ ನೀರಾವರಿಗೆ ಏನೇನು ಆದ್ಯತೆಯನ್ನು ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ, ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅಷ್ಟು ಖರ್ಚು ಮಾಡಿಲ್ಲವೆಂದು ಹೇಳಿದರು. ನಾವೆಲ್ಲರೂ ಸಹಿತ ಒಟ್ಟಾರೆ ಅವರು ಇವರು ಎನ್ನತಕ್ಕಂಥದ್ದಲ್ಲ, ಕಳೆದ ಇಪ್ಪತ್ತೈದು ವರ್ಷಗಳಿಂದ ಸತತವಾಗಿ ಈ ರೈತರ ಮೇಲೆ ಬರ ಸಿಡಿಲನ್ನು ಬಡಿಯುತ್ತಾ ಬಂದಿದ್ದೇವೆ ಎನ್ನತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಲೂ ಸಹಿತ ಕೇಂದ್ರಸರ್ಕಾರ ತಮಿಳುನಾಡು ಸರ್ಕಾರದ ಜೊತೆ ಶಾಮೀಲಾಗಿದೆ, ಹಾಗಾಗಿ ಈ ಒಂದು ಟ್ರಿಬ್ಯೂನಲ್ ರಚನೆ ಆಗಿದೆ ಎನ್ನತಕ್ಕಂಥದ್ದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಈಗ ಟ್ರಿಬ್ಯೂನಲ್ ಆಗಿ ಹೋಗಿದೆ. ಈಗ ನಮಗೆ ಉಳಿದಿರತಕ್ಕಂಥದ್ದು ಎಂದರೆ ಸನ್ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಹೇಳಿದ ರೀತಿ ಇನ್ನು ಯಾವುದೂ ಉಳಿದಿಲ್ಲ, ಬಹಿರಂಗವಾಗಿ ಚಳುವಳಿ ಮಾಡಿದರೂ ಸಹಿತ ಏನೂ ಪ್ರಯೋಜನವಿಲ್ಲ. ನಾವು ತಮಿಳುನಾಡಿಗೆ ನಮ್ಮ ಪಾಲನ್ನು ಬಿಟ್ಟು ಹೆಚ್ಚು ನೀರನ್ನು ಕೊಡಲು ಆಗುವುದಿಲ್ಲ ಎನ್ನತಕ್ಕಂಥದ್ದರ ಬಗ್ಗೆ ಘಂಟಾಘೋಷವಾಗಿ ಒಂದು ತೀರ್ಮಾನವನ್ನು ತೆಗೆದುಕೊಳ್ಳತಕ್ಕಂಥದ್ದು ಮಾತ್ರ ಬಾಕಿ ಉಳಿದಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಸದನದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಈಗಾಗಲೇ ದಕ್ಷಿಣ ಇಂಡಿಯಾ ಮತ್ತು ಉತ್ತರ ಇಂಡಿಯಾ ಎಂದು ಕರೆಯಲಾಗುತ್ತಿದೆ. ನಾವು ಒಂದು ಎಚ್ಚರಿಕೆಯನ್ನು ಕೇಂದ್ರ ಸರ್ಕಾರಕ್ಕೆ ಈ ಟ್ರಿಬ್ಯೂನಲ್ ರಚನೆ ಮಾಡಿರುವ ಸಂದರ್ಭದಲ್ಲಿ ಕೊಡಬೇಕಾಗುತ್ತದೆ. ನಮ್ಮ ರಾಜ್ಯದ ರೈತರ ಮೇಲೆ ಇದರಿಂದ ಏನು ಪರಿಣಾಮ ಬೀರುತ್ತದೆ, ಏನು ಅನಾಹುತವನ್ನು ಮಾಡಿದ್ದಾರೆ, ಇದಕ್ಕಾಗಿ ತಮ್ಮ ಮೂಲಕ, ಸದನದ ಮೂಲಕ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟು ಇಲ್ಲೂ ಸಹ ಒಂದು ಪಂಜಾಬ್ ಅನ್ನು ತಾವು ನಿರ್ಮಾಣ ಮಾಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ನಾವು ಎಷ್ಟು ಸೌಮ್ಯವಾಗಿದ್ದೇವೆ, ಕನ್ನಡ ನಾಡಿನ ಜನರ ಸೌಮ್ಯತೆ ಎಷ್ಟು ಇದೆ, ಆ ಸೌಮ್ಯತೆಯನ್ನು ನೀವು ಕೆಣಕಿ ನೋಡಬೇಡಿ ಎಂದು ಅವರಿಗೆ ಹೇಳಬೇಕು. ನಮಗೆ ನ್ಯಾಯವಾಗಿ ದೊರಕಬೇಕಾದ, ಸರಿಯಾದ ಸಮಪಾಲು ನೀರು ಎಷ್ಟು ಸಿಗಬೇಕು ಅದನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬೇಕು ಎಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ಮಾತನ್ನು ಸನ್ಮಾನ್ಯ ನೀರಾವರಿ ಮಂತ್ರಿಗಳು ಹೇಳಿದ್ದಾರೆ, ೨೬೨ ಕೋಟಿ ರೂಪಾಯಿಗಳನ್ನು ನೀರಾವರಿಗೆ ಖರ್ಚು ಮಾಡಬೇಕು, ಕಾವೇರಿ ಯೋಜನೆ ಪೂರ್ಣ ಮಾಡಬೇಕು, ಎಂದು ಹೇಳಿದ್ದಾರೆ. ಒಂದು ಮಾತು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ತಿಳಿದ ಮಟ್ಟಿಗೆ ಹಲವಾರು ಜನ ಈ ನೀರಾವರಿ ಖಾತೆಯನ್ನು ಹೊಂದಿದ್ದರು. ಎಷ್ಟು ಹಣ ನೀರಾವರಿಗೆ ನಿಗದಿ ಮಾಡಲಾಗಿದೆ ಅಷ್ಟು ಹಣವನ್ನು ಕೊಡದೇ ಹೋದರೆ ರಾಜೀನಾಮೆ ಕೊಡುತ್ತೇವೆಂದು ಹಲವಾರು ಜನ ಸದಸ್ಯರು ಹೇಳಿದ್ದರು, ಆದರೆ ಈಗ ಕೈಕಟ್ಟಿ ಕುಳಿತಿದ್ದಾರೆ. ಇದನ್ನು ನಾವು ನೋಡಿದ್ದೇವೆ. ನೀರಾವರಿಗೆ ಹೋರಾಟ ಮಾಡುತ್ತೇನೆ, ನೀರಾವರಿಗೆ ೩೦೦ ಕೋಟಿ ರೂಪಾಯಿಗಳನ್ನು ಕೊಡಲು ಈ ಸದನದಲ್ಲಿ ಘೋಷಣೆ ಮಾಡದೇ ಹೋದರೆ, ಬಜೆಟ್‌ನಲ್ಲಿ ಹಣವನ್ನು ಇಡದೇ ಹೋದರೆ ಮಣ್ಣಿನ ಮಗನಾಗಿ ನಾನು ರಾಜೀನಾಮೆ ಕೊಟ್ಟು ಹೊರಗಡೆ ಹೋಗುತ್ತೇನೆ ಎಂದು ಹೇಳಿದವರು ಇಂದು ಭಾಷಣ ಮಾಡುತ್ತಾ ಹೊರಗಡೆ ಇದ್ದಾರೆ. ಅವರ ಪರವಾಗಿ ಒಳಗಡೆ ಇರುವವರು ಭಾಷಣ ಮಾಡುತ್ತಾ ಇರುವುದನ್ನೂ ನಾನು ನೋಡಿದ್ದೇನೆ: ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಇಲ್ಲಿ ಮಾನ್ಯ ಬೈರೇಗೌಡರು ಇಲ್ಲ ಬೈರೇಗೌಡರು ಮಾತನಾಡತಕ್ಕ ಸಂದರ್ಭದಲ್ಲಿ ಹಿಂದೆ ಇವರ ಪರವಾಗಿ ಇರುವವರು ಮಂತ್ರಿಗಳಾಗಿದ್ದರು ಇವೊತ್ತು ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಇದೆ. ಇದೇ ಶ್ರೀ ವೀರೇಂದ್ರ ಪಾಟೀಲರು ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ನೀರಾವರಿ ಮತ್ತು ಲೋಕೋಪಯೋಗಿ ಸಚಿವರಾಗಿದ್ದರು. ಆಗ ಅವರು ಏನೇನು ಕೆಲಸ ಕಾರ್ಯ ಮಾಡಿದ್ದಾರೆ ಎಂದು ವಿಚಾರ ವಿನಿಮಯ ಮಾಡಿದ್ದಾರೆ. ಆದ್ದರಿಂದ ನಾನು ಈ ವಿಚಾರ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲರೂ ಸಹಿತ ನೀರಾವರಿಗೆ ಏನೇನು ಕೆಲಸ ಮಾಡಿದ್ದಾರೆ ರೈತಾಪಿ ವರ್ಗಕ್ಕೆ ಏನು ಕೆಲಸ ಮಾಡಿದ್ದಾರೆ ಎನ್ನತಕ್ಕದ್ದನ್ನು ರಾಜ್ಯದ ರೈತ ಜನ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಇವೆಲ್ಲದಕ್ಕೂ ತೆರೆ ಎಳೆದು ಟ್ರಿಬ್ಯೂನಲ್ ರಚನೆ ಮಾಡಿರತಕ್ಕಂಥ ಸಂದರ್ಭದಲ್ಲಿ ನಾವು ಏನು ಅಂತಿಮ ನಿರ್ಣಯವನ್ನು ಮಾಡಬೇಕು ಎಂಬ ತೀರ್ಮಾನವನ್ನು ಮಾಡಬೇಕಾಗುತ್ತದೆ. ಒಂದು ಸಲಹೆಯನ್ನು ತಮ್ಮ ಮೂಲಕ ಕೇಂದ್ರ ಸರ್ಕಾರಕ್ಕೆ ನಾನು ಕೊಡಲು ಇಷ್ಟಪಡುತ್ತೇನೆ. ಅವರು ಏನು ಟ್ರಿಬ್ಯೂನಲ್ ಮಾಡಿದ್ದಾರೆ, ಆ ಟ್ರಿಬ್ಯೂನಲ್‌ಗೆ ಗೈಡ್‌ಲೈನ್ಸ್ ಅನ್ನು ಸುಪ್ರೀಂ ಕೋರ್ಟ್ ಹಾಕಿಕೊಡಬೇಕು. ಗೈಡ್‌ಲೈನ್ಸ್ ಕೊಡದೇ ಹೋದರೆ ಅವರು ಯಾವ ರೀತಿ ಕೆಲಸ ಮಾಡಬೇಕು ಎಂದು ಗೊತ್ತಾಗುವುದಿಲ್ಲ. ತಮಿಳುನಾಡಿನ ಜೊತೆ

ಕೇಂದ್ರ ಸರ್ಕಾರದವರು ಶಾಮೀಲಾಗಿ ಏನು ಒಂದು ಪಿತೂರಿಯನ್ನು ಕರ್ನಾಟಕದ ಜನತೆಗೆ ಮಾಡಿದ್ದಾರೆ, ಈ ಸಂದರ್ಭದಲ್ಲಿ ಸರಿಯಾದ ಗೈಡ್‌ಲೈನ್ಸ್ ಅನ್ನು ಕೊಡದೇ ಹೋದರೆ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದಂತೆ ನಿಜಕ್ಕೂ ಟ್ರಿಬ್ಯೂನಲ್‌ನಿಂದ ಕರ್ನಾಟಕಕ್ಕೆ ಅನ್ಯಾಯ ಆಗುತ್ತದೆ. ಅವರು ಹೇಳಿದ್ದಕ್ಕೆ ಪುಷ್ಟೀಕರಣ ಕೊಟ್ಟು ಹಾಗೆ ಆಗುತ್ತದೆ ಎಂದು ನಾನೂ ಸಹ ಹೇಳುತ್ತೇನೆ. ಆದ್ದರಿಂದ ಈ ರೀತಿ ಮಾಡಬೇಕು ಎಂದು ಗೈಡ್ ಲೈನ್ಸ್ ಕೊಟ್ಟು ಹೇಳಬೇಕು, ಅವರಿಗೆ ಅಪೀಲ್ ಮಾಡಬೇಕು ಎಂದು ತಮ್ಮ ಮೂಲಕ ಸದನದ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗಲೂ ಸಹ ಎಲ್ಲಾ ಮಣ್ಣಿನ ಮಕ್ಕಳು ನೀರಾವರಿ ಮಂತ್ರಿಗಳಾಗಿದ್ದಾರೆ. ಬಹಳ ಜನ ನೀರಾವರಿ ಮಂತ್ರಿಗಳು ತಾವು ಮಣ್ಣಿನ ಮಕ್ಕಳೆಂದು ಹೇಳಿದವರು ಬರೀ ಹೇಳಿ ಹೋದರೇ ಹೊರತು ಏನೇನು ಕೆಲಸ ಮಾಡಿದ್ದಾರೆ ಎಂಬುದು ತಮಗೆ ಗೊತ್ತಿದೆ, ಈ ರಾಜ್ಯದ ಜನತೆಗೆ ಗೊತ್ತಿದೆ. ಆದ್ದರಿಂದ ಇವೊತ್ತು ಸಹ ನಮ್ಮ ನೀರಾವರಿ ಮಂತ್ರಿಗಳು ಏನು ೬೦ ಕೋಟಿ ರೂಪಾಯಿಗಳನ್ನು ನೀರಾವರಿಗೆ ಇಟ್ಟಿದ್ದೇವೆಂದು ಹೇಳಿದ್ದಾರೋ ಆ ಹಣವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕಾಗಿದೆ. ಯಾಕೆಂದರೆ ೩೦೦ ಕೋಟಿ ರೂಪಾಯಿ ನೀರಾವರಿಗೆ ಇಟ್ಟು ೩೨ ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಹೋಗಬೇಡಿ. ವರುಣಾ ನಾಲೆ ಕೆಲಸ ೧೦ ವರ್ಷದಿಂದ ನಿಂತಿದೆ. ಮೈಸೂರಿನ ಆ ಭಾಗದ ಜನ ವರುಣಾ ನಾಲೆಯಿಂದ ನೀರು ಇವೊತ್ತು ಬರುತ್ತದೆ, ನಾಳೆ ಬರುತ್ತದೆ ಎಂದು ಕಾಯ್ದುಕೊಂಡು ಕುಳಿತಿದ್ದಾರೆ. ಹೇಮಾವತಿ ನಾಲೆ ಬರುತ್ತದೆ ಎಂದು ನಾಗಮಂಗಲದ ನಾವುಗಳು ಕಾಯುತ್ತಿದ್ದೇವೆ. ಕುಣಿಗಲ್, ತುಮಕೂರು, ತುರುವೇಕೆರೆ ಇತ್ಯಾದಿ ಪ್ರದೇಶಗಳವರೂ ಎಂದು ನಮ್ಮ ಪಾಲಿಗೆ ನೀರು ಬರುತ್ತದೆ ಎಂದು ಕಾಯುತ್ತಿದ್ದಾರೆ. ಇವರೆಲ್ಲಾ ನಾಲೆ ಒಣಗಿರುವುದನ್ನು ನೋಡಿಕೊಂಡು ಕಣ್ಣು ಬಾಯಿ ಬಿಟ್ಟುಕೊಂಡು ಕುಳಿತಿರುವಂತಹ ಪರಿಸ್ಥಿತಿಯನ್ನು, ರೈತಾಪಿ ಜನರು ಪರಿತಪಿಸುತ್ತಿರುವುದನ್ನು ನಾನು ಕಣ್ಣಾರೆ ನೋಡುತ್ತಿದ್ದೇನೆ. ಆದ್ದರಿಂದ ನಾನು ಈ ಸರ್ಕಾರಕ್ಕೆ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ನೀರಾವರಿಗೆ ಇಟ್ಟಿರತಕ್ಕ ೨೩೨ ಕೋಟಿ ರೂಪಾಯಿಗಳಲ್ಲಿ ಒಂದು ಪೈಸೆಯನ್ನೂ ಸಹ ಕಡಿಮೆ ಮಾಡದೇ ಖರ್ಚು ಮಾಡಬೇಕು. ನೀರಾವರಿಗೆ ಆದ್ಯತೆ ಮೇಲೆ ಹಣ ಖರ್ಚು ಮಾಡಬೇಕು. ಆದ್ಯತೆಯ ಮೇಲೆ ಹಣ ಖರ್ಚು ಮಾಡದೇ ಇರುವುದರಿಂದ ನಾವು ಈ ಅನಾಹುತವನ್ನು ಎದುರಿಸುತ್ತಿದ್ದೇವೆಂದು ಹೇಳುತ್ತೇನೆ. ಇನ್ನು ಮುಂದಾದರೂ ಸಹ ಈ ಅನಾಹುತವನ್ನು ಸರಿಪಡಿಸಬೇಕಾದರೆ ನಿಗದಿ ಮಾಡಿರತಕ್ಕ ಹಣವನ್ನು ಖರ್ಚು ಮಾಡಬೇಕು ಎಂದು ಹೇಳುತ್ತೇನೆ. ಟ್ರಿಬ್ಯೂನಲ್‌ಗೆ ಗೈಡ್‌ಲೈನ್ಸ್ ಹಾಕಿ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಬೆಳಿಗ್ಗೆ ಪ್ರಶ್ನೋತ್ತರಗಳ ಸಂದರ್ಭದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಒಂದು ಸಂದೇಹವನ್ನು ವ್ಯಕ್ತಪಡಿಸಿದರು. ಈಗ ಕರ್ನಾಟಕ ವಿಧಾನ ಸಭೆಯಲ್ಲಿ ಕಾವೇರಿ ವಿವಾದದ ಬಗ್ಗೆ ಚರ್ಚೆ ನಡೆಯುತ್ತಾ ಇದೆ. ತಮಿಳುನಾಡಿನಲ್ಲೂ ಸಹಿತ ಈ ಒಂದು ನೀರಿನ ಹಂಚಿಕೆಯ ಬಗ್ಗೆ ವಿವಾದ ನಡೆದು ತಮಿಳುನಾಡು ವಿಧಾನಸಭೆಯಲ್ಲೂ ಸಹಿತ ಒಟ್ಟಾರೆ ನಿರ್ಣಯವನ್ನು ತೆಗೆದುಕೊಂಡು ನಮ್ಮ ಮೇಲೆ ಗಧಾ ಪ್ರಹಾರ ಮಾಡಿರತಕ್ಕದ್ದನ್ನು ನಾವು ನೋಡಿದ್ದೇವೆ. ಈಗ ಎಲ್ಲಿಗಲ್ಲೂ ಸಂಶಯ ಬಂದಿರತಕ್ಕದ್ದು ಏನೆಂದರೆ ಕೇಂದ್ರ ಸರ್ಕಾರ ನಮಗೆ ಮೋಸ ಮಾಡಿದೆ ಎನ್ನತಕ್ಕಂಥ ತೀರ್ಮಾನಕ್ಕೆ ಬರಬೇಕಾಗಿದ್ದರೆ ಕೇಂದ್ರದಲ್ಲಿ ನಮ್ಮ ರಾಜ್ಯದ ಮುಖಂಡರುಗಳು ಏನಿದ್ದಾರೋ ಅವರುಗಳ ಪ್ರತಿಕ್ರಿಯೆ ಏನು ಎನ್ನತಕ್ಕಂಥಾದ್ದು ಇದುವರೆಗೆ ಹೊರ ಬಿದ್ದಿಲ್ಲ. ನಾವು ಈ ಸಂದರ್ಭದಲ್ಲಿ ಇದನ್ನು ವಿಚಾರ ಮಾಡಬೇಕಾಗುತ್ತದೆ. ರಾಷ್ಟ್ರಮಟ್ಟದಲ್ಲಿರ ತಕ್ಕಂಥ ನಮ್ಮ ರಾಜ್ಯದ ಮುಖಂಡರುಗಳು ಅವರು ಯಾವುದೇ ಪಕ್ಷಕ್ಕೆ ಸೇರಿರಲಿ ಕೇಂದ್ರ ಸರ್ಕಾರದ ಜೊತೆ ಇರತಕ್ಕವರು ಅವರ ಪಾತ್ರ ಏನು ಎನ್ನತಕ್ಕಂಥ ಸಂಶಯ ಎಲ್ಲರಲ್ಲೂ ಉಂಟಾಗಿದೆ. ಇದಕ್ಕೆ ದಯ ಮಾಡಿ ಒಂದು ಮಾತನ್ನು ಹೇಳುತ್ತೇನೆ. ಇವರೂ ಸಹಿತ ರಾಜಕೀಯ ಚದುರಂಗದಾಟ ಆಡಲಿಕ್ಕೆ ಕರ್ನಾಟಕವನ್ನು ಒದಿಗೊತ್ತಿ, ಕರ್ನಾಟಕ ರಾಜ್ಯದ ಹಿತವನ್ನು ಬಲಿಕೊಟ್ಟು ಅವರೂ ಸಹಿತ ತಮಿಳುನಾಡಿನವರೊಂದಿಗೆ ಶಾಮೀಲಾಗಿದ್ದಾರೆಯೋ ಇಲ್ಲವೇ ಎನ್ನತಕ್ಕಂಥಾದ್ದನ್ನು ನಾವು ಈ ಸಂದರ್ಭದಲ್ಲಿ ತಿಳಿದುಕೊಳ್ಳಬೇಕಾಗುತ್ತದೆ. ಆದುದರಿಂದ ದಯಮಾಡಿ ಕೇಂದ್ರ ಸರ್ಕಾರಕ್ಕೆ ಒಂದು ಒಟ್ಟಾರೆ ನಿರ್ಣಯವನ್ನು ನಾವು ಮಾಡಿ ಈ ಟ್ರಿಬ್ಯುನಲ್‌ಗೆ ನಮ್ಮ ವಿರೋಧವನ್ನು ವ್ಯಕ್ತ ಮಾಡಿ ನಮ್ಮ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಏನು ನಿರ್ಣಯ ಮಂಡಿಸಿದ್ದಾರೊ ಅದಕ್ಕೆ ನನ್ನ ಬೆಂಬಲವನು ಸೂಚಿಸುತ್ತಾ ಈ ಕರಾಳಛಾಯೆ ಬಗ್ಗೆ ಮತ್ತೊಂದು ಸಾರಿ ವಿನಂತಿ ಮಾಡಿ ಕೊಳ್ಳುತ್ತೇನೆ ಏನೆಂದರೆ ಮತ್ತೊಂದು ಪಂಜಾಬಿನಂತೆ ಕರ್ನಾಟಕ ರಾಜ್ಯವನ್ನು ಪರಿಗಣಿಸಬೇಡಿ, ಆ ರೀತಿ ಮಾಡಬೇಡಿ, ಕರ್ನಾಟಕ ರಾಜ್ಯವನ್ನು ಮತ್ತೊಂದು ಅಸ್ಸಾಮನ್ನಾಗಿ ಮಾಡಬೇಡಿ, ಮತ್ತೊಂದು ಕಾಶ್ಮೀರವನ್ನಾಗಿ ದಕ್ಷಿಣ ರಾಜ್ಯದಲ್ಲಿ ಮಾಡಬೇಡಿ ಎನ್ನತಕ್ಕಂಥ ಎಚ್ಚರಿಕೆಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟು ಈ ಸಂದರ್ಭದಲ್ಲಿ ನನಗೆ ನಾಲ್ಕು ಮಾತುಗಳನ್ನು ಆಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ನಮಸ್ಕರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ).—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಕಾವೇರಿ ವಿವಾದದ ಬಗ್ಗೆ ನಾವು ಎರಡು ದಿನಗಳ ಕಾಲ ಚರ್ಚೆ ಮಾಡಿದ್ದೇವೆ, ಸದಸ್ಯರು ಸಾಕಷ್ಟು ಒಳ್ಳೊಳ್ಳೆಯ ಸಲಹೆಗಳನ್ನು ಸರ್ಕಾರದ ಮುಂದೆ ಮಂಡನೆ ಮಾಡಿದ್ದಾರೆ. ಆದರೆ ದುರ್ದೈವದ ಸಂಗತಿ ಅಂದರೆ ನಾನು ಮಾತನಾಡುವಾಗ ಮಾನ್ಯ ಮುಖ್ಯ ಮಂತ್ರಿಗಳಾಗಲಿ, ಸಂಬಂಧಪಟ್ಟ ನೀರಾವರಿ ಮಂತ್ರಿಗಳಾಗಲಿ ಅಥವಾ ಕಾನೂನಿನ ಪಂಡಿತರಾಗಿರತಕ್ಕಂಥ ಮಾನ್ಯ ಮೊಯಿಲಿಯವರಾಗಲಿ ಯಾರೂ ಇಲ್ಲ. ಮಾನ್ಯ ಟಿ. ಎನ್. ನರಸಿಂಹಮೂರ್ತಿಯವರು ಮಾತ್ರ ಇದ್ದಾರೆ. ಮಾನ್ಯ ಮೊಯಿಲಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಅಂದರೆ ಅಲ್ಲಿಯವರೆಗೂ ಸಹಿತ ಈ ದರ್ಜೆಯ ಧಾಟಿ ಸ್ವಲ್ಪ ಹೆಚ್ಚೂ ಕಡಿಮೆ ಸರಿಯಾಗಿ ಹೋಗುತ್ತಿತ್ತು ಎಂದು ನಾನು ತಿಳಿದಿದ್ದೇನೆ. ಆದರೆ ಮೊಯಿಲಿಯವರು ಮಾತನಾಡಿದ ಧಾಟಿನೇ ಬೇರೆ ತರಹ ಇತ್ತು. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿದ ಧಾಟಿನೇ ಬೇರೆ ಇತ್ತು. ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು ಅಂದರೆ, ನಮ್ಮೆಲ್ಲರನ್ನೂ ಸಹಿತ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ, ಎಲ್ಲಾ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ, ನಾವು ಒಂದು ದಾರಿಯಲ್ಲಿ ಹೋಗಬೇಕು ಎಂದು ಹೇಳಿದರು. ಮತ್ತೆ ಕೇಂದ್ರಸರ್ಕಾರದ ಮೇಲೆ ಯಾವುದೇ ರೀತಿಯ ಮಸಿ ಬಳಿಯತಕ್ಕಂಥ ಪ್ರಯತ್ನವನ್ನು ಅವರು ಮಾಡಲಿಲ್ಲ. ಆದರೆ ಮೊಯಿಲಿಯವರು ಬಹುಶಃ ತಮ್ಮ ಕಾನೂನಿನ ಪಾಂಡಿತ್ಯವನ್ನು ತೋರ್ಪಡಿಸಿಕೊಳ್ಳಬೇಕು ಎನ್ನತಕ್ಕಂಥ ಚಪಲ ಅವರಿಗೆ ಇದೆ ಎಂದು ನಾನು ತಿಳಿದಿದ್ದೇನೆ. ಏಕೆಂದರೆ ಮೊಯಿಲಿಯವರು ವಿರೋಧಪಕ್ಷದಲ್ಲಿ ಕುಳಿತು ಬಹಳ ಚೆನ್ನಾಗಿ ಚರ್ಚೆಗಳನ್ನು ಮಾಡುತ್ತಾ ಇದ್ದರು. ಆ ಚರ್ಚೆಗಳಿಗೆ ಹುರುಳಿಲ್ಲದೇ ಹೋದರೂ ಸಹಿತ ಕಾನೂನುಗಳನ್ನು ತಿರುಚುವುದರಲ್ಲಿ ಮಾನ್ಯ ಮೊಯಿಲಿಯವರು ಬಹಳ ಪರಿಣಿತರಾಗಿದ್ದರು. ಅವರು ಇಂದು ಮಾತನಾಡಿ ಇಡೀ ಸಭೆ ಹೋಗುತ್ತಾ ಇದ್ದಂಥ ಧಾಟಿಯನ್ನೇ ಬೇರೆ ಕಡೆ ಹೋಗತಕ್ಕಂಥ ಪ್ರಯತ್ನವನ್ನು ಮಾಡಿದರು. ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಎರಡು, ಮೂರು ವಿಚಾರಗಳ ಬಗ್ಗೆ ಹೇಳಿದ್ದಾರೆ. ಇವತ್ತು ಟ್ರಿಬ್ಯುನಲ್ ಮೆಂಬರ್ಸ್ ಬಗ್ಗೆ, ಸುಪ್ರೀಂಕೋರ್ಟಿನ ಬಗ್ಗೆ ಅಥವಾ ಕೇಂದ್ರ ಸರ್ಕಾರದ ಬಗ್ಗೆ ಯಾವುದೇ ರೀತಿಯ ಅಪಚಾರದ ಮಾತುಗಳನ್ನೂ ಅವರು ಆಡದೆ ಬುದ್ಧಿವಂತಿಕೆಯಿಂದ ನಾವು ಯಾವರೀತಿ ಕಾರ್ಯಸಾಧನೆ ಮಾಡಬೇಕು ಎನ್ನುವುದರ ಬಗ್ಗೆ ಹೇಳಿದ್ದಾರೆ. ಸನ್ಮಾನ್ಯ ಮೊಯಿಲಿಯವರ ವಾದ ಅದಕ್ಕೆ ವ್ಯತಿರಿಕ್ತವಾಗಿತ್ತು. ಇವತ್ತು ನಾವು ವಿಚಾರವನ್ನು ಮಾಡಬೇಕಾಗಿರುವುದು ಏನೆಂದರೆ, ಪಕ್ಷ ಮತ್ತು ವೈಯುಕ್ತಿಕ ಪ್ರತಿಷ್ಠೆಗಳಿಗಿಂತ ಹೆಚ್ಚಾಗಿ ನಾಡು ಮತ್ತು ನಾಡಿನ ಜನ ನಂತರ ನಾವು ಮತ್ತೆ ಪಕ್ಷ ಎಂದು ವಿಚಾರ ಮಾಡಬೇಕಾಗಿದೆ. ಪರಸ್ಪರ ದೋಷಾರೋಪಣೆ, ದೋಷವನ್ನು ಅಥವಾ ದ್ವೇಷವನ್ನು ಈ ಸಭೆಯ ಮೂಲಕ ವ್ಯಕ್ತ ಮಾಡುವುದರಿಂದ ಯಾವುದೇ ರೀತಿಯ ಉಪಯೋಗವಾಗುವುದಿಲ್ಲ ಎಂದು ನಾನಾದರೂ ತಿಳಿದಿದ್ದೇನೆ. ದುರ್ದೈವ ಏನೆಂದರೆ, ಈ ಸಮಸ್ಯೆ ಇವತ್ತಿನದಲ್ಲ, ಕಾವೇರಿಗೆ ಒಂದು ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸ ಇದ್ದರೆ ಈ ಕಾವೇರಿ ಮತ್ತು ಇತರೆ ರಾಜ್ಯಗಳಿಗೆ ಇರತಕ್ಕಂಥ ನೀರಿನ ಸಮಪಾಲಿನ ಇತಿಹಾಸ ೧೦೦ ವರ್ಷದ್ದು. ಆಂಧ್ರದಲ್ಲಿ ನಾಗಾರ್ಜುನ ಸಾಗರದಂಥ ಒಂದು ಅಣೆಕಟ್ಟೆಯನ್ನು ಅಲ್ಲಿಯ ಒಂದು ನಾಯಕತ್ವದ ಕಾರಣದಿಂದಾಗಿ ಹಣದ ತೊಂದರೆ ಇದ್ದರೂ ಸಹಿತ ಅವರು ಅಲ್ಲಿ ಅದನ್ನು ಕಟ್ಟಿರಬೇಕಾಗಿದ್ದರೆ ನಾವು ಕಾವೇರಿ ಮತ್ತು ಕೃಷ್ಣ ಯೋಜನೆಗಳನ್ನು ಏಕೆ ಮುಗಿಸಲಿಕ್ಕೆ ಆಗಲಿಲ್ಲ?

೪.೦೦ ಪಿ.ಎಂ.

ಇವತ್ತು ಏನಾಗಿದೆ, ವಿ. ಪಿ. ಸಿಂಗ್‌ರವರು ಸರಿಯಾಗಿ ಕೆಲಸ ಮಾಡಿದ್ದಾಗ, ರಾಜೀವ್‌ಗಾಂಧಿಯವರು ತಪ್ಪು ಮಾಡಿದ್ದಾರೆಂದು ನಾನು ವಾದ ಮಾಡಲಿಕ್ಕೆ ನಿಂತಿಲ್ಲ. ಮೂಲಭೂತವಾಗಿ ಕಾವೇರಿ ಮಡಿಲಲ್ಲಿ ಇದ್ದು, ಕಾವೇರಿ ನೀರು ಕುಡಿಯುವ ರೈತನ ಮಗನಾಗಿ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಮತ್ತು ನನ್ನ ತಾಲ್ಲೂಕಿನಲ್ಲಿ ಸುಮಾರು ೨೬,೦೦೦ ಎಕರೆ ಜಮೀನಿಗೆ ನೀರು ಕೊಡತಕ್ಕ ಯೋಜನೆಯನ್ನು ಪ್ರಾರಂಭಿಸಿದ್ದೇವೆ. ಆ ಕೆಲಸವನ್ನು ಸರ್ಕಾರದವರು ಮಾಡುತ್ತಿದ್ದಾರೆ. ಈ ವರ್ಷದ ಯೋಜನೆಯಲ್ಲಿ ಇದಕ್ಕೆ ಹೆಚ್ಚು ಹಣ ಕೊಟ್ಟಿದ್ದಾರೆ. ಆದರೆ, ಇವತ್ತು ಈ ಒಂದು ತೀರ್ಪಿನಿಂದ ಆಗತಕ್ಕ ಅನ್ಯಾಯದ ಬಗ್ಗೆ, ಆಗತಕ್ಕ ತೊಂದರೆಯ ಬಗ್ಗೆ ನಾನು ವಿಚಾರ ಮಾಡಿ, ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಕಳೆದ ೨೦ ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಅಂಥ ಒಂದು ನಾಯಕತ್ವ ಹುಟ್ಟಲಿಲ್ಲ. ಜನಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಆಗಬೇಕಾದ ಕೆಲಸವನ್ನು ಮಾಡುವುದಕ್ಕೆ ಯಾರೂ ಪ್ರಯತ್ನ ಮಾಡಲಿಲ್ಲ. ಇವತ್ತು ಸದನದ ಒಳಗಡೆ ಮತ್ತು ಸದನದ ಹೊರಗಡೆ ಸಹ ಮೊಸಳೆ ಕಣ್ಣೀರು ಸುರಿಸತಕ್ಕ ಪ್ರಯತ್ನಗಳು ನಡೆಯುತ್ತಿವೆ. ಯಾರೋ ಒಬ್ಬರು ಮಂತ್ರಿ ಸ್ಥಾನದಿಂದ

ಕಾವೇರಿ ನೀರಿನ ಇಶ್ಯೂ ಮೇಲೆ ರಾಜೀನಾಮೆ ಕೊಟ್ಟರು ಎಂದು ಹೇಳಿದರು. ಕೊಟ್ಟಿರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ.

ಶ್ರೀ ಸಿ. ಭೈರೇಗೌಡ.— ರೈತರ ಜಮೀನಿಗೆ ನೀರು ಕೊಟ್ಟರೆ ಏನು ಬರುತ್ತೆ ಎನ್ನುವಂಥ ಮಹಾತ್ಮರು ಕೂಡ ಇದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷಿಣಿಯವರೆ, ರಾಜೀನಾಮೆ ಕೊಟ್ಟು ಅದೇ ಮಂತ್ರಿಮಂಡಲಕ್ಕೆ ಮತ್ತೆ ಬಂದರು ಎನ್ನುವುದು ಅವರಿಗೆ ಜ್ಞಾಪಕ ಇರಬಹುದು. ತಾವು ಆಡಿದ ಶಬ್ದಗಳನ್ನು ತಾವೇ ನುಂಗಬೇಕಾಗುತ್ತದೆ. ನನಗೆ ಅವರ ಮೇಲೆ ದ್ವೇಷ ಇಲ್ಲ.

ಶ್ರೀ ಸಿ. ಭೈರೇಗೌಡ.— ನೀರಾವರಿಗೆ ೩೦೦ಕೋಟಿ ರೂಪಾಯಿ ಕೊಡಬೇಕೆಂದು ತೀರ್ಮಾನ ಮಾಡಿದ್ದನ್ನು. ಯಾರು ಉಲ್ಲಂಘನೆ ಮಾಡಿದರು ಎನ್ನುವುದು ಜನರಿಗೆ ಗೊತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇವತ್ತು ನೀವಿಬ್ಬರೂ ಒಂದಾಗಿದ್ದೀರಿ, ಏತಕ್ಕೆ ದೋಷಾರೋಪಣೆ ಮಾಡುತ್ತಿದ್ದೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಒಂದಾಗುವುದಿಲ್ಲ. ಒಂದು ವೇಳೆ ಎಲ್ಲಾ ಪಕ್ಷಗಳು ಒಂದಾಗಿದ್ದರೂ ಏನಾಗುತ್ತದೆ ಎನ್ನುವುದು ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಅವರು ಕೂಡ ಒಂದು ಕಾಲದಲ್ಲಿ ನಮ್ಮ ನಾಯಕರಾಗಿದ್ದರು. ನಾಲ್ಕು ಜನ ಒಂದಾದರೆ ಅದರಿಂದ ಏನು ಉಪಯೋಗ ಇಲ್ಲ. ಮೊಸಳೆ ಕಣ್ಣೀರು ಸುರಿಸುವುದನ್ನು ನಿಲ್ಲಿಸಬೇಕು. ತಾವು ಜವಾಬ್ದಾರಿ ಸದಸ್ಯರಿದ್ದೀರಿ, ಹಿರಿಯ ಸದಸ್ಯರಿದ್ದೀರಿ, ಆನೇ ಸಾರಿ ಈ ಸದನಕ್ಕೆ ಬಂದಿದ್ದೀರಿ. ದೊಡ್ಡ ಪಂಡಿತರಿದ್ದೀರಿ, ಪ್ರತಿಯೊಂದು ವಿಚಾರವನ್ನು ತಿಳಿದುಕೊಂಡು ಮಾತನಾಡುತ್ತೀರಿ, ನೀರಿಗೋಸ್ಕರ ರಕ್ತವನ್ನು ಕೊಡತಕ್ಕ ಜನ ನೀವು. ಆದ್ದರಿಂದ ಮೊಸಳೆ ಕಣ್ಣೀರು ಸುರಿಸುವ ಪ್ರವೃತ್ತಿಯನ್ನು ನೀವು ನಿಲ್ಲಿಸಬೇಕು. ಮಾಡಿರತಕ್ಕ ತಪ್ಪು ನಮ್ಮದು ಎಂದು ಹೇಳಿದರೆ ಜನ ನಮ್ಮನ್ನು ನಂಬುತ್ತಾರೆ,

ಶ್ರೀ ಸಿ. ಭೈರೇಗೌಡ.— ತಾವು ಕೂಡ ಯಥೇಚ್ಛವಾಗಿ ಮಾಡಿದ್ದೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾಡಿದ್ದೇವೆ, ಯೋಜನೆಗಳಿಗೆ ಸಾಕಷ್ಟು ಹಣ ಕೊಡಿಸುವುದಕ್ಕೆ ಆಗಿಲ್ಲ. ಹಣ ಕೊಡಿಸತಕ್ಕ ನಾಯಕತ್ವ ನಮಗೆ ಇನ್ನೂ ಬರಲಿಲ್ಲ. ಆದರೆ, ಇವತ್ತು ಸದನದ ಹೊರಗಡೆ ಹೇಳಿಕೆಗಳನ್ನು ಮಾಡುವುದರಿಂದ ಯಾವುದೇ ರೀತಿಯ ಪ್ರಯೋಜನ ಸರ್ಕಾರಕ್ಕಾಗಲೀ, ರಾಜ್ಯಕ್ಕಾಗಲೀ, ರಾಜ್ಯದ ಜನತೆಗಾಗಲೀ ಆಗುವುದಿಲ್ಲ. ಇದರ ಬಗ್ಗೆ ಯಾರೋ ಒಬ್ಬರು ಮುಖಂಡತ್ವವನ್ನು ವಹಿಸುವುದಕ್ಕೆ ಆಗುವುದಿಲ್ಲ. ಕಾವೇರಿ ನೀರು ಆರು ಜಿಲ್ಲೆಗಳಲ್ಲಿ ಹರಿಯುತ್ತಿದೆ, ಕಾವೇರಿ ನೀರನ್ನು ಉಣಿಸತಕ್ಕ ೬ ಜಿಲ್ಲೆಗಳ ಒಂದೂವರೆ ಕೋಟಿ ಜನ ಯಾರಿದ್ದಾರೆ, ಅವರ ಮುಖಂಡತ್ವವನ್ನು ವಹಿಸತಕ್ಕ ನೈತಿಕ ಜವಾಬ್ದಾರಿಯನ್ನು ನಾವೆಲ್ಲರೂ ಕಳೆದುಕೊಂಡಿದ್ದೇವೆ. ೨೫ ವರ್ಷಗಳ ಕಾಲದಿಂದಲೂ ಈ ನೀರಿನ ಬಗ್ಗೆ ವಿವಾದವಿತ್ತು. ಕೇಂದ್ರದಲ್ಲಿ ಒಂದೇ ಪಕ್ಷದ ಸರ್ಕಾರ ಅಧಿಕಾರದಲ್ಲಿತ್ತು. ಆಕಸ್ಮಿಕವಾಗಿ ನಾವು ೬ ತಿಂಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿದ್ದೇವೆ. ಮಧ್ಯದಲ್ಲಿ ಎರಡು ವರ್ಷಗಳ ಕಾಲ ಆಡಳಿತ ನಡೆಸಿದ್ದೇವೆ. ಅದನ್ನು ಬಿಟ್ಟರೆ ೧೮-೧೯ ವರ್ಷಗಳ ಕಾಲ ಒಂದೇ ಪಕ್ಷದ ಸರ್ಕಾರ ಆಡಳಿತ ನಡೆಸಿದೆ. ತಮಿಳುನಾಡು ರೈತರು ೨೮-೩೦ ಲಕ್ಷ ಎಕರೆಗಳವರೆಗೆ ನೀರಾವರಿ ಮಾಡಿಕೊಂಡಿದ್ದಾರೆ. ೩ ಲಕ್ಷ ಎಕರೆಗಳಷ್ಟು ಅನಧಿಕೃತವಾಗಿ ಸಾಗುವಳಿ ಮಾಡಿದ್ದಾರೆ. ನಾವಿನ್ನೂ ೧೦-೧೧ ಲಕ್ಷ ಎಕರೆ ಕೂಡ ಮಾಡಿಲ್ಲ. ಕೇಂದ್ರದಲ್ಲಿ ಆಡಳಿತದಲ್ಲಿದ್ದಂತಹ ಸರ್ಕಾರಗಳು ತಮಿಳುನಾಡಿನ ಅನೇಕ ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಕೊಟ್ಟಿವೆ. ಹೇಗೆ ಕೊಟ್ಟರು ? ಕರ್ನಾಟಕ ರಾಜ್ಯದವರಿಗೆ ಅನ್ಯಾಯವಾಗುತ್ತದೆಂದು ಆಡಳಿತದಲ್ಲಿದ್ದಂಥ ಜನಕ್ಕೆ ಗೊತ್ತಿದ್ದರೂ ಕ್ಲಿಯರೆನ್ಸ್ ಏತಕ್ಕೆ ನಿಲ್ಲಿಸಲಿಲ್ಲ. ದೋಷಾರೋಪಣೆಯಿಂದ ಸ್ವಾರ್ಥ ರಾಜಕೀಯದಿಂದ ಯಾವ ಉಪಯೋಗವೂ ಆಗುವುದಿಲ್ಲ. ನಾನು ಇವತ್ತು ಮುಖ್ಯಮಂತ್ರಿಗಳಿಂದ ನಿರೀಕ್ಷೆ ಮಾಡಿದ್ದೆ, ಸರ್ಕಾರದಿಂದ ನಿರೀಕ್ಷೆ ಮಾಡಿದ್ದೆ, ಎಲ್ಲಾ ಶಾಸಕರುಗಳಿಗೂ ಈ ಸಮಸ್ಯೆಯ ಬಗ್ಗೆ ಟಿಪ್ಪಣಿ ಕೊಡುತ್ತಾರೆಂದು. ಆದರೆ, ಆ ಕೆಲಸ ಮಾಡಲಿಲ್ಲ. ನಾವು ಕೇವಲ ಸ್ಟಾಟಿಸ್ಟಿಕಲ್ ಪಾಯಿಂಟ್‌ನಿಂದ, ಲೀಗಲ್ ಲಿಮಿಟ್ಸ್ ಇಟ್ಟುಕೊಂಡು ಮಾತನಾಡಬೇಕಾಗಿದೆ.

ಇವೊತ್ತು ನಾವು ಏನು ನಿರೀಕ್ಷೆ ಮಾಡಿದ್ದೆವು, ಕಾವೇರಿ ಜಲಾನಯನದಲ್ಲಿರತಕ್ಕಂಥ ಎಲ್ಲಾ ಯೋಜನೆಗಳನ್ನು ಸಂಪೂರ್ಣವಾಗಿ ಮುಗಿಸಬೇಕಾದರೆ ಇನ್ನೂ ಎಷ್ಟು ವರ್ಷಗಳು ಬೇಕು ? ಇನ್ನೂ ಎಷ್ಟು ಹಣ ಬೇಕು ? ಯಾವರೀತಿ ಅದನ್ನು ಉಪಯೋಗಿಸಬೇಕು ಎನ್ನುವುದಕ್ಕೆ ಈ ಸದನದ ಅಭಿಪ್ರಾಯ ಬೇಕಾಗುತ್ತದೆ. ಟ್ರಿಬ್ಯೂನಲ್ ಆದತಕ್ಷಣ ನಾವು ಹೆದರತಕ್ಕ ಅಗತ್ಯವಿಲ್ಲ. ನನ್ನ ಅಭಿಪ್ರಾಯದಲ್ಲಿ ಟ್ರಿಬ್ಯೂನಲ್ ಕೊಟ್ಟ ತೀರ್ಮಾನವನ್ನು ಎಲ್ಲರೂ ಸಹಿತ ಒಪ್ಪಿಕೊಂಡಿಲ್ಲ. ಅಂದರೆ ನಾವು ಅದನ್ನು ಬಹಿಷ್ಕಾರ

ಮಾಡಬೇಕೆಂದು ಹೇಳತಕ್ಕವನು ಅಲ್ಲ. ಆದರೆ ಟ್ರಿಬ್ಯುನಲ್ ತೀರ್ಮಾನ ಅಂತಿಮ ಆಗುವುದಿಲ್ಲ. ರೈತರ ಮೈಯಲ್ಲಿ ರಕ್ತ ಇದೆ, ಹೋರಾಟ ಮಾಡತಕ್ಕ ಶಕ್ತಿ ಸಹಿತ ಅವರಲ್ಲಿ ಇದೆ. ಆದರೆ ನಾವು ಏನು ಮಾಡಬೇಕು, ನಮ್ಮ ಜವಾಬ್ದಾರಿ ಏನು, ಸರ್ಕಾರ ಏನು ಮಾಡಬೇಕೆಂದು ತಿಳಿಯಲು ಈ ಸದನವನ್ನು ತಾವು ಕರೆದಿದ್ದೀರಿ. ನಾವು ನಮಗೆ ಸಿಕ್ಕಿರತಕ್ಕ ಅಂಕಿಅಂಶಗಳನ್ನು ತೆಗೆದುಕೊಂಡುಬಂದು ಇಲ್ಲಿ ಮಾತನಾಡುತ್ತೇವೆ ವಿನಹ ಸರ್ಕಾರ ಏನು ಮಾಡಬೇಕೆಂದಿದೆ ಹಾಗೂ ಸರ್ಕಾರದ ಅಂಕಿಅಂಶಗಳು ಏನು ಎಂದು ನಮಗೆ ತಿಳಿಸಬೇಕು. ಮಾನ್ಯ ಪುಟ್ಟಸ್ವಾಮಿಗೌಡರು ೧೫೦ ಕೋಟಿ ರೂಪಾಯಿ ಹಣ ಬಡ್ಜೆಟ್ಟಿನಲ್ಲಿ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇದರಲ್ಲಿ ಸತ್ಯಾಸತ್ಯತೆಗಳು ಎಷ್ಟು. ಎಷ್ಟು ಹಣ ನಮ್ಮ ಹತ್ತಿರ ಇದೆ. ಎಷ್ಟು ಹಣ ನಾವು ಖರ್ಚು ಮಾಡಬಹುದು ಎನ್ನುವ ಒಂದು ಟಿಪ್ಪಣಿಯನ್ನು ಬಹುಶಃ ನಮಗೆ ಕೊಟ್ಟಿದ್ದರೆ ಈ ಸದನದಲ್ಲಿ ಈ ಚರ್ಚೆಯನ್ನು ರಚನಾತ್ಮಕವಾಗಿ ಮಾಡಬಹುದಾಗಿತ್ತು. ಸರ್ಕಾರಕ್ಕೆ ಇನ್ನೂ ಹೆಚ್ಚಿನ ಒಂದು ಶಕ್ತಿಯನ್ನು ನಾವು ತುಂಬಬಹುದಾಗಿತ್ತು. ರಾಜ್ಯದ ರೈತರಿಗೆ, ಕಾವೇರಿ ಜಲಾನಯನದ ರೈತರಿಗೆ ಅನುಕೂಲ ಮಾಡಬಹುದಾಗಿತ್ತು ಎಂದು ನನ್ನ ಅಭಿಪ್ರಾಯ. ೧೯೭೨ರಿಂದ ದೆಹಲಿಯಲ್ಲಿ ಇರತಕ್ಕ ಸುಪ್ರೀಮ್ ಕೋರ್ಟ್ ಇರಲಿ, ಅಥವಾ ಸೆಂಟ್ರಲ್ ವಾಟರ್ ಕಮಿಷನ್ ಇರಲಿ, ಅಥವಾ ಕೇಂದ್ರ ಸರ್ಕಾರ ಇರಲಿ, ನಮ್ಮ ಪೊಲಿಟಿಕಲ್ ಲಾಬಿ ಎಷ್ಟೊಂದು ಸ್ಟ್ರಾಂಗ್ ಆಗಿದೆ ಎಂಬುದನ್ನು ವಿಚಾರ ಮಾಡಬೇಕು. ನಾನು ಯಾರಿಗೋ ದೋಷಾರೋಪಣೆ ಮಾಡಬೇಕೆಂದು ಈ ಮಾತನ್ನು ಹೇಳುತ್ತಿಲ್ಲ. ನಮ್ಮ ರಾಜ್ಯದವರೇ ಕೇಂದ್ರದಲ್ಲಿ ಬಹಳ ದಿವಸ ನೀರಾವರಿ ಮಂತ್ರಿಗಳಾಗಿದ್ದರು. ಮಾನ್ಯ ಮುಖ್ಯಮಂತ್ರಿಗಳು ಈ ಮಾತನ್ನು ಹೇಳಿದಾಗ ಬಹಳ ನೋವು ಆಯಿತು. ಸೆಂಟ್ರಲ್ ವಾಟರ್ ಕಮಿಷನ್‌ನಲ್ಲಿ ಕಾವೇರಿ ನೀರಿನ ಬಗ್ಗೆ ಒಂದು ಅಂಕಿಅಂಶಗಳು ಇಲ್ಲ, ಒಂದು ಕನಿಷ್ಟ ಮಾಹಿತಿ ಇಲ್ಲ ಅಂದರೆ ಕರ್ನಾಟಕ ರಾಜ್ಯದ ಬಗ್ಗೆ ಈ ಜನರು ಎಷ್ಟೊಂದು ಯೋಚನೆ ಮಾಡಿದ್ದಾರೆ, ಯಾರಿಂದ ಯಾರಿಗೆ ವಂಚನೆಯಾಗಿದೆ ಎನ್ನುವುದನ್ನು ಸಹಿತ ನಮ್ಮ ಮುಂದಿನ ಪೀಳಿಗೆಯವರು ಮತ್ತು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಸೆಂಟ್ರಲ್ ವಾಟರ್ ಕಮಿಷನ್‌ನಲ್ಲಿ ಅಂಕಿಅಂಶಗಳಿಲ್ಲ. ಇವನ್ನೂ ಸಹಿತ ನಾವು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮ ಪೊಲಿಟಿಕಲ್ ಲಾಬಿ ಎಷ್ಟೊಂದು ಸ್ಟ್ರಾಂಗ್ ಆಗಿ ಕೆಲಸ ಮಾಡಿದೆ. ಇವೊತ್ತು ತಮಿಳುನಾಡಿನಲ್ಲಿ ಒಬ್ಬ ಮಂತ್ರಿಗಳನ್ನು ಅಲ್ಲಿ ಇದಕ್ಕಾಗಿ ಇಟ್ಟಿದ್ದಾರೆ. ಅವರ ಸರ್ಕಾರದ ಪರವಾಗಿ ವಾದವನ್ನು ಮಾಡಲಿಕ್ಕೆ ಎಂದು ಹೇಳಿ ಅಲ್ಲಿ ಇಟ್ಟಿದ್ದಾರೆ. ನಾವು ೧೦ ಜನ ಅಧಿಕಾರಿಗಳನ್ನು ಇಡುತ್ತೇವೆ. ೨೫ ಜನ ಅಧಿಕಾರಿಗಳನ್ನು ಕಳುಹಿಸುತ್ತೇವೆ. ಒಂದು ಮಂತ್ರಿಮಂಡಲದಲ್ಲಿ ೨೫ ಜನರು ಇರುವುದು ೩೦ ಜನರಿಗೆ ಹೆಚ್ಚು ಮಾಡಿಬಿಡಿರಿ ಅಂದರೆ ಅದು ಏರ್‌ಬಸ್ ಸಂಪುಟ ಎಂದು ಮಾನ್ಯ ನರಸಿಂಹಮೂರ್ತಿಯವರು ಹೇಳುತ್ತಾರೆ. ನಮ್ಮ ಒಬ್ಬ ಮಂತ್ರಿಗಳು ಅಲ್ಲಿ ಹೋಗಿ ಕುಳಿತುಕೊಂಡಿದ್ದರೆ ನಮ್ಮ ಪರವಾಗಿ ವಾದ ಮಾಡಬಹುದು, ತಮಿಳುನಾಡಿನವರು ಒಬ್ಬ ಮಂತ್ರಿಗಳನ್ನು ಅಲ್ಲಿ ಇಟ್ಟಿದ್ದರಿಂದ ಅವರು ಅವರ ಪರವಾಗಿ ವಾದ ಮಾಡಿಸರು, ತಮಿಳುನಾಡಿನವರು ಈ ಕ್ಷೇತ್ರದಲ್ಲಿ ಅಷ್ಟೇ ಅಲ್ಲ, ಎಲ್ಲಾ ಕ್ಷೇತ್ರದಲ್ಲಿಯೂ ಸಹಿತ ಬಹಳಷ್ಟು ಮುಂದುವರಿಯಲಿಕ್ಕೆ ಇದೇ ಮುಖ್ಯವಾದ ಕಾರಣ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇವೊತ್ತು ನ್ಯಾಷನಲ್ ಫ್ರಂಟ್ ಗವರ್ನಮೆಂಟ್ ಏನೋ ಒಂದು ದೊಡ್ಡ ತಪ್ಪು ಮಾಡಿದೆ ಎನ್ನುವ ಮಾತು ಹೇಳಿರುವುದು ತಾವೆಲ್ಲರೂ ಈ ಸಭೆಯಲ್ಲಿ ಕೇಳಿದ್ದೀರಿ. ಮಾನ್ಯ ಗುರುಪಾದಸ್ವಾಮಿಯವರ ಮೇಲೆ ಮಾನ್ಯ ರಾಮಕೃಷ್ಣ ಹೆಗಡೆಯವರ ಮೇಲೆ, ಸನ್ಮಾನ್ಯ ಬೊಮ್ಮಾಯಿಯವರ ಮೇಲೆ ಈ ರೀತಿ ಗೂಬೆ ಕೂರಿಸತಕ್ಕ ಪ್ರಯತ್ನ ನಡೆದಿದೆ. ಆದರೆ ಮಾನ್ಯ ಸಭಾನಾಯಕರು ಈ ಮಾತನ್ನು ಹೇಳಲಿಲ್ಲ, ನಾನು ಅದನ್ನು ಗಮನಿಸಿದ್ದೇನೆ. ಇವೊತ್ತು ತಮ್ಮ ನಿಯೋಗದ ಜೊತೆಯಲ್ಲಿ ಮಾನ್ಯ ಹೆಗಡೆಯವರು, ಮಾನ್ಯ ಬೊಮ್ಮಾಯಿಯವರು ಬಂದಿದ್ದಾರೆ. ಇದಕ್ಕೆ ಮಾನ್ಯ ಕರುಣಾನಿಧಿಯವರು ಆಬ್ಜೆಕ್ಷನ್ ಸಹಿತ ಮಾಡಿದ್ದಾರೆ. ಇವೊತ್ತು ಈ ಡಿಸ್‌ಪ್ಯೂಟ್‌ನ ಬಗ್ಗೆ ೨೬ನೇ ಫೆಬ್ರುವರಿಯಲ್ಲಿ ಸುಪ್ರೀಮ್ ಕೋರ್ಟಿನಲ್ಲಿ ಏನು ಹೇಳಿದರು, ಇಂತಹ ತಾರೀಖಿನೊಳಗೆ ನೀವು ತೀರ್ಮಾನಕ್ಕೆ ಬರದೆ ಹೋದರೆ ನಾವು ಅಫಿಷಿಯಲ್ ಜಡ್ಜ್‌ಮೆಂಟ್ ಕೊಡುತ್ತೇವೆಂದು ಒಂದು ಸಮಯವನ್ನು ನಿಗದಿ ಮಾಡುತ್ತಾರೆ, ಆ ಎರಡು ತಿಂಗಳಲ್ಲಿ ನಾವು ಎಷ್ಟು ಕೆಲಸ ಮಾಡಿದ್ದೇವೆಂಬುದನ್ನು ಸಹಿತ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದನ್ನು ನಾವು ಬಹಳ ತೀಕ್ಷ್ಣವಾಗಿ ಗಮನಿಸಬೇಕಾಗುತ್ತದೆ. ಸುಪ್ರೀಮ್ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಗಡುವು ಹಾಕುತ್ತದೆ. ನಿಜ. ಆ ಗಡುವನ್ನು ಇನ್ನೊಂದು ಸಾರಿ ಮುಂದೆ ಹಾಕಿಸಲಿಕ್ಕೆ ಕೇಂದ್ರ ಸರ್ಕಾರದವರು ಪ್ರಯತ್ನ ಮಾಡಬಹುದಾಗಿತ್ತು. ಆದರೆ ಅದಕ್ಕೆ ಬೇಕಾಗಿರತಕ್ಕಂಥ ಒಂದು ಸಿದ್ಧತೆಗಳು ಏನಿದೆ ಅದನ್ನು ಮಾಡುವುದರಲ್ಲಿ ನಾವು ವಿಫಲರಾಗಿದ್ದೇವೆಂದು ನನಗಾದರೂ ಅನ್ನಿಸುತ್ತದೆ. ೧೯೮೮ರಲ್ಲಿ ನ್ಯಾಯಮೂರ್ತಿ ರಂಗನಾಥ್ ಮಿಶ್ರಾರವರು ಸುಪ್ರೀಮ್ ಕೋರ್ಟ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ. "Question of Jurisdiction shall be considered at the final hearing." ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಇವತ್ತು ಏಪ್ರಿಲ್ ತಿಂಗಳಲ್ಲಿ ಮಾಡಿರತಕ್ಕ ಕೊನೇ ತೀರ್ಪಿನಲ್ಲಿ Question of Jurisdiction ಬಗ್ಗೆ ಕರ್ನಾಟಕದ ಪರವಾಗಿ ವಾದ ಮಾಡಿದ

ವಕೀಲರು ಸ್ಟ್ಯಾಂಗ್ ಅಬ್ಜಕ್ಷನ್ ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಕೂಡಾ ಹೇಳಿದ್ದಾರೆ. ಸುಪ್ರೀಮ್ ಕೋರ್ಟ್‌ನ ಜಡ್ಜ್‌ಮೆಂಟ್‌ನಲ್ಲಿ ಇದು ಸಹ ಇದೆ. ಅದನ್ನು ಮತ್ತೆ ಹೇಳುವ ಅಗತ್ಯ ಇಲ್ಲ. ಆದುದರಿಂದ ನಮ್ಮದೂ ತಪ್ಪು ಇದೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಕೇವಲ ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದರಿಂದ ಇವತ್ತು ನಮಗೆ ಯಾವುದೇ ರೀತಿಯ ಉಪಯೋಗವಾಗುವುದಿಲ್ಲವೆಂದು ತಿಳಿದುಕೊಳ್ಳಬೇಕು. ಶ್ರೀ ಗುರುಪಾದಸ್ವಾಮಿಯವರಾಗಲೀ, ಶ್ರೀ ಬೊಮ್ಮಾಯಿಯವರಾಗಲೀ, ಶ್ರೀ ಹೆಗಡೆಯವರಾಗಲೀ ಈ ರಾಜ್ಯದ ಹಿತಕ್ಕೆ ಧಕ್ಕೆ ಮಾಡಬೇಕೆನ್ನುವ ಕಾರಣ ಅವರಿಗೆ ಏಕೆ ಇರುತ್ತದೆ ? ಏನು ಅವರು ಸ್ಪರ್ಧೆಯಲ್ಲಿದ್ದಾರೆಯೇ ? ಅವರು ಕನ್ನಡಿಗರಲ್ಲವೇ ? ಅಥವಾ ಅವರಿಗೆ ನಾಯಕತ್ವ ಏನಾದರೂ ಹೋಗಿಬಿಡುತ್ತದೆಯೇ ? ಅಥವಾ ಏನಾದರೂ ಪ್ರಧಾನಿ ಆಗಬೇಕೆಂದು ಹೊರಟಿದ್ದಾರಾ ? ಈಗ ಇರತಕ್ಕ ಪ್ರಶ್ನೆ ಏನು ? ಸುಪ್ರೀಮ್ ಕೋರ್ಟ್‌ನಿಂದ ಫೈನಲ್ಲಾಗಿ ನೀವು ಪಂಚಾಯಿತಿ ಮಾಡಬೇಕು. ಎಂದು ತೀರ್ಪು ಕೊಟ್ಟಿರುವುದರಿಂದ ಇವತ್ತು ಕೇಂದ್ರ ಸರ್ಕಾರ ಒಪ್ಪಿಕೊಳ್ಳತಕ್ಕ ಪರಿಸ್ಥಿತಿಗೆ ಬಂದಿತೇ ಹೊರತು ಬೇರೇನಿಲ್ಲ. ಇದನ್ನು ಇನ್ನೂ ಸ್ವಲ್ಪ ದಿವಸ ಮುಂದೆ ಹಾಕಬಹುದಿತ್ತು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡಿದ್ದಾರೆ ಎನ್ನತಕ್ಕ ಮಾತನ್ನೂ ಸಹಾ ನಾನು ಒಪ್ಪುತ್ತೇನೆ. ಇವತ್ತು ಟ್ರಿಬ್ಯುನಲ್ ಬಗ್ಗೆ ಯಾವುದೇ ರೀತಿಯ ಹೆದರಿಕೆ ಬೇಡ ಎನ್ನುವುದು ನನ್ನ ಅಭಿಪ್ರಾಯ. ಟ್ರಿಬ್ಯುನಲ್ ಬಗ್ಗೆ ಯಾವುದೇ ರೀತಿಯ ಭಯಪಡುವುದು ಬೇಡ ಎಂದು ಮುಖ್ಯಮಂತ್ರಿಗಳು ಸಹ ಹೇಳಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಟ್ರಿಬ್ಯುನಲ್ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಸುಪ್ರೀಮ್ ಕೋರ್ಟ್‌ನವರು ಟರ್ಮ್ಸ್ ಆಫ್ ರೆಫರೆನ್ಸ್ ಡಿಸೈಡ್ ಮಾಡಬೇಕೆಂದು ಹೇಳಿದ್ದಾರೆ, ಅದನ್ನು ಮಾಡಬೇಕಾಗಿರುವವರು ಟ್ರಿಬ್ಯುನಲ್‌ನ ಮೂರು ಜನ ಸದಸ್ಯರು. ಅವರು ಒಂದು ಅಥವಾ ಎರಡು ಅಥವಾ ಮೂರು ವರ್ಷಗಳಲ್ಲಿ ಅದನ್ನು ತೀರ್ಮಾನ ಮಾಡುತ್ತಾರೆ, ಅದರಿಂದಾಗಿ ಇವತ್ತು ಸುಪ್ರೀಮ್ ಕೋರ್ಟ್ ಮುಂದೆ ಏನು ಉಳಿದಿಲ್ಲ. ಟ್ರಿಬ್ಯುನಲ್‌ನವರು ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಡಿಸೈಡ್ ಮಾಡುತ್ತಾರೆ. ಆದಾದಮೇಲೆ ಒಂದು ತೀರ್ಮಾನವನ್ನು ಅವರು ಕೊಡುತ್ತಾರೆ. ಆದುದರಿಂದ, ಮಾನ್ಯ ಅಧ್ಯಕ್ಷರೇ ನಾವು ಇಲ್ಲಿ ಹೋರಾಟ ಮಾಡಬೇಕು. ಇವತ್ತು ನಮ್ಮ ನೀರನ್ನು ನಾವು ಉಳಿಸಿಕೊಳ್ಳುವುದಕ್ಕೆ ಹೋರಾಟ ಮಾಡುವ ಒಂದು ದುರ್ದೈವದ ಸಂಗತಿ ಬಂದಿದೆ. ಗ್ರಾಮೀಣ ಪ್ರದೇಶದಲ್ಲಿ ಒಂದು ಮಾತನ್ನು ಹೇಳುತ್ತಾರೆ. ಹೊಳೇ ನೀರಿಗೆ ದೊಣ್ಣೆ ನಾಯಕನ ಅಪ್ಪಣೆ ಬೇಕೇ ಎಂದು ಹೇಳುತ್ತಾರೆ. ಇವತ್ತು ಹಳ್ಳಿಗಳಲ್ಲಿ ಏನು ಪರಿಸ್ಥಿತಿ ಇದೆ ? ಮೇಲಿನ ಕೆರೆಯಿಂದ ಕೆಳಗೆ ಇರತಕ್ಕ ಕೆರೆಗೆ ನೀರನ್ನು ಬಿಡುವುದಿಲ್ಲ. ನಮ್ಮ ರಕ್ತದ ಕೊನೆಯ ತೊಟ್ಟು ಇರುವವರೆಗೂ ಸಂಗಮದಿಂದ ನೀರು ಹೋಗಲು ಬಿಡುವಷ್ಟು ಹೇಡಿಗರು ಕನ್ನಡಿಗರಲ್ಲ. ಸಂಗಮದ ಮೂಲಕವೇ ತಮಿಳುನಾಡಿಗೆ ನೀರು ಹೋಗುತ್ತದೆ. ನೀರನ್ನು ನಾವ್ಯಾರೂ ಸಹ ಬಿಡುವುದಿಲ್ಲ. ನಮಗೆ ರಾಜಕೀಯ ಸ್ವಾರ್ಥ ಇರಬಹುದು, ಮತ್ತೆ ಅಧಿಕಾರಕ್ಕೆ ಬರಬೇಕೆಂದು, ಮತ್ತೊಂದು ಇರಬಹುದು. ಆದರೆ ರೈತರಿಗೆ ಇದು ಇಲ್ಲ ಎನ್ನತಕ್ಕದ್ದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಆದುದರಿಂದ ಇವತ್ತು ಮುಖ್ಯವಾಗಿ ಪಕ್ಷಾತೀತವಾಗಿ ಒಂದು ಸಂಘಟನೆ ಆಗಬೇಕು. ಮಾನ್ಯ ಮುಖ್ಯಮಂತ್ರಿಯವರು ಅದರ ನಾಯಕತ್ವವನ್ನು ವಹಿಸಲಿ. ಅದರಲ್ಲಿ ತಪ್ಪಿಲ್ಲ ಅದನ್ನು ಬಿಟ್ಟು ಬೇರೆ ಬೇರೆ ಸ್ವಾರ್ಥ ರಾಜಕೀಯವನ್ನು ರಾಜಕೀಯ ಲಾಭವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡುವುದು ತಪ್ಪು ಎಂದು ಈ ಸಭೆಯ ಮೂಲಕ ಹೇಳುತ್ತೇನೆ. ಈ ರಾಜ್ಯದಲ್ಲಿ ಈ ಸಭೆಗೆ ಮೇಲೆ ಯಾರೂ ಸಹಾ ಇಲ್ಲ. ಈ ಸಭೆಯಲ್ಲಿನ ಸಭಾಧ್ಯಕ್ಷರು ಹಾಗೂ ನಾವೇ ಕೊನೇ ತೀರ್ಮಾನ ಕೊಡತಕ್ಕವರು. ನಾವುಗಳೆಲ್ಲಾ ಏನು ಹೇಳುತ್ತೇವೋ ಅದೇ ನಿರ್ಣಯ ಆಗುತ್ತದೆ. ಆ ದೃಷ್ಟಿಯಿಂದ ಇವತ್ತು ಜನರನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಕರ್ನಾಟಕದಲ್ಲಿ ಏನು ಪ್ರಯತ್ನ ನಡೆಯುತ್ತಿದೆ ಆದಕ್ಕೆ ನಾವೆಲ್ಲರೂ ಇತಿಶ್ರೀ ಹಾಡಲೇಬೇಕಾಗುತ್ತದೆ. ಎಷ್ಟು ದೊಡ್ಡ ವ್ಯಕ್ತಿಯೇ ಇರಲಿ ಇವತ್ತು ಈ ಸದನಕ್ಕೆ ಅವರು ಒಬ್ಬ ದೊಡ್ಡ ವ್ಯಕ್ತಿಯಾಗಿ ಕಾಣುವುದಿಲ್ಲ. ಈ ಸಭೆಯ ಮುಂದೆ ಅವರೂ ಕೂಡಾ ಒಬ್ಬ ಸಾಮಾನ್ಯ ಪ್ರಜೆಯಾಗುತ್ತಾರೆ. ಈಗ ಒಂದು ತೀರ್ಮಾನ ಆಗಿದೆ. ಇದರ ಬಗ್ಗೆ ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಇವತ್ತು ಹೋರಾಟ ಜನರ ಮಧ್ಯೆ ಆಗುವುದರ ಜೊತೆಗೆ ಎರಡು ರೀತಿಯ ಹೋರಾಟ ಆಗಬೇಕಾಗುತ್ತದೆ. ಇವತ್ತು ನೀವು ಲೀಗಲ್ ಸೆಲ್ ಮಾಡಬೇಕೆಂದು ಹೇಳುತ್ತಿದ್ದೀರಿ. ಅದು ಒಳ್ಳೆಯ ಕ್ರಮ. ಇವತ್ತು ನಾರಿಮನ್ ಬಗ್ಗೆ ಯಾರೂ ಕೂಡಾ ಅವರ ಒಂದು ನ್ಯಾಯ ಶಕ್ತಿ ಬಗ್ಗೆ ಡಿಸ್‌ಪ್ಯೂಟ್ ಮಾಡುವುದಿಲ್ಲ. ಅವರ ಜೊತೆಗೆ ಪಂಡಿತರಾಗಿರತಕ್ಕವರನ್ನು ಹಾಕಿ, ಅಧಿಕಾರಿಗಳನ್ನು ಸೇರಿಸಿ. ೧೧ನೇ ತಾರೀಖು ಮತ್ತೆ ಪ್ರೆಸ್ ಮಾಡಬೇಕೆಂಬುದು ಸರ್ಕಾರಕ್ಕೆ ಗೊತ್ತಿರತಕ್ಕ ವಿಚಾರ. ಈ ಆಕ್ಟ್‌ನ ಪ್ರಾವಿಷನ್ ಅನ್ನು ನಾವು ಛಾಲೆಂಜ್ ಮಾಡುವುದಕ್ಕೆ ಸಾಧ್ಯವೇ ? ಹೆವ್ಯೂ ಪಿಟಿಷನ್ ಫೈನಲೈಸ್ ಮಾಡುವವರೆಗೆ ಕೇಂದ್ರ ಸರ್ಕಾರಕ್ಕೆ ಸುಪ್ರೀಮ್ ಕೋರ್ಟ್ ಈ ಟ್ರಿಬ್ಯುನಲ್‌ನ್ನು ಸ್ಟೇ ಮಾಡುವುದಕ್ಕೆ ಡೈರೆಕ್ಷನ್ ಕೊಡುವುದಕ್ಕೆ ಸಾಧ್ಯವೇ? ಇದನ್ನೆಲ್ಲಾ ಕೂಡಾ ಪ್ರೆಸ್ ಮಾಡಬೇಕೆಂದು ನಾನು ಹೇಳುತ್ತೇನೆ.

ಟ್ರಿಬ್ಯೂನಲ್‌ನವರು ಏನು ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಗೊತ್ತು ಮಾಡುತ್ತಾರೆ ಅದನ್ನು ಬೇರೆ ಬೇರೆ ಉದಾಹರಣೆಗಳ ಮೂಲಕ ನೋಡಿದರೆ ೨-೩ ವರ್ಷಗಳಾಗಿರುವುದೂ ಇದೆ. ಆದ್ದರಿಂದ ನಾವು ಈ ಟರ್ಮ್ಸ್ ಆಫ್ ರೆಫರೆನ್ಸ್‌ನ ಬಗ್ಗೆ ಆದಷ್ಟು ಡಿಲೇ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ಇಷ್ಟಕ್ಕೆ ನನ್ನ ಮಾತನ್ನು ನಿಲ್ಲಿಸಿ, ಇದುವರೆಗೆ ನಾನು ಏನು ಒಂದೆರಡು ಸಲಹೆಗಳನ್ನು ಕೊಟ್ಟಿದ್ದೇನೆ. ಅಂದರೆ ನಾವು ನ್ಯಾಯಾಲಯದಲ್ಲಿ ಹೋರಾಟ ಮಾಡತಕ್ಕದ್ದು, ಎರಡನೆಯದಾಗಿ ಟೆಕ್ನಿಕಲ್ ಸೆಲ್ ಸ್ಥಾಪಿಸುವುದು ಇನ್ನೂ ಮುಂತಾದದ್ದು ಇದರ ಕಡೆಗೆ ತಾವು ಗಮನ ಕೊಡಬೇಕು. ಈಗ ನಮಗೆ ಟೆಕ್ನಿಕಲ್ ಸೆಲ್‌ನ ಅಗತ್ಯತೆ ಬಹಳ ಇದೆ. ಬಜೆಟ್‌ನಲ್ಲಿ ನಾನ್ ಪ್ಲಾನ್ಡ್ ಎಕ್ಸ್‌ಪೆಂಡಿಚರ್‌ನಲ್ಲಿ ಈ ವರ್ಷ ೧೦೦೦ ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಇನ್ನು ೧೫೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಮಾನ್ಯ ನೀರಾವರಿ ಮಂತ್ರಿಗಳು ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ಏನಾದರೂ ಮಾಹಿತಿಯನ್ನು ಕೊಡುತ್ತಾರೆಂದು ನಾನು ನನ್ನ ಆಶಯವನ್ನು ವ್ಯಕ್ತಪಡಿಸುತ್ತೇನೆ. ಕೊಡತಕ್ಕ ಹಣವನ್ನು ಯಾವ ರೀತಿ ಖರ್ಚು ಮಾಡಬೇಕೆಂಬುದು ಇಲ್ಲಿ ಪ್ರಮುಖವಾಗಿ ಪ್ರಸ್ತಾಪಕ್ಕೆ ಬರುತ್ತದೆ. ಏಕೆಂದರೆ ನಮಗೆ ಉಳಿದಿರತಕ್ಕದ್ದು ಕೇವಲ ೩ ತಿಂಗಳು ಮಾತ್ರ. ಈ ೩ ತಿಂಗಳಲ್ಲಿ ನಾವು ಏನನ್ನೂ ಮಾಡುವುದಕ್ಕಾಗುವುದಿಲ್ಲ ಕಾರಣ ಮಳೆಗಾಲ. ಮಳೆಗಾಲ ಕಳೆದ ಮೇಲೆ ಅಕ್ಟೋಬರ್‌ನಿಂದ ಮಾರ್ಚಿ ತಿಂಗಳವರೆಗೆ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ನಮ್ಮಲ್ಲಿ ಸಾಕಷ್ಟು ಪ್ರಾಜೆಕ್ಟ್‌ಗಳಿವೆ, ಹೇಮಾವತಿಯಿಂದ ಹಿಡಿದು ಅರ್ಕಾವತಿವರೆಗೂ ಇವೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಇನ್ನು ೮-೧೦ ತಿಂಗಳಲ್ಲಿ ಪಿ.ಡಬ್ಲ್ಯೂ.ಡಿ. ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಫಾರ್ಮಾಲಿಟೀಸ್ ಏನಿವೆ ಆ ಫಾರ್ಮಾಲಿಟೀಸ್‌ನ್ನೆಲ್ಲಾ ಬದಿಗೊತ್ತಿ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಹಣವನ್ನು ಖರ್ಚು ಮಾಡಬಹುದೆಂದು ನನಗನ್ನಿಸುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಒಂದು ಟೆಕ್ನಿಕಲ್ ಸೆಲ್‌ನ್ನು ನೇಮಕ ಮಾಡುವುದು ಅತ್ಯಂತ ಸೂಕ್ತವಾಗಿದೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳೇ ಅಧ್ಯಕ್ಷರಾಗಿರಬೇಕು. ಈ ಸೆಲ್‌ನ್ನು ಸದನವೇ ರಚನೆ ಮಾಡಲಿ. ಬಾಳೇಕುಂದ್ರಿಯವರಂಥ ತಜ್ಞರನ್ನು ಈ ಅಡ್ವೈಸರಿ ಸಮಿತಿಯಲ್ಲಿ ಇಟ್ಟುಕೊಳ್ಳೋಣ. ಪ್ರತಿವಾರ ಅಥವಾ ೧೫ ದಿನಗಳಿಗೊಮ್ಮೆ ನಾವು ಮೀಟಿಂಗ್ ಸೇರೋಣ. ಆಂಧ್ರದಲ್ಲಿ ಜನಗಳಿಂದ ಹಣವನ್ನು ವಂತಿಗೆ ಮೂಲಕ ಎತ್ತಿ ನಾಗಾರ್ಜುನ ಸಾಗರವನ್ನು ಕೇವಲ ೨-೩ ವರ್ಷಗಳಲ್ಲಿ ಕಟ್ಟಿರುವ ನಿದರ್ಶನವಿರುವಾಗ ಅದೇರೀತಿಯ ಕೆಲಸವನ್ನು ನಾವು ಇಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲವೆ? ಇದುವರೆಗೆ ಮಾತನಾಡಿದ ಕೆಲವು ಮಿತ್ರಸದಸ್ಯರ ಧೋರಣೆ ನೋಡಿದರೆ ನನ್ನ ಮನಸ್ಸಿಗೆ ನೋವಾಗುತ್ತದೆ. ಕೇಂದ್ರಸರ್ಕಾರ ಹಾಗೆ ಮಾಡಿತು, ವಿ.ಪಿ. ಸಿಂಗರು ತಪ್ಪು ಮಾಡಿದ್ದಾರೆ, ಇನ್ನೂ ಮುಂತಾಗಿ ಹೇಳಿದ್ದಾರೆ. ಅದು ಸರಿಯಲ್ಲ. ನಾನು ತಮಗೆ ಹೇಳುತ್ತೇನೆ. ೧೯೮೮ ಸೆಪ್ಟೆಂಬರ್‌ನಲ್ಲಿ ಅಡಿಷನಲ್ ಸಾಲಿಸಿಟರ್ ಜನರಲ್ ಆಫ್ ಇಂಡಿಯಾರವರು ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಮೊಯ್ಲಿಯವರು ಇಲ್ಲಿ ಇನ್ನೂ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಅವರು ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡದೇ ಇದ್ದಿದ್ದರೆ ಈ ವಾದದ ಧಾಟಿಯೇ ಬೇರೆ ದಿಕ್ಕಿನಲ್ಲಿ ಹೋಗುತ್ತಿತ್ತು. ತಮಿಳ್ನಾಡಿನ ರಾಜ್ಯಪಾಲರು, ನಮ್ಮ ರಾಜ್ಯಪಾಲರು, ನಮ್ಮ ಮುಖ್ಯಮಂತ್ರಿಗಳಾಗಿದಂಥ ಮಾನ್ಯ ಬೊಮ್ಮಾಯಿಯವರು, ರಾಜ್ಯದ ನೀರಾವರಿ ಮಂತ್ರಿಗಳೂ ಮಾತುಕತೆ ಮಾಡಿದ್ದಾರೆ ಎಂದು. ತಾವು ತಮಿಳ್ನಾಡಿನಲ್ಲಿ ಪತ್ರಿಕಾ ಹೇಳಿಕೆಯನ್ನು ಏನು ಕೊಟ್ಟಿದ್ದೀರಿ ಅದು ಈ ಬಗ್ಗೆ ಮಾತುಕತೆ ಮುಗಿದುಬಿದ್ದಿತು ಎಂದು ಹೇಳಿಲ್ಲ. ತಮ್ಮ ವಾದಕ್ಕೆ ಇದು ಅನುಕೂಲವಾಗುತ್ತದೆಂಬ ಉದ್ದೇಶದಿಂದ ಇದನ್ನು ಉಪಯೋಗಿಸಿಕೊಂಡಿದ್ದೀರೇ ಹೊರತು ಇದರಲ್ಲಿ ಬೇರೆ ಏನೂ ತಿರುಳಿಲ್ಲ. ಮಾತುಕತೆ ಮುರಿದು ಬಿತ್ತು, ಫರ್ದರ್ ನೋ ಟಾಕ್ಸ್ ಎಂದು ಮಾನ್ಯ ರಾಜ್ಯಪಾಲರಾಗಲಿ, ತಮಿಳ್ನಾಡಿನ ರಾಜ್ಯಪಾಲರಾಗಲಿ, ಮಾನ್ಯ ಬೊಮ್ಮಾಯಿಯವರಾಗಲಿ ಯಾರೂ ಹೇಳಿಲ್ಲ. "The discussion took place in a very cordial atmosphere. On Both sides, earnest and sincere efforts..." ಒಟ್ಟಿನಲ್ಲಿ ಮಾತುಕತೆ ಸಂಪೂರ್ಣವಾಗಿ ಮುರಿದು ಬಿದ್ದಿದೆ ಎಂದು ಎಲ್ಲೂ ಅವರು ಹೇಳಿಲ್ಲ. ಆದರೆ ಆಗ ಅಡಿಷನಲ್ ಸಾಲಿಸಿಟರ್ ಜನರಲ್ ಆಫ್ ಇಂಡಿಯ ಅವರು ಈ ಮಾತನ್ನು ಏತಕ್ಕೆ ಹೇಳಿದರು? ಅದಾದ ಮೇಲೆ ೩ ತಿಂಗಳ ಟೈಂ ತೆಗೆದುಕೊಂಡರು, ಅನಂತರ ಸರ್ಕಾರ ಬದಲಾವಣೆ ಆಯಿತು ಎಂದು ಹೇಳುವುದು ಅದು ಬೇರೆ ಪ್ರಶ್ನೆಯಾಗುತ್ತದೆ. ನಾನಾದರೂ ಹೇಳುತ್ತೇನೆ, ದಯವಿಟ್ಟು ಇದರಲ್ಲಿ ಯಾವುದೇ ರಾಜಕೀಯವನ್ನೂ ಬೆರೆಸುವುದು ಬೇಡ. ನಾವೆಲ್ಲರೂ ತಪ್ಪನ್ನು ಮಾಡಿದ್ದೇವೆ. ಆ ತಪ್ಪಿನಲ್ಲಿ ನಾವೆಲ್ಲರೂ ಸಮಭಾಗಿಗಳಾಗಿದ್ದೇವೆ. ಕಾವೇರಿ ನದಿಯ ನೀರನ್ನು ನಮ್ಮ ರಾಜ್ಯದ ೧ ಕೋಟಿ ಜನರಿಗೆ ಕೊಡಲು ನಾವು ಹಣವನ್ನು ಎಲ್ಲಿಂದ ತರಬೇಕು? ಯಾವ ರೀತಿ ಖರ್ಚು ಮಾಡಬೇಕು? ಟ್ರಿಬ್ಯೂನಲ್‌ನಲ್ಲಿ ನಮ್ಮ ಪರವಾಗಿ ಜಡ್ಜ್‌ಮೆಂಟ್‌ನ್ನು ತೆಗೆದುಕೊಳ್ಳುವುದಕ್ಕೆ ನಾವು ಏನು ಪ್ರಯತ್ನ

ಮಾಡಬೇಕೆಂಬುದನ್ನು ಯೋಚನೆ ಮಾಡೋಣ. ಇಲ್ಲಿ ಒಂದು ಮಾತನ್ನು ಹೇಳುವುದಾದರೆ, ಮಹಾಜನ್ ವರದಿ ಬಂತು. ಈ ಮಹಾಜನ್ ವರದಿಗೂ ಟ್ರಿಬ್ಯುನಲ್‌ಗೂ ವ್ಯತ್ಯಾಸ ಇದೆ. ಇದು ಸ್ಟ್ಯಾಚುಟರಿ ಬಾಡಿ ಆಗಿರಲಿಲ್ಲ. ವರದಿಯನ್ನು ನಾವು ಕೇಳಲಿಲ್ಲ. ಇದನ್ನು ಕೇಳಿದವರು ಮಹಾರಾಷ್ಟ್ರ ಸರ್ಕಾರದವರು. ಈ ಮಹಾಜನ್ ವರದಿಯಿಂದ ನಮ್ಮ ಕರ್ನಾಟಕಕ್ಕೆ ಅನ್ಯಾಯವಾಗಿದೆಯೇ? ಈ ಟ್ರಿಬ್ಯುನಲ್‌ನ್ನು ಮಾಡುವುದರಿಂದ ಏನೋ ಅನ್ಯಾಯ ಆಗುತ್ತದೆಂಬ ಭಾವನೆಯಿಂದ ಹೋಗುವುದು ಅಗತ್ಯವಿಲ್ಲವೆಂದು ನಾನು ಹೇಳಿ ಮತ್ತೊಂದು ವಿಚಾರವನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೆ, ಇನ್ನು ೧-೨ ವರ್ಷಗಳಲ್ಲಿ ನಮ್ಮ ಕಾವೇರಿ ನೀರನ್ನು ನಾವು ಯಾವ ರೀತಿ ಉಪಯೋಗ ಮಾಡಿಕೊಳ್ಳಬಹುದು, ನಮ್ಮ ಭಾಗದ ಅಚ್ಚುಕಟ್ಟು ಪ್ರದೇಶವನ್ನು ಯಾವರೀತಿ ಹೆಚ್ಚು ಮಾಡಿಕೊಳ್ಳಬಹುದು ಎಂಬುದಕ್ಕೆ ನಾನು ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ.

ದಯವಿಟ್ಟು ಹೇಮಾವತಿಯಿಂದ ಹಿಡಿದು ಅರ್ಕಾವತಿವರೆಗೂ ಸಹಿತ ಎಲ್ಲೆಲ್ಲಿ ನಮ್ಮ ರೈತರು ಲಿಫ್ಟ್ ಇರಿಗೇಷನ್ ಸ್ಕೀಮ್ ಮಾಡುತ್ತಾರೆ ಅವರೆಲ್ಲರಿಗೂ ಪರ್ಮಿಷನ್ ಕೊಡಿ. ನ್ಯಾಷನಲೈಸ್ ಬ್ಯಾಂಕ್‌ನಿಂದ ಸಾಲ ಕೊಡಿಸಿ. ರೈತರು ಎಲೆಕ್ಟ್ರಿಸಿಟಿ ಬೇಕೆಂದರೆ ಅವರಿಗೆ ಎಲೆಕ್ಟ್ರಿಸಿಟಿಯನ್ನು ಒದಗಿಸಲು ತಡವಾಗುತ್ತಿದೆ. ಸಾಲ ತರಲಿಕ್ಕೆ ರೈತರಿಗೆ ಸಾಧ್ಯವಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಅದಕ್ಕಾಗಿ ನಾಲ್ಕುಜನ ಡೆಪ್ಯುಟಿ ಕಮಿಷನರ್ ಮಟ್ಟದಲ್ಲಿ ಅಧಿಕಾರಿಗಳನ್ನು ತಾವು ನೇಮಕ ಮಾಡಿ. ಎಲ್ಲೆಲ್ಲಿ ಕಾವೇರಿ ನದಿ ನೀರು ಹರಿದು ಹೋಗುತ್ತದೆ ಅಲ್ಲೆಲ್ಲ ಲಿಫ್ಟ್ ಇರಿಗೇಷನ್ ಸ್ಕೀಮ್ ಮಾಡಲಿಕ್ಕೆ ಅವಕಾಶವನ್ನು ಮಾಡಿದರೆ ನನಗನಿಸುತ್ತದೆ ಒಂದೇ ಒಂದು ವರ್ಷದಲ್ಲಿ ಇನ್ನೂ ೨-೩ ಲಕ್ಷ ಎಕರೆ ಜಮೀನನ್ನು ನೀರಾವರಿ ಅಚ್ಚುಕಟ್ಟು ಪ್ರದೇಶವನ್ನಾಗಿ ಮಾಡಬಹುದು. ಇದು ಬಹಳ ಮಟ್ಟಿಗೆ ಸಾಧ್ಯವಾಗುತ್ತದೆ. ಇದು ಪ್ರಾಕ್ಟಿಕಲ್ ಆಗಿ ಮಾಡತಕ್ಕಂಥ ಒಂದು ಕೆಲಸ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಈಗ ಕೃಷ್ಣಾ ನೀರಿನ ಬಗ್ಗೆಯೂ ಸಹಿತ ಇದೇ ರೀತಿಯಾದ ವಾದ ಇನ್ನು ೫-೬ ವರ್ಷಗಳಲ್ಲಿಯೇ ಬರುತ್ತದೆ. ಇದೇ ಪರಿಸ್ಥಿತಿಯನ್ನು ನಾವು ಫೇಸ್ ಮಾಡಬೇಕಾಗುತ್ತದೆ. ಕಳೆದ ವಿಧಾನಸಭೆಯಲ್ಲಿ ನಮ್ಮ ಹಿರಿಯರಾದಂಥ ಮಾನ್ಯ ಜಾಲಪ್ಪನವರು ಸಚಿವ ಸಂಪುಟದ ಮುಂದೆ ಮತ್ತು ಈ ಸದನದಲ್ಲಿ ಇದೇ ಮಾತನ್ನು ಹೇಳಿದ್ದರು. ಲಿಫ್ಟ್ ಇರಿಗೇಷನ್ ಸ್ಕೀಮು ಎಷ್ಟು ಮಾಡಲು ಸಾಧ್ಯವೋ ಅಷ್ಟು ಮಾಡಲು ಎನ್‌ಕರೇಜ್‌ಮೆಂಟ್ ಕೊಟ್ಟಲ್ಲಿ ಕೃಷ್ಣಾ ಬೇಸಿನ್‌ನಲ್ಲಿಯೂ ಕೂಡ ಅಷ್ಟೇ ಹೆಚ್ಚು ಅಚ್ಚುಕಟ್ಟು ಜಮೀನನ್ನು ನೀರಾವರಿಗೆ ಒಳಪಡಿಸಬಹುದು. ಅಷ್ಟು ಮಾಡೋಣ ಎನ್ನುವ ಮಾತನ್ನು ಹೇಳಿ ಅದನ್ನು ಸಹಿತ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಕಾವೇರಿ ವಿಚಾರ ಏನು ಇದೆ, ಈ ಬಗ್ಗೆ ಕೇಂದ್ರದ ಒಂದು ಸದನದ ಸಮಿತಿಗೆ ತಾವು ಆಗ್ರಹ ಪಡಿಸುತ್ತಿದ್ದೀರಿ. ಇದು ಕೇವಲ ಒಂದು ಔಪಚಾರಿಕ ಸಮಿತಿಯಾಗಿದೆ, ಇದು ಒಂದು ಹೈ ಪವರ್ ಕಮಿಟಿಯಾಗಿದ್ದು, ಹದಿನೈದು ದಿವಸಗಳಿಗೆ ಒಮ್ಮೆ ಸೇರಿ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ. ಎಲ್ಲಿಂದ ಹಣವನ್ನು ತರಬೇಕು. ಯಾವ ರೀತಿ ಖರ್ಚು ಮಾಡಬೇಕು. ಮತ್ತೆ ಟ್ರಿಬ್ಯುನಲ್‌ನಲ್ಲಿ ಯಾವರೀತಿ ನಮ್ಮ ಟರ್ಮ್ಸ್ ಅಂಡ್ ರೆಫರೆನ್ಸ್‌ಸ್ ಬಗ್ಗೆ, ಹೋರಾಟ ಮಾಡಬೇಕು ಎನ್ನುವ ಬಗ್ಗೆಯೂ ಕೂಡ ಪ್ರಯತ್ನ ಮಾಡಬೇಕು. ಅದಕ್ಕೆ ರಾಜಕೀಯವನ್ನು ಬೆರೆಸುವುದು ಬೇಡ. ಕೇಂದ್ರ ಸರ್ಕಾರವನ್ನು ಏನು ದೋಷಣೆ ಮಾಡುವುದಕ್ಕೆ ಹೊರಟಿದ್ದೀರಿ ಅದನ್ನು ನಿಲ್ಲಿಸಿದರೆ ನಿಮಗೆ ಹೆಚ್ಚಿನ ಉಪಯೋಗವಾಗುತ್ತದೆ ಎನ್ನುವುದನ್ನು ಇನ್ನು ಮುಂದಾದರೂ ನಂಬಿ ಎಂದು ಹೇಳಿ ಇಷ್ಟು ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕಂಥ ರೈತರ ಕಷ್ಟವನ್ನು ಅರಿತು ಸನ್ಮಾನ್ಯ ಮುಖ್ಯ ಮಂತ್ರಿಗಳು ನ್ಯಾಯ ಮಂಡಲಿಯಲ್ಲಿ ಆಗಿರತಕ್ಕಂಥ ಅನ್ಯಾಯವನ್ನು ತಪ್ಪಿಸುವುದಕ್ಕೋಸ್ಕರ ಈ ಒಂದು ಶಾಸನಸಭೆಯಲ್ಲಿ ಪ್ರಪ್ರಥಮವಾಗಿ ಈ ವಿಷಯವನ್ನು ಚರ್ಚೆಗೆ ತಂದಿದ್ದಾರೆ. ಚರ್ಚೆಗೆ ತಂದಂಥ ವೇಳೆಯಲ್ಲಿ ಎರಡು ಕಡೆಯ ಎಲ್ಲ ಮಾನ್ಯ ಸದಸ್ಯರು ಸಹಿತ ಅದಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಇದಕ್ಕೆ ರಾಜಕೀಯವನ್ನು ಬೆರೆಸುವುದು ಬೇಡ. ಕನ್ನಡನಾಡಿನ ರೈತರ ಬೆಳವಣಿಗೆಗೋಸ್ಕರ ಕಾವೇರಿ ಜಲಾನಯನದಲ್ಲಿ ಬರತಕ್ಕಂಥ ನೀರನ್ನೆಲ್ಲ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ಮತ್ತು ಮುಖ್ಯವಾಗಿ ಸುಪ್ರೀಮ್ ಕೋರ್ಟಿನಲ್ಲಿ ಆದೇಶವಾಗಿರತಕ್ಕಂಥ ಈ ಟ್ರಿಬ್ಯುನಲ್ ತೊಂದರೆಯನ್ನು ನಿವಾರಣೆ

ಮಾಡುವುದಕ್ಕೆ ಯಾವ ಉಪಾಯವನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಇಲ್ಲಿ ಚರ್ಚೆ ಮಾಡಲು ಎಲ್ಲರನ್ನು ಕರೆದಿರತಕ್ಕಂಥದ್ದು ಅತ್ಯಂತ ಶ್ಲಾಘನೀಯವಾದುದಾಗಿದೆ.

ಸನ್ಮಾನ್ಯ ಅಧ್ಯಕ್ಷಿಣೀಯವರೇ, ತಮಗೆ ಗೊತ್ತಿರುವಹಾಗೆ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯವನ್ನು ತೆಗೆದುಕೊಂಡಾಗ ತಮಿಳುನಾಡಿನಲ್ಲಿ ಈಗಾಗಲೇ ೬೦ ಪರ್ಸೆಂಟ್ ಇರಿಗೇಷನ್ ಆಗಿದೆ. ಆಂಧ್ರದಲ್ಲಿ ಇವತ್ತು ೪೬ ಪರ್ಸೆಂಟ್ ಇರಿಗೇಷನ್ ಆಗಿದೆ. ಇದನ್ನು ನಮ್ಮ ರಾಜ್ಯಕ್ಕೆ ಹೋಲಿಸಿದಾಗ ನಮ್ಮ ಕರ್ನಾಟಕದಲ್ಲಿ ೧೫ ರಿಂದ ೨೦ ಪರ್ಸೆಂಟ್‌ವರೆಗೆ ಮಾತ್ರ ಇರಬಹುದು. ಮುಖ್ಯವಾಗಿ ತಮಗೆ ಗೊತ್ತಿರುವಹಾಗೆ ೧೯೫೦ನೇ ಇಸವಿಯಲ್ಲಿ ಆದಂಥ ಒಪ್ಪಂದಗಳನ್ನು ನಾವು ನೋಡುತ್ತಾ ಹೋದರೆ ಈಗ ಮಳೆಯ ಪ್ರಮಾಣ ಬಹಳ ಮುಖ್ಯವಾಗಿರತಕ್ಕಂಥದ್ದಾಗಿದೆ. ತಮಿಳುನಾಡನ್ನು ತೆಗೆದುಕೊಂಡರೆ, ಆಂಧ್ರ ಪ್ರದೇಶವನ್ನು ತೆಗೆದುಕೊಂಡರೆ, ಮತ್ತು ಕರ್ನಾಟಕವನ್ನು ತೆಗೆದುಕೊಂಡರೆ ಮಳೆಯ ಪ್ರಮಾಣ ಬಹಳ ಕಡಿಮೆಯಾಗಿ ಇವತ್ತು ನಮ್ಮಲ್ಲಿ ಅಂತರ್‌ಜಲ ಸಿಕ್ಕದಿರುವುದರಿಂದ ರೈತರು ನಿರಾಶಾದಾಯಕರಾಗಿರುವುದನ್ನು ಕಾಣುತ್ತಿದ್ದೇವೆ. ಅದರಲ್ಲೂ ಹೇಮಾವತಿ ಜಲಾಶಯದ ಪ್ರದೇಶದಲ್ಲಿ ಬರತಕ್ಕಂಥ ತುಮಕೂರು ಜಿಲ್ಲೆ ಮತ್ತು ಕೆಲವು ಭಾಗಗಳಲ್ಲಿ ಆಗಿರತಕ್ಕಂಥ ತೊಂದರೆಯನ್ನು ನಾವು ನೋಡಿದಾಗ ಇವತ್ತು ರೈತರಿಗೆ ಎಷ್ಟರಮಟ್ಟಿಗೆ ತೊಂದರೆಯಾಗಿವೆ ಎನ್ನುವುದನ್ನು ನಾವು ನೋಡಬಹುದು. ಇವತ್ತಿನ ದಿವಸ ಕೇಂದ್ರ ಸರ್ಕಾರ ನಮ್ಮ ಸಹಾಯಕ್ಕೆ ಮುಂದೆ ಬರಬೇಕಾಗಿದೆ ನ್ಯಾಯ ಮಂಡಳಿ ರಚನೆ ಮಾಡುವುದರಿಂದ ನ್ಯಾಯ ಸಿಗುತ್ತದೆಂಬ ಭರವಸೆ ಇಲ್ಲ. ಸಿಂಧ್ಯರವರು ಹೇಳಿದರು. ಏನೆಂದರೆ, ಸುಪ್ರೀಂ ಕೋರ್ಟಿನವರು ಟರ್ಮ್ಸ್ ಆಫ್ ರೆಫರೆನ್ಸ್ ಮತ್ತು ಗೈಡ್‌ಲೈನ್ಸ್ ಅನ್ನು ಟ್ರಿಬ್ಯುನಲ್‌ಗೆ ಕೊಡದೆ ಇರುವುದರಿಂದ ನಮಗೆ ಸಂಶಯ ಬಂದಿದೆ ಎಂದು ಇವತ್ತು ಪಂಚಾಯಿತಿಯಿಂದ ಯಾವ ರೀತಿ ನ್ಯಾಯ ದೊರಕುತ್ತದೆ ಎಂಬ ವಿಚಾರವನ್ನು ನಾವು ನೋಡಬೇಕಾಗಿದೆ ಸರ್ಕಾರ ಈ ಹಿಂದೆಯೇ ಮನಸ್ಸು ಮಾಡಿದ್ದರೆ ಇನ್ನೂ ೬೦ ಸಾವಿರ ಎಕರೆ ಜಮೀನನ್ನು ನೀರಾವರಿ ಮಾಡಬಹುದಾಗಿತ್ತು. ಆದರೆ ಮಾಡಲಿಲ್ಲ ಇವತ್ತಿನ ದಿವಸ ನಮ್ಮ ಸರ್ಕಾರ ೨೬೦ ಕೋಟಿ ರೂಪಾಯಿಗಳನ್ನು ಕಾವೇರಿ ಜಲಾಶಯಕ್ಕೆ ಕೊಟ್ಟು ಕೆಲಸ ಮಾಡಬೇಕೆಂದು ಹೊರಟಿದೆ. ಅಷ್ಟೇ ಅಲ್ಲ, ಹೇಮಾವತಿ ಕೆಲಸ ಕೂಡ ಪ್ರಾರಂಭವಾಗಿ ಕಾಲುವೆ ಕೆಲಸ ನಡೆಯುತ್ತಿದೆ. ಕಾವೇರಿಯಿಂದ ಏನಾದರೂ ಅನ್ಯಾಯವಾದರೆ ಕೋಟ್ಯಾಂತರ ರೂಪಾಯಿಗಳನ್ನು ಕರ್ನಾಟಕ ಸರ್ಕಾರ ರಾಜ್ಯದ ರೈತರಿಗೆ ಏನು ಖರ್ಚು ಮಾಡುತ್ತಿದೆ ಅದಕ್ಕೆ ಕೊಡಲಿ ಪೆಟ್ಟು ಬೀಳುತ್ತದೆ, ನಮ್ಮ ಹಿರಿಯ ಸದಸ್ಯರು ಹೇಳಿದ ಹಾಗೆ ಕಾವೇರಿ ನದಿ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳತಕ್ಕ ಹಕ್ಕು ನಮಗೆ ಇದೆ, ನಮ್ಮ ರಾಜ್ಯದಲ್ಲಿ ಹುಟ್ಟುವ ನದಿಯ ನೀರನ್ನು ಉಪಯೋಗಿಸಿ ಉಳಿದದ್ದನ್ನು ಬಿಡಬಹುದು. ಇಷ್ಟೇ ಬಿಡಬೇಕೆಂಬ ಬಗ್ಗೆ ಯಾವ ಷರತ್ತೂ ಆಗಿಲ್ಲ, ಕೃಷ್ಣ ಬೇಸಿನ್‌ನಲ್ಲಿ ಯಾವ ರೀತಿ ಆಗಿತ್ತು ಆ ರೀತಿ ಅಗ್ರಿಮೆಂಟ್ ಆಗಿಲ್ಲ. ಆ ದಿಸೆಯಲ್ಲಿ ಕರ್ನಾಟಕದ ಜನತೆ ಏನು ನಮ್ಮನ್ನು ನಂಬಿದ್ದಾರೆ, ಆ ದೃಷ್ಟಿಯಿಂದ ದಿಟ್ಟ ಹೆಜ್ಜೆಯನ್ನು, ಸದೃಢವಾದ ನಿಲುವನ್ನು ಸರ್ಕಾರ ತಾಳಬೇಕಾಗುತ್ತದೆ. ಅದೂ ಅಲ್ಲದೆ ರಾಜಕೀಯವಾಗಿ ಅವರನ್ನು ಇವರನ್ನು ನೋಡಿ ಮಧ್ಯದಲ್ಲಿ ತೀರ್ಮಾನ ಮಾಡಬೇಕೆಂದು ಹೊರಟಾಗ ರಾಜ್ಯದ ರೈತರಿಗೆ ಅತ್ಯಂತ ಕಷ್ಟ ಬರುತ್ತದೆಂದು ಹೊಸದಾಗಿ ಹೇಳಬೇಕಾಗಿಲ್ಲ, ಈ ದೃಷ್ಟಿಯಿಂದ ಕಾವೇರಿ ನೀರನ್ನು ತಡೆಗಟ್ಟಿ ಕಬಿನಿ, ವಾಟೆಹೊಳೆ ಮುಂತಾದ ಯೋಜನೆಗಳೇನಿವೆ ಆ ಎಲ್ಲಾ ಯೋಜನೆಗಳನ್ನು ಪರಿಪೂರ್ಣವಾಗಿ ಮುಗಿಸಿದರೆ ನೀರಿನ ಹಕ್ಕು ಸಂಪೂರ್ಣವಾಗಿ ನಮಗೆ ಸಿಗುತ್ತದೆ. ಈ ಬಾಬಿಗೆ ಸರ್ಕಾರ ಹಣ ಒದಗಿಸಿದರೆ ನಮ್ಮ ಯೋಜನೆಗಳು ಪೂರ್ಣವಾಗುತ್ತವೆ. ನಮಗೆ ನೀರು ಸಾಕಷ್ಟು ಸಿಗುತ್ತದೆ. ಈಗ ಸಲೀಸಾಗಿ ನೀರು ಹೋಗುವುದರಿಂದ ತಮಿಳ್ನಾಡಿನವರು ಕೇಳುತ್ತಾರೆ, ನಮ್ಮಲ್ಲಿ ಬೇಕಾದಷ್ಟು ಮಳೆಯಾಗುವುದರಿಂದ ಡ್ಯಾಂಗಳು ತುಂಬುತ್ತವೆ. ನಮ್ಮಲ್ಲಿ ಮಳೆ ಕಡಿಮೆಯಾದಾಗಲೂ ಉದಾರವಾಗಿ ನೀರನ್ನು ಕೊಡುತ್ತೇವೆಂಬ ನೀತಿ ನಮ್ಮದಾಗಬಾರದು. ಇವತ್ತಿನ ದಿವಸ ಒಂದು ಟಿ. ಎಂ. ಸಿ. ನೀರನ್ನು ಉಪಯೋಗಿಸಿದರೆ ತಮಿಳ್ನಾಡಿನಲ್ಲಿ ಎರಡೂವರೆ ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಅದೇ ಒಂದು ಟಿ. ಎಂ. ಸಿ. ನೀರನ್ನು ಕೊಟ್ಟರೆ ನಮ್ಮಲ್ಲಿ ೧೨೦೦ ಎಕರೆಗೆ ಹಾನಿಯಾಗುತ್ತದೆ. ಈ ದೃಷ್ಟಿಯಿಂದ ಎಲ್ಲವನ್ನು ಕ್ರೋಢೀಕರಿಸಿ ಎಲ್ಲರೂ ಒಗ್ಗಟ್ಟಿನಿಂದ ಕಾವೇರಿ ನೀರನ್ನು ಸಂಪೂರ್ಣವಾಗಿ ಕರ್ನಾಟಕಕ್ಕೆ ಒದಗಿಸಿಕೊಳ್ಳತಕ್ಕ ಉಪಾಯವನ್ನು ಹುಡುಕಬೇಕೆಂದು ಹೇಳುತ್ತೇನೆ, ಇವತ್ತು ಈ ಸದನ ಸೇರಿ ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಎಲ್ಲರೂ ಯಾವುದೇ ಸಂಘರ್ಷಕ್ಕೆ ಒಳಗಾಗದೆ ಒಮ್ಮತಕ್ಕೆ ಬಂದದ್ದು ನನಗೆ ತುಂಬಾ ಸಂತೋಷವಾಗಿದೆ. ನಾವೆಲ್ಲರೂ ಕರ್ನಾಟಕದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಒಗ್ಗಟ್ಟಾಗಿ ನಿರ್ಣಯ, ಕೇಂದ್ರದ ನಾಯಕರಿಗೆ ಮತ್ತು ಪಂಚಾಯಿತಿ ಮಂಡಲಿಗೆ ನಮ್ಮ

ಸಲಹೆಗಳನ್ನು ಕೊಡೋಣವೆಂದು ಹೇಳಿರುವುದು ಕೂಡ ನನಗೆ ಸಂತೋಷವನ್ನುಂಟು ಮಾಡಿದೆ, ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುವುದರಿಂದ ಕಾವೇರಿ ನೀರನ್ನು ತಮಿಳ್ನಾಡಿಗೆ ಕೊಡುವ ಬಗ್ಗೆ ನ್ಯಾಯ ಪಂಚಾಯಿತಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಸಲಹೆ ಕೊಡಲು ಸದನದ ಸಮಿತಿಯನ್ನು ಮಾಡತಕ್ಕದ್ದೆಂದು ಹೇಳಿರುವುದನ್ನು ಸ್ವಾಗತಿಸುತ್ತಾ, ಸಭಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಈಗಾಗಲೇ ಬಹಳ ವಿಚಾರಗಳು ಚರ್ಚೆಯಾಗಿವೆ. ಆ ಕಾರಣ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಮಾತಿನ ನಡುವೆ ಹೋರಾಟ, ನ್ಯಾಯ ಮಂಡಲಿಗೆ ಬಹಿಷ್ಕಾರ ಎಂಬ ಮಾತುಗಳು ಬಂದವು. ಹೋರಾಟ ಮಾಡಬೇಕು. ಹೋರಾಟಕ್ಕೆ ನಾವು ಸಿದ್ಧತೆ ನಡೆಸಿದ್ದೇವೆ. ಆದರೆ ಯಾವಾಗ ಹೋರಾಟ? ಅನ್ಯಾಯವಾದಾಗ ಹೋರಾಟ ಮಾಡಬೇಕು. ನಮ್ಮ ದೃಷ್ಟಿಯಲ್ಲಿ ಇನ್ನೂ ಏನು ಅನ್ಯಾಯವಾಗಿಲ್ಲ. ಆ ನ್ಯಾಯ ಮಂಡಲಿ ರಚನೆ ಆದಕೂಡಲೇ ಅನ್ಯಾಯವಾಗಿದೆ ಎಂದು ಯಾರೂ ತಿಳಿಯಬೇಕಾಗಿಲ್ಲ. ಆ ಕಾರಣದಿಂದ ಹೋರಾಟದ ಮಾತನ್ನು ಸ್ವಲ್ಪ ಮುಂದಕ್ಕೆ ಹಾಕಿ ಈಗ ನಾವು ಏನು ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡಬೇಕು. ನ್ಯಾಯ ಮಂಡಲಿಯನ್ನು ಬಹಿಷ್ಕಾರ ಮಾಡುವುದರಿಂದ ಎಷ್ಟು ಅನುಕೂಲ ಇದೆ ಅಥವಾ ಎಷ್ಟು ಅನಾನುಕೂಲ ಇದೆ ಎಂಬುದನ್ನು ನಾವು ಸ್ವಲ್ಪ ಆಲೋಚನೆ ಮಾಡಬೇಕು. ಇದು ಇಡೀ ಪ್ರಪಂಚದ ಅನುಭವ.
ಯಾವುದೇ ದೇಶದಲ್ಲಿ ನ್ಯಾಯ ಮಂಡಲಿಯಿಂದ ಸಮರ್ಪಕವಾಗಿ ಜಲವಿವಾದ ಬಗೆಹರಿದಿಲ್ಲ. ಇದು ಅಂತರ್ ರಾಷ್ಟ್ರೀಯ ತಜ್ಞರ ಅಭಿಪ್ರಾಯ ಕೂಡ, ನಮ್ಮ ಅನುಭವ ಕೂಡ. ಆ ಕಾರಣ ನಾವು ನ್ಯಾಯಮಂಡಲಿಯನ್ನು ಬಹಿಷ್ಕರಿಸುವುದು ಅತ್ಯಂತ ಅಪಾಯಕಾರಿ. ನಾವು ಬಹಿಷ್ಕರಿಸಬಾರದು. ಇದಕ್ಕೆ ಕಾರಣ ಇಷ್ಟೆ. ನೀರಾವರಿ ವಿಷಯ ಬಹಳ ಸಂಕೀರ್ಣವಾದ ವಿಷಯವಾದುದರಿಂದ ಕೇವಲ ಕಾನೂನು ಪಂಡಿತರ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವಿಲ್ಲ. ಜೊತೆಗೆ ಈ ಒಂದು ಸಮಸ್ಯೆಗೆ ಸಂಬಂಧಪಟ್ಟ ಹಾಗೆ ತಾಂತ್ರಿಕ ಮಾಹಿತಿಗಳ ಅಭಾವವಿರುವುದರಿಂದ ನಾವು ನ್ಯಾಯ ಮಂಡಲಿಯನ್ನು ಬಹಿಷ್ಕರಿಸುವ ಮೂಲಕ ಆ ನ್ಯಾಯ ಮಂಡಲಿಗೆ ನಾವು ಏನು ಮಾಹಿತಿಗಳನ್ನು ಕರ್ನಾಟಕದ ಪರವಾಗಿ ಒದಗಿಸಬೇಕೋ ಆ ಅವಕಾಶವನ್ನು ನಾವು ಕಳೆದುಕೊಳ್ಳುತ್ತೇವೆ. ನಾವು ಬಹಿಷ್ಕರಿಸಿದರೂ ನ್ಯಾಯ ಮಂಡಲಿ ಕೆಲಸ ಮಾಡುತ್ತದೆ, ನಾವು ಬಹಿಷ್ಕರಿಸದೇ ಇದ್ದರೂ ನ್ಯಾಯ ಮಂಡಲಿ ಕೆಲಸ ಮಾಡುತ್ತದೆ. ಆ ಕಾರಣ ನಾವು ನ್ಯಾಯಮಂಡಲಿಗೆ ವೈಚಾರಿಕ ತಳಹದಿಯನ್ನು ಒದಗಿಸಿ ಕೊಡಬೇಕು. As it is, this Tribunal does not know the ground on which it should walk. ಯಾವ ನೆಲದ ಮೇಲೆ ನಡೆಯಬೇಕು ಎಂಬುದು ನ್ಯಾಯ ಮಂಡಲಿಗೆ ಇನ್ನೂ ಗೊತ್ತಿಲ್ಲ, ಅದು ನೆಲವನ್ನು ಇನ್ನೂ ಗುರುತಿಸಿಕೊಂಡಿಲ್ಲ, We should try to provide a basis on which this Tribunal should start functioning. ಆ ಕೆಲಸವನ್ನು ನಾವು ಮಾಡಬೇಕಾಗಿದೆ. ಆ ಕಾರಣ ನಾನು ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಮಾಡುವುದು ಟ್ರಿಬ್ಯುನಲ್ ಕೆಲಸ ಪ್ರಾರಂಭ ಮಾಡುವುದಕ್ಕೆ ಇನ್ನೂ ಎರಡು ಮೂರು ವರ್ಷಗಳಾದರೂ ಬೇಕು. ಏಕೆಂದರೆ ಟರ್ಮ್ಸ್ ಆಫ್ ರೆಫರೆನ್ಸ್ ತೀರ್ಮಾನವಾಗುವುದಕ್ಕೆ ಅಷ್ಟು ಕಾಲ ಆಗುತ್ತದೆ. ಈ ನಡುವೆ ಮಾನ್ಯ ಮುಖ್ಯಮಂತ್ರಿಗಳು ಮಾತುಕತೆಗೆ ಒತ್ತಾಯ ಮಾಡಿದ್ದಾರೆ. ಅದರ ಜೊತೆಗೆ ಮತ್ತೊಂದು ಒತ್ತಾಯ ಮಾಡಬೇಕು. ಏನೆಂದರೆ, ಕೇಂದ್ರ ಸರ್ಕಾರ ಈ ಕಾಲಾವಧಿಯಲ್ಲಿ ಒಂದುರಾಷ್ಟ್ರೀಯ ಜಲನೀತಿಯನ್ನು ರೂಪಿಸಬೇಕು ಎಂದು, The Union Government should formulate a National Water Policy which should become the basis for this Tribunal to start functioning. ಅದಿಲ್ಲದೆ ಮಾಡಿದರೆ ಏನೇ ತೀರ್ಪು ಕೊಟ್ಟರೂ ಅದು ದೋಷಪೂರಿತವಾಗುತ್ತದೆ. ಅದು ದೋಷಪೂರಿತವಾಗದೇ ಇರುವ ರೀತಿ ನೋಡಿಕೊಳ್ಳಬೇಕಾಗಿದೆ. ಆ ರೀತಿ ನೋಡಿ ಕೊಳ್ಳಬೇಕಾದರೆ ನಾವು ನ್ಯಾಯ ಮಂಡಲಿ ಜೊತೆಕೆಲಸ ಮಾಡಲೇಬೇಕು, ಮತ್ತೆ ಕೆಲವರ ಮನಸ್ಸಿನಲ್ಲಿ ನ್ಯಾಯ ಮಂಡಲಿ ತೀರ್ಪು ಕೊಟ್ಟ ಕೂಡಲೇ ಅದು ಬಂಧನಕಾರಿಯಾಗಿರುತ್ತದೆ ಎಂಬ ಅನುಮಾನ ಇದೆ. ಹಾಗೇನೂ ಇಲ್ಲ. ಸಂವಿಧಾನದ ೨೬೨ನೇ ನಿಯಮದ ೨ನೇ ಪ್ಯಾರಾ ಪ್ರಕಾರ ನ್ಯಾಯ ಮಂಡಲಿ ತೀರ್ಪು ಸುಪ್ರೀಂ ಕೋರ್ಟ್ ಕಾನೂನು ವ್ಯಾಪ್ತಿಯಿಂದ ಹೊರಗಡೆ ವಿವಾದ ಹೋಗುವುದಿಲ್ಲ Only a water dispute is not subject to the Appellate jurisdittion of the SupremeCourt but- not the award of the Tribunal, which has been constituted to decide upon the water dispute. Even an

award given by a tribunal is justiciable inspite of the fact that there is a non-justicability clause under the Inter-state water Disputes Act ಆ ಕಾರಣ ನಾವೇನೂ ಭಯಪಡಬೇಕಾಗಿಲ್ಲ. ನಮಗೆ ಅನ್ಯಾಯವಾಗುವ ಕಾಲ ಇನ್ನೂ ಮುಂದಿದೆ. ಅದು ಇನ್ನೂ ೮-೧೦ ವರ್ಷಗಳಾಗಬಹುದು. ಈ ನಡುವೆ ಸರ್ಕಾರ ಮಾಡಬೇಕಾಗಿರುವ ಕೆಲಸಗಳು ಎಷ್ಟೋ ಇವೆ. ಹಣ ಹೆಚ್ಚಿಗೆ ಕೊಟ್ಟಿದ್ದೇವೆಂದು ನೀರಾವರಿ ಮಂತ್ರಿಗಳು, ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ಆ ಕಡೆ ಈ ಕಡೆ ಸಾಂಪ್ರದಾಯಿಕವಾಗಿ ಹಣ ಸೋರಿ ಹೋಗುವುದನ್ನು ತಪ್ಪಿಸಿ ಅದು ಆಗದೇ ಇರುವ ರೀತಿ ನೋಡಿಕೊಂಡು ಪೂರ್ಣವಾಗಿ ಕೆಲಸ ಆಗುವುದನ್ನು ಖಾತ್ರಿ ಮಾಡಿಕೊಟ್ಟರೆ ನೀವು ಕರ್ನಾಟಕಕ್ಕೆ ದೊಡ್ಡ ಸೇವೆ ಮಾಡಿದಂತಾಗುತ್ತದೆ. ಅದರ ಬಗ್ಗೆ ಹೆಚ್ಚಿಗೆ ಗಮನ ಕೊಡಬೇಕಾಗಿದೆಯೇ ಹೊರತು ಅವರು ಎಷ್ಟು ಮಾಡಿದರು ಇವರು ಎಷ್ಟು ಮಾಡಿದರು ಎನ್ನುವ ರಾಜಕೀಯ ಭಾಷಣಗಳನ್ನು ಕೇಳಿ ಕೇಳಿ ಕಾವೇರಮ್ಮನಿಗೇ ಸುಸ್ತಾಗಿರಬೇಕು. ಈಗ ನನಗೆ ಅನುಮಾನ ಇದೆ, ಕಾವೇರಮ್ಮ ಶ್ರೀರಂಗಪಟ್ಟಣದಲ್ಲಿಯೇ ಇದ್ದಾಳೋ ಅಥವಾ ಬಂಗಾಳಕೊಲ್ಲಿಗೆ ಹೋಗಿದ್ದಾಳೋ ಎಂದು. ಎರಡೂ ಕಡೆಯವರಿಗೆ ನಾನು ಮಾಡಿಕೊಳ್ಳುವ ವಿನಂತಿ ಎಂದರೆ, ಈ ಸದನವನ್ನು ವಾದ ವಿವಾದಗಳಿಗೆ ಒಂದು ವೇದಿಕೆ ಮಾಡಿಕೊಳ್ಳಬಾರದು. ಹೊರಗಡೆ ಬೇಕಾದಷ್ಟು ವೇದಿಕೆಗಳು ಇವೆ. ಹೊರಗಡೆಯ ವೇದಿಕೆಗಳನ್ನು ಈ ಕೆಲಸಕ್ಕೆ ಉಪಯೋಗಿಸೋಣ. ಈ ಸದನದ ಕಾಲವನ್ನು ನಾವು ಸರಿಯಾಗಿ ಉಪಯೋಗ ಮಾಡೋಣ. ನಮಸ್ಕಾರ.

ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ) —ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಕಾವೇರಿ ಜಲ ವಿವಾದದ ಬಗ್ಗೆ ಎಲ್ಲ ಹಿರಿಯ ಮಾನ್ಯ ಸದಸ್ಯರು ಸುದೀರ್ಘವಾದ ಚರ್ಚೆಯನ್ನು ನಡೆಸಿದ್ದಾರೆ. ಹಾಗೂ ತಮ್ಮ ಅನುಭವಗಳನ್ನು ಹೇಳಿದ್ದಾರೆ. ನಾವಾದರೂ ಇವತ್ತು ಒಂದು ಕ್ಲಿಷ್ಟ ಸ್ಥಿತಿಯಲ್ಲಿ ಇದ್ದೇವೆ. ಕರ್ನಾಟಕ ರಾಜ್ಯದ ಜನತೆಯ ಅಭಿಲಾಷೆ, ಆಕಾಂಕ್ಷೆಯನ್ನು ನಾವು ಈಡೇರಿಸಬೇಕಾಗಿದೆ. ಕಾವೇರಿ ಜಲ ವಿವಾದದ ಬಗ್ಗೆ ಸರ್ವೋಚ್ಚ ನ್ಯಾಯಾಲಯ ನ್ಯಾಯ ಮಂಡಲಿ ರಚನೆ ಮಾಡುವಂತೆ ಏನು ಆದೇಶ ಹೊರಡಿಸಿದೆ, ಆ ಪ್ರಕಾರ ಮಂಡಲಿ ರಚನೆ ಕೂಡಾ ಆಗಿದೆ. ಈ ಬಗ್ಗೆ ಸದನದ ಎರಡೂ ಕಡೆಯ ಸದಸ್ಯರು ತಮ್ಮ ಕಳವಳವನ್ನು ವ್ಯಕ್ತ ಮಾಡಿದ್ದಾರೆ. ಸದಸ್ಯರಾದ ನಾವು ನಮ್ಮ ಅಭಿಪ್ರಾಯ, ಭಿನ್ನಾಭಿಪ್ರಾಯ, ಅಭಿಪ್ರಾಯ ಭೇಧಗಳನ್ನು ಕೂಡಾ ಈ ಸದನದಲ್ಲಿ ವ್ಯಕ್ತ ಮಾಡಿದ್ದೇವೆ. ಕಾವೇರಿ ನದಿ ನೀರಿನ ಬಗ್ಗೆ ೧೮೯೦ರಿಂದಲೂ ಕೂಡಾ ಹೋರಾಟ ನಡೆದಿದ್ದು ಈ ಹೋರಾಟದಲ್ಲಿ ನಮ್ಮ ಹೋರಾಟದ ಕಾಣಿಕೆಯಾದರೂ ಕೂಡಾ ಕಡಿಮೆ ಆಗಿದ್ದರೂ ಅಂದಿನ ಪರಿಸ್ಥಿತಿಗೆ ಅನುಗುಣವಾಗಿ ಮದ್ರಾಸ್ ರಾಜ್ಯದಲ್ಲಿ ಇದ್ದ ಗೌರ್ನರ್‌ರವರು ಅವರ ಸಾಮಂತ ರಾಜ್ಯದ ರೆಸಿಡೆಂಟ್ ಮೂಲಕ ಆಗ ನಮ್ಮ ರಾಜ್ಯ ನಡೆಸಿದ ಸಂಧಾನದ ಫಲವಾಗಿ ಇಲ್ಲಿಯವರೆವಿಗೂ ನಾವು ಈ ಒಂದು ಸಮಸ್ಯೆಯನ್ನು ಎದುರಿಸಿಕೊಂಡು ಬರುತ್ತಿದ್ದೇವೆ. ಆದರೆ ನಾನಾದರೂ ಕೂಡ ಭಾವಿಸುತ್ತೇನೆ ನಮ್ಮ ಹೋರಾಟದ ಕೊರತೆ ಮತ್ತು ನಮ್ಮ ಔದಾರ್ಯಕೂಡ ನಮ್ಮನ್ನು ಈ ಪರಿಸ್ಥಿತಿಗೆ ದೂಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ನಮ್ಮ ಒಳಜಗಳಗಳು ಆಂತರಿಕ ಕ್ಷೋಭೆಗಳು ರಾಜಕೀಯ ಭಿನ್ನಾಭಿಪ್ರಾಯಗಳೂ ಕೂಡ ಇದಕ್ಕೆಲ್ಲ ಕಾರಣವಾಗಿವೆ. ಯಾವುದೇ ಪಕ್ಷದ ಸರ್ಕಾರ ಇರಬಹುದು. ಕುವೆಂಪುರವರ ಒಂದು ಮಾತು ಇಲ್ಲಿ ನೆನಪಿಗೆ ಬರುತ್ತದೆ. ‘‘ಬಾರಿಸು ಕನ್ನಡ ಡಿಂಡಿಮವ. ಓ ಕರ್ನಾಟಕ ಹೃದಯ ಶಿವ’’ ಎಂದು ಹೇಳಿ ಕೊನೆಯಲ್ಲಿ ‘‘ಒಟ್ಟಿಗೆ ಬಾಳುವ ತೆರದಲಿ ಹರಸು’’ ಎಂದು ಹೇಳುತ್ತಾರೆ. ನಾನಾದರೂ ಕೂಡಾ ಈ ಸದನದ ಮುಖಾಂತರ ಹೇಳುವುದು ಇಷ್ಟೇ, ಯಾವುದೇ ಸಮಸ್ಯೆ ಇದ್ದರೂ ಕೂಡಾ ಅದನ್ನು ಪಕ್ಷಭೇಧ ಮರೆತು ನಾವು ಯೋಚಿಸಬೇಕಾದ, ವಿಚಾರ ಮಾಡಬೇಕಾದ ವಿಶೇಷ ಸಂದರ್ಭ ನಮಗೆ ಬಂದಿದೆ. ೧೦೦ ವರ್ಷಗಳ ಹಿಂದೆ ಅಂದಿನ ನಮ್ಮ ದಿವಾನರು ಇರಬಹುದು, ರೆಸಿಡೆಂಟರು ಇರಬಹುದು, ಅವರ ಕರಾರಿನ ಮೂಲಕ ನಮ್ಮ ಕರ್ನಾಟಕಕ್ಕೆ ಯಾವ ರೀತಿಯ ಶೋಷಣೆ ಆಗಿದೆ, ಆರ್ಥಿಕವಾಗಿ ನಮ್ಮ ರಾಜ್ಯ ಯಾವ ರೀತಿ ಸಂಕಷ್ಟಕ್ಕೆ ಬಲಿ ಆಗಿದೆ ಎಂಬುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ತಮಿಳುನಾಡು ಕಾವೇರಿ ನದಿಯ ನೀರನ್ನು ಪಡೆಯುವುದರಲ್ಲಿ ಯಶಸ್ವಿಯಾಗಿ ಕರ್ನಾಟಕ ರಾಜ್ಯದಲ್ಲಿ ಕೃಷಿಯನ್ನು ಅಧೋಗತಿಗೆ ತಂದು, ನಮ್ಮ ರೈತರನ್ನು ಶೋಷಣೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ.

ಇದರಿಂದ ಕರ್ನಾಟಕದ ಮಣ್ಣಿನ ಮಕ್ಕಳ ಉದ್ಯೋಗದ ಅವಕಾಶದಿಂದ ವಂಚಿತರಾಗಿದ್ದಾರೆ. ಈ ವ್ಯವಸ್ಥೆ ಸುಮಾರು ನೂರು ವರ್ಷಗಳಿಂದ ನಡೆಯುತ್ತಾ ಬಂದಿದೆ. ಜೊತೆಗೆ ವ್ಯಾಪಾರ ಇಂತಹ ಎಲ್ಲ ವ್ಯವಸ್ಥೆಯಿಂದ ನಿರಂತರವಾಗಿ ವಂಚಿತರಾಗಿ ಬಂದಿದ್ದಾರೆ. ಇವತ್ತು ಕೂಡ ಇಷ್ಟೆಲ್ಲಾ ಆಗಿದ್ದರೂ ಕೂಡ ಒಂದು ರಾಜಕೀಯ ವಿಪರ್ಯಾಸದ ವಾತಾವರಣದಲ್ಲಿ ಕೇಂದ್ರ ಸರ್ಕಾರ ಮತ್ತು ತಮಿಳುನಾಡು ಸರ್ಕಾರಗಳು, ಅವರ ರಾಜಕೀಯ ಅಭಿಪ್ರಾಯ ಒಂದೇ ಇರಬಹುದು, ಆದರೆ ಇವತ್ತು ನಮ್ಮ ಮೇಲೆ

ಒತ್ತಡ ತರುವಂತಹ ಒಂದು ವಾತಾವರಣ ನಿರ್ಮಾಣವಾಗಿದೆ. ನಾನಾದರೂ ಈ ಸದನದಲ್ಲಿ ಪ್ರಾರ್ಥನೆ ಮಾಡುತ್ತೇನೆ, ನೀವು ಕಾವೇರಿ ನದಿಯಲ್ಲಿ ಹರಿಯುವ ನೀರನ್ನು ನೋಡಿದ್ದೀರಿ, ಕಾವೇರಿ ನೀರನ್ನು ಕುಡಿದು ನೋಡಿಲ್ಲ. ಅದನ್ನು ಉಪಯೋಗಿಸುವಂತಹ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಆಗಿಲ್ಲವೆಂದು ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ ಇಂತಹ ಸಂದಿಗ್ಧ ವಾತಾವರಣದಲ್ಲಿ ಮಾನ್ಯ ವೀರೇಂದ್ರಪಾಟೀಲ್‌ರವರು ನಮ್ಮ ನಾಯಕತ್ವವನ್ನು ವಹಿಸಿದ್ದಾರೆ. ರಾಷ್ಟ್ರದಲ್ಲಿ ಈ ಜಲ ವಿವಾದವನ್ನು ಕೈಯಲ್ಲಿಟ್ಟುಕೊಂಡು ರಾಜಕೀಯ ಹುನ್ನಾರಕ್ಕೆ ಅವಕಾಶ ಕೊಡಬಾರದು. ಇದು ಇಡೀ ಕರ್ನಾಟಕದ ಹಿತಾಸಕ್ತಿಗೆ ವಿರೋಧವಾಗುತ್ತದೆ. ಅದನ್ನು ಸದನದ ಮೂಲಕ ತೀವ್ರವಾಗಿ ಪ್ರತಿಭಟಿಸಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ. ಜೊತೆಗೆ ಇಂತಹ ಮಲತಾಯಿ ಧೋರಣೆಯನ್ನು ಈ ಸಂದರ್ಭದಲ್ಲಿ ಈ ಸದನದ ಮೂಲಕ ನಾವು ಪ್ರತಿಭಟಿಸಬೇಕಾಗುತ್ತದೆ. ಈ ಬಗ್ಗೆ ಸದನದ ಹೊರಗೂ ಕೂಡ ಜನಾಭಿಪ್ರಾಯವನ್ನು ರೂಢಿಸುವಂತಹ ವ್ಯವಸ್ಥೆಯಾಗಬೇಕು. ಕರ್ನಾಟಕದ ಜನತೆ ನಮ್ಮನ್ನು ನೋಡುತ್ತಿದ್ದಾರೆ. ಕರ್ನಾಟಕದ ಸದನ, ಕರ್ನಾಟಕದ ಮಂತ್ರಿಮಂಡಲ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ನಿಲುವು ಏನು ಅವರು ಏನು ನಿರ್ಧಾರ ತೆಗೆದುಕೊಳ್ಳುತ್ತಾರೆಂದು ಜನರು ನಮ್ಮನ್ನು ಹತ್ತಿರದಿಂದ ನೋಡುತ್ತಿದ್ದಾರೆ ಅವರ ಹಿತಾಸಕ್ತಿಗೆ ಭಂಗ ಬರದಂತೆ ಈ ಸದನ ಒಂದು ನಿಲುವು ತೆಗೆದುಕೊಳ್ಳಬೇಕಾಗುತ್ತದೆ. ಈ ದಿಶೆಯಲ್ಲಿ ನಾನಾದರೂ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ

ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಟ್ರಿಬ್ಯುನಲ್ ಅನ್ನು ಕೇಂದ್ರಸರ್ಕಾರ ರಚನೆ ಮಾಡಿದೆ. ಆ ನ್ಯಾಯ ಮಂಡಳಿ ಕೂಡ ಸೇರುವಂತಹ ನೀಡುವಂತಹ, ಕೊಡುವಂತಹ ತೀರ್ಪು ಯಾವುದು ಎಂಬುದನ್ನು ನಾವು ಕಾದು ನೋಡಬೇಕಾಗುತ್ತದೆ. ಅದಕ್ಕೊಂದು ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಬೇಕಾಗುತ್ತದೆ. ಆಗ ಮಾತ್ರ ಟ್ರಿಬ್ಯುನಲ್‌ನ ಸದಸ್ಯರು ಕೂಡ ಜಾಗೃತರಾಗಿ ಕರ್ನಾಟಕದ ಜನತೆಯ ಹಿತಾಸಕ್ತಿಯನ್ನು ಕಾಯುವಂತಹ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ನ್ಯಾಯವಾದಿಗಳ ವೈಫಲ್ಯದಿಂದಾಗಿ ಸುಪ್ರೀಂಕೋರ್ಟ್ ಏನು ಆದೇಶ ನೀಡಿದೆ ಅದನ್ನು ಸರಿಪಡಿಸುವಂತಹ ಪುನರ್‌ವ್ಯವಸ್ಥೆ ಈ ಹಂತದಲ್ಲಿ ಆಗಬೇಕಾಗುತ್ತದೆ. ನಾವು ಬರೀ ಭಾವೋದ್ರೇಕದಿಂದ ಈವೊಂದು ಸಮಸ್ಯೆಯನ್ನು ಬಿಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ತಂತ್ರಗಾರಿಕೆಯಿಂದ ರೂಪಿಸಬೇಕು, ತಮಿಳುನಾಡು ಸರ್ಕಾರದವರು ಯಾವರೀತಿ ಪ್ರತಿರೋಧವನ್ನು ಪದೇ ಪದೇ ಒಡ್ಡಿ ನಿರಂತರವಾಗಿ ನೂರು ವರ್ಷಗಳಿಂದ ನೀರನ್ನು ಪಡೆಯುತ್ತಿದ್ದಾರೆ, ಆ ಬಗ್ಗೆ ಇವತ್ತು ಕೂಡ ನಾವು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆಯವರ ಶಾಪಕ್ಕೆ ನಾವು ಗುರಿಯಾಗುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂತಹ ಸಮಯದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಒಂದು ರಾಜಕೀಯವಾಗಿ ಸಾಮಾಜಿಕವಾಗಿ ಮತ್ತು ಸಮಾಜದ ಎಲ್ಲ ವರ್ಗಗಳ ಪ್ರತಿರೋಧ, ಜಾಗೃತಿ ಕಾವೇರಿ ನೀರಿನ ಬಗ್ಗೆ ಆಗಬೇಕು, ಅದು ಆದಾಗಮಾತ್ರ ಕರ್ನಾಟಕ ರಾಜ್ಯದಲ್ಲಿ ನಮ್ಮ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಅಳವಡಿಸಿಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ, ಕೊನೆಯದಾಗಿ ಈ ಸಂದರ್ಭದಲ್ಲಿ ತಮ್ಮ ನಾಯಕತ್ವದಲ್ಲಿ ಪಕ್ಷಭೇಧವಿಲ್ಲದೆ ಅದೆಲ್ಲವನ್ನು ಮರೆತು ಕೇಂದ್ರಸರ್ಕಾರ ಯಾವುದೇ ರಾಜಕೀಯ ನಿರ್ಧಾರವನ್ನು ತೆಗೆದುಕೊಳ್ಳದ ಹಾಗೆ, ಇಂತಹ ಯಾವುದೇ ನಿರ್ಧಾರಗಳು ಇದ್ದರೆ ಕರ್ನಾಟಕದ ಜನತೆಯ ಹಿತಾಸಕ್ತಿಗೆ ವಿರುದ್ಧವಾಗಿದ್ದರೆ ಅದನ್ನು ತೀವ್ರವಾಗಿ ಪ್ರತಿಭಟಿಸಬೇಕಾಗಿದೆ ಹಾಗೂ ಅದನ್ನು ಖಂಡಿಸಬೇಕಾಗುತ್ತದೆಂದು ಈ ಸದನದ ಮೂಲಕ ಹೇಳುತ್ತೇನೆ. ಯಾವುತ್ತು ಕೂಡ ಕೇಂದ್ರಸರ್ಕಾರ ಮತ್ತು ತಮಿಳುನಾಡು ಸರ್ಕಾರ ಕರ್ನಾಟಕದ ಜನತೆಗೆ ಸಹಕರಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತಾ ನನಗೆ ಈ ವಿಚಾರದಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್ ಜೈ ಕರ್ನಾಟಕ.

† ಶ್ರೀ ಆರ್. ಬಾಬಾಗೌಡ ಪಾಟೀಲ (ಕಿತ್ತೂರು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇದರ ಬಗೆ ಚರ್ಚೆ ಬೇಕಾದಷ್ಟು ಆಯಿತು. ಆದರೆ ಪರಿಹಾರದ ಅಸ್ ಮಾತ್ರ ರೈತರಿಗೆ ಬಹುತೇಕ ಕಾಣುತ್ತಿಲ್ಲ. ನಾವು ತಿಳಿದುಕೊಂಡ ಹಾಗೆ ಟ್ರಿಬ್ಯುನಲ್ ಮುಖಾಂತರ ನ್ಯಾಯ ಸಿಗುತ್ತದೆ ಎಂಬ ಭರವಸೆ ಅಂತೂ ಇಲ್ಲ. ಏನಾದರೂ ಭರವಸೆ ಇದ್ದರೆ ಕೇಂದ್ರಸರ್ಕಾರದ ಮನಸ್ಸಿನಲ್ಲಿ ಕರ್ನಾಟಕಕ್ಕೆ ನ್ಯಾಯ ದೊರಕಿಸಿ ಕೊಡಬೇಕು ಎಂಬ ಮನಸ್ಸು ಇದ್ದರೆ ಮಾತ್ರ ಸಾಧ್ಯ. ಈ ಕಾರಣ ಕೇಂದ್ರ ಸರ್ಕಾರದ ನಿರ್ಣಯವನ್ನು ಖಂಡಿಸಬೇಕು, ವಿರೋಧ ಮಾಡಬೇಕು. ನಮಗೆ ಅನ್ಯಾಯ ಆಗಿದೆ ಎಂದು ತಿಳಿಸಬೇಕು ಎಂದು ಈ ಎಲ್ಲಾ ವಿಚಾರಗಳ ಬಗ್ಗೆ ಹೇಳಿದರು. ಆದರೆ ಇದಕ್ಕೆ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಬಹುತೇಕ ನಮ್ಮ ಸ್ನೇಹಿತರು ತಿಳಿಸಿಕೊಟ್ಟಿಲ್ಲ. ನನಗೆ ಅನಿಸಿದ ಹಾಗೆ ಈ ಸದನದ ಎಲ್ಲಾ ಸದಸ್ಯರು ಡೆಲ್ಲಿಗೆ ಹೋಗಿ ಪ್ರಧಾನ ಮಂತ್ರಿಯವರ ಮನೆಮುಂದೆ ಕುಳಿತು ನಮ್ಮ ಮನಸ್ಸಿನ ನೋವನ್ನು ತೋಡಿಕೊಳ್ಳಬೇಕು. ನಾಳೆ ಒಂದು ಜಲಮಂಡಲಿಯ ನೀತಿರೂಪಣೆ ಮೇಲೆ ಅಥವಾ ಟರ್ಮ್ಸ್ ಆಫ್ ರೆಫರೆನ್ಸ್

ಮೇಲೆ ಇದರಿಂದ ಪರಿಣಾಮ ಆಗಬಹುದು ಎಂಬ ಒಂದು ಆಸೆ. ನಮ್ಮ ರೈತರು ಹೇಗೆಂದರೆ ಕಾನೂನು ಪ್ರಕಾರ ಅವರಿಗೆ ಹಿಸ್ಸೆ ಹೋಯಿತು ಎಂದು ರಾಜಕಾರಣಿಗಳು ಹೇಳಿದರೆ ಹೌದು ಎಂದು ಕೈಕಟ್ಟಿ ಕುಳಿತುಕೊಳ್ಳುವ ಜನ ಇವರು. ಪ್ರಚೋದನೆ ಮಾಡಿದರೆ ಚಡ್ಡಿ ಹಾಕಿಕೊಂಡು ಕುಸ್ತಿಗೆ ಬರುವ ಜನ ಇವರು. ಆದ್ದರಿಂದ ಉಪಾಯವಾಗಿ ಕೇಂದ್ರಮಟ್ಟದಲ್ಲಿ ಪಕ್ಷಭೇದ ಮರೆತು ಯಾವ ಕಾರ್ಯಕ್ರಮದಿಂದ ಬಹುತೇಕ ನಮ್ಮ ಮನಸ್ಸಿನ ನೋವನ್ನು ಕೇಂದ್ರಕ್ಕೆ ತಿಳಿಸಬಹುದು ಎನ್ನುವುದನ್ನು ವಿಚಾರ ಮಾಡಿದ ನಂತರ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಯವರು).—ಮಾನ್ಯ ಉಪಾಧ್ಯಕ್ಷಿಣಿಯವರೇ, ನಿನ್ನೆಯಿಂದ ಕಾವೇರಿ ಜಲ ವಿವಾದದ ಬಗ್ಗೆ ಉಂಟಾದ ಬೆಳವಣಿಗೆ ಬಗ್ಗೆ ಅನೇಕ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ತಮ್ಮ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮತ್ತು ಈ ಚರ್ಚೆಯಲ್ಲಿ ಭಾಗವಹಿಸಿದಂಥ ಎಲ್ಲ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯದ ಜೊತೆಯಲ್ಲಿ ಈ ಸಮಸ್ಯೆಯನ್ನು ಮುಂದೆ ಯಾವರೀತಿಯಿಂದ ಎದುರಿಸಬೇಕು ಎಂಬುದರ ಬಗ್ಗೆ ಕೂಡ ಸಲಹೆಗಳನ್ನು ನೀಡಿದ್ದಾರೆ. ನಾನು ನಿನ್ನೆ ಹೇಳಿದ ಹಾಗೆ ಈ ವಿಷಯ ಇವತ್ತು ಒಂದು ಸೂಕ್ಷ್ಮ ಹಂತದಲ್ಲಿ ಬಂದುನಿಂತಿದೆ. ಇನ್ನು ಮುಂದೆ ಏನು ಮಾಡಬೇಕು ಎನ್ನುವುದರ ಬಗ್ಗೆ ಮಾತ್ರ ವಿಚಾರ ಮಾಡುತ್ತಿದ್ದೇವೆ ಹೊರತಾಗಿ ಇದಕ್ಕೆ ಯಾರು ಕಾರಣ ಎನ್ನುವ ತಪ್ಪು ಸಾರಿಸುವ ಕೆಲಸಕ್ಕೆ ನಾವು ಕೈಹಾಕಬಾರದು. ಇದರಿಂದ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಸಮಸ್ಯೆ ಇನ್ನೂ ಜಟಿಲವಾಗುತ್ತದೆ. ಅದರಿಂದ ರಾಜ್ಯಕ್ಕೆ ಮತ್ತು ಕಾವೇರಿ ನದಿಪಾತ್ರದಲ್ಲಿರುವಂಥ ಜನತೆಗೆ ಬಹಳ ದೊಡ್ಡ ಆಘಾತವಾಗುತ್ತದೆ. ಇದಕ್ಕಾಗಿ ನಿನ್ನೆ ಚರ್ಚೆ ಪ್ರಾರಂಭ ಮಾಡುವ ಮುನ್ನ ನಾನು ಪದೇಪದೇ ಹೇಳಿದ್ದೆ, ಇದು ಯಾವುದೇ ಒಂದು ರಾಜಕೀಯ ಪಕ್ಷದ ಪ್ರಶ್ನೆ ಅಲ್ಲ. ಇದು ರಾಜ್ಯದ ಪ್ರಶ್ನೆ. ರಾಜ್ಯದ ಜನತೆಯ ಪ್ರಶ್ನೆ. ರಾಜ್ಯದ ಹಿತರಕ್ಷಣೆಯನ್ನು, ಸಂರಕ್ಷಣೆಯನ್ನು ಮಾಡುವಂಥ ಪ್ರಶ್ನೆ ಎಂದು ನಾವು ವಿಚಾರ ಮಾಡಿ ಚರ್ಚೆ ಮಾಡಬೇಕೆಂಬ ಮಾತನ್ನು ನಾನು ಹೇಳಿದ್ದೆ. ಅನೇಕ ಮಾನ್ಯ ಸದಸ್ಯರು ಅದೇ ಒಂದು ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಇಷ್ಟೆ ಈ ಸದನಕ್ಕೆ ವಿನಂತಿ ಮಾಡಿಕೊಳ್ಳುವುದು. ಇನ್ನು ಮುಂದೆ ಕಾವೇರಿ ನದಿ ನೀರಿನ ವಿವಾದದ ಬಗ್ಗೆ ಯಾವ ತರಹದ ಅಪಸ್ವರ ಹಾಕುವುದಕ್ಕೆ ನಾವು ಅವಕಾಶ ಕೊಡಬಾರದು. ಈ ಅಪಸ್ವರಕ್ಕೆ ಪೂರ್ಣ ವಿರಾಮ ಕೊಡಬೇಕೆಂದು ಸದನಕ್ಕೆ ನಾನು ಅಪೀಲು ಮಾಡಿಕೊಳ್ಳುತ್ತೇನೆ ಮತ್ತು ಸದನದ ಹೊರಗಡೆ ಇರುವಂಥ ನಾಯಕರಿಗೂ ನಾನು ಅಪೀಲು ಮಾಡಿಕೊಳ್ಳುತ್ತೇನೆ. ಇಷ್ಟನ್ನು ಹೇಳುತ್ತಾ, ವಿರೋಧ ಪಕ್ಷದ ನಾಯಕರು ನಿನ್ನೆ ಕೆಲವು ವಿಚಾರಗಳನ್ನು ವ್ಯಕ್ತಮಾಡಿದರು. ಅವರು ಅನಂತರ ಹೇಳಿದರು, ಆವೇಶದಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದೇನೆ ಎಂದು. ಅದಕ್ಕಾಗಿ. ಇದರ ಬಗ್ಗೆ ನಾನು ಸಹ ಆವೇಶದಿಂದ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಆದರೆ ರೆಕಾರ್ಡ್ ಸರಿಪಡಿಸಬೇಕಾದ ಅವಶ್ಯಕತೆ ಇರುತ್ತದೆ, ಆ ದೃಷ್ಟಿಯಿಂದ ಕೆಲವು ವಿಚಾರಗಳನ್ನು ಹೇಳುತ್ತೇನೆ. ಅವರು ನಿನ್ನೆ ಮಾಡಿರುವಂಥ ಭಾಷಣದ ಧಾಟಿ ನೋಡಿ ನೀವು ಹೋಗುತ್ತಿರುವಂಥ ಮಾರ್ಗ ಬಹುಶಃ ಸ್ವಲ್ಪಮಟ್ಟಿಗೆ ತಪ್ಪುತ್ತಾ ಇದ್ದಂತೆ ಕಾಣುತ್ತದೆ ಎನ್ನುವಂಥ ಮಾತನ್ನು ಅವರಿಗೆ ನಾನು ಹೇಳಿದೆ. ಅವರು ಆವೇಶದಿಂದ ಹೇಳಿದ್ದಾರೆಂದು ಇದೀಗ ನಾನು ಹೇಳಿದ್ದು only to straighten the record ಅದಕ್ಕಾಗಿ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆಯೇ ಹೊರತು ಮತ್ತೆ ಯಾವ ಒಂದು ಉದ್ದೇಶದಿಂದ ಅಲ್ಲ. ನೀವು ಕೆಲವು ತಪ್ಪುಗಳನ್ನು ಮಾಡಿದಿರಿ, ಅದರಿಂದ ಈ ಪರಿಸ್ಥಿತಿ ಉಂಟಾಯಿತು, ನೀವು ಈ ರೀತಿ, ಈ ರೀತಿ ಈ ರೀತಿ ಮಾಡಿದ್ದರೆ ಈ ತರಹದ ಪರಿಸ್ಥಿತಿ ಬರುತ್ತಾ ಇರಲಿಲ್ಲ ಎಂದು. ಒಂದು ವೇಳೆ ನಾವು ತಪ್ಪು ಮಾಡಿದ್ದರೆ, ಕ್ಷಮೆ ಕೇಳಿಕೊಳ್ಳುವುದಕ್ಕೆ ನಾನಂತೂ ಹಿಂದೆಮುಂದೆ ನೋಡಬೇಕಾಗಿಲ್ಲವೆಂಬ ವಿಚಾರವನ್ನು ಅವರು ವ್ಯಕ್ತಮಾಡುತ್ತಾ, ಉದಾಹರಣೆಗಾಗಿ ಅವರು ಹೇಳಿದರು. ತಮಿಳುನಾಡಿನ ಲೋಕೋಪಯೋಗಿ ಮಂತ್ರಿಗಳು ಇಲ್ಲಿಗೆ ಬಂದಾಗ ಅವರಿಗೆ ಕರ್ನಾಟಕದಲ್ಲಿ, ಯಾವ ಮಾನ್ಯತೆ ಸಿಗಬೇಕಾಗಿತ್ತೋ, ಅವರನ್ನು ಯಾವ ರೀತಿಯಾಗಿ ಬರಮಾಡಿಕೊಳ್ಳಬೇಕಾಗಿತ್ತೋ. ಅದನ್ನು ನೀವು ಮಾಡಲಿಲ್ಲ ಎನ್ನುವಂಥಾದ್ದು ಒಂದು. ನಿನ್ನೆ ನಾನು ಅದನ್ನು ಸ್ಪಷ್ಟೀಕರಿಸಿದೆ. ಇಲ್ಲಿ ನಮ್ಮ ರೆಕಾರ್ಡ್ ಸಲುವಾಗಿ ಹೇಳಬೇಕಾದ ಅವಶ್ಯಕತೆ ಇದೆ. ನಿನ್ನೆ ನಾನು ಆ ಬಗ್ಗೆ ಹೇಳಿದೆ. ಅವರು ನಮಗೆ ಹೇಳಿರಲಿಲ್ಲ, ಅವರು ಬರುವಂಥ ಕಾರ್ಯಕ್ರಮವನ್ನು ನಮಗೆ ಮೊದಲೇ ಕಳುಹಿಸಿರಲಿಲ್ಲ, ಅವರು ಬರುವುದು ನಮಗೆ ಯಾವ ರೀತಿಯಿಂದಲೂ ಪೂರ್ವಭಾವಿಯಾಗಿ ಗೊತ್ತಿರಲಿಲ್ಲ ಎಂದು. ಇಲ್ಲದೇ ಹೋಗಿದ್ದರೆ, ನೆರೆ ರಾಜ್ಯದ ಒಬ್ಬ ಮಂತ್ರಿಗಳು. ಬಂದಾಗ ಅವರಿಗೆ ಏನು ಗೌರವ ಸಲ್ಲಬೇಕು, ಏನು ಮಾನ್ಯತೆ ಸಲ್ಲಬೇಕು ಅದನ್ನು ಕೊಡುವುದರಲ್ಲಿ ಹಿಂದೆಮುಂದೆ ನೋಡುತ್ತಾ ಇರಲಿಲ್ಲವೆಂದು ಹೇಳಿದೆ.

ಏಕೆ ಇಲ್ಲಿ ಪುಷ್ಟೀಕರಿಸುತ್ತಿದ್ದೇನೆಂದು ಹೇಳಿದರೆ. ನೆರೆ ರಾಜ್ಯದ ಲೋಕೋಪಯೋಗಿ ಮಂತ್ರಿಗಳು ಬಂದಾಗ, ಮುಖ್ಯಮಂತ್ರಿಗಳು ಭೇಟಿ ಆಗಲಿಲ್ಲ. ಅವರು ಹಾಗೆಯೇ ತಿರುಗಿ ಹೋಗಬೇಕಾದ ಪರಿಸ್ಥಿತಿ ಬಂತು ಎಂಬ ಭಾವನೆ ಬರಬಾರದು. ಇದರ ಬಗ್ಗೆ ನಾನು ಹೇಳಬೇಕೆಂದರೆ. ಇಲ್ಲಿ ಅವರು ಬಂದಾಗ, ಹಾಗೂ ಇಲ್ಲಿಂದ ತಿರುಗಿ ಹೋದಮೇಲೆ ಇದು ಒಂದು ಪತ್ರಿಕೆಯಲ್ಲಿ ಬಂದಿದೆ. ಅದು ಈ ರೀತಿಯಾಗಿದೆ

> "The Tamal Nadu Public Works Minister Mr. Dorai Murugan who rushed here today drew a blank finding that neither the Karnataka Chief Minister Mr. Veerendra Patil nor the Publi Works Minister was in town for talks on the issue of release of Cauvery waters to the Tamil Nadu delta area. Mr. Dorai Murugan contacted by the Hindu confessed that he had no prior knowledge of the absence of both the Chief Minister and the Public Works Minister who are away on tour and he would therefore return to Madras tomorrow. He would make another trip to Bangalore on Monday by which time Mr. Veerendra Patil would have returned to Bangalore. However, Mr. Dorai Murugan said he had talks with the Karnataka PWD Secretary.'

ನಾನು ಇದನ್ನು ಏತಕ್ಕೆ ಓದಿದೆ ಎಂದರೆ ಅವರು ಇಲ್ಲಿಗೆ ಬರುವುದು ನಮಗೆ ಗೊತ್ತಿರಲಿಲ್ಲ. ಇಲ್ಲಿಗೆ ಬಂದಾಗ ನಾನು ಇರಲಿಲ್ಲ. ನಮ್ಮ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಇರಲಿಲ್ಲ. ಇದರಿಂದಾಗಿ ಸ್ವಾಭಾವಿಕವಾಗಿ ಅವರು ತಿರುಗಿ ಹೋಗಬೇಕಾಯಿತು. ಅನಂತರ ನನಗೆ ಯಾವಾಗ ನಮ್ಮ ಅಧಿಕಾರಿಗಳು ಸಂಪರ್ಕಿಸಿದರು ಆಗ ಅವರಿಗೆ ನಾನು ಹೇಳಿದೆ, ಮತ್ತೆ ಅವರು ಇಂತಹ ದಿವಸ ಬಂದರೆ ನಾನು ಅವರ ಜೊತೆಯಲ್ಲಿ ಮಾತನಾಡುತ್ತೇನೆ ಎಂದು ಹೇಳಿದೆ. ಅದೇ ರೀತಿ ಅವರು ಬಂದರು ಒಳ್ಳೆಯ ವಾತಾವರಣದಲ್ಲಿ ಮಾತುಕತೆ ಆಯಿತು. ಅವರು ಸಮಾಧಾನದಿಂದ ತಿರುಗಿ ಹೋದರು. ಇನ್ನೊಂದು ವಿಚಾರ ವಿರೋಧ ಪಕ್ಷದ ನಾಯಕರು ಹೇಳಿದರು. ನೀವು ಅವರು ಕೇಳಿದಾಗ ೩ ಟಿಎಂಸಿ ನೀರನ್ನು ಬಿಡುವುದಕ್ಕೆ ನಿರಾಕರಿಸಿದಿರಿ. ವಿನಾಕಾರಣ ತಮಿಳುನಾಡಿನ ಜೊತೆ ರಬ್ ಮಾಡಿದಿರಿ ಎಂಬ ವಿಚಾರವನ್ನು ಅವರು ವ್ಯಕ್ತ ಮಾಡಿದರು. ಅವರು ೩೦ ಟಿ.ಎಂ.ಸಿ. ನೀರು ಕೇಳಿದರು. ನಾನು ರೆಕಾರ್ಡ್‌ನಲ್ಲಿ ನೋಡಿದಹಾಗೆ ಅವರು ಪ್ರತಿವರ್ಷ ೩೦ ಟಿ.ಎಂ.ಸಿ. ಕೇಳುತ್ತಾರೆ, ೫ ಟಿ.ಎಂ.ಸಿ. ನೀರು ತೆಗೆದುಕೊಂಡು ಹೋಗುತ್ತಾರೆ. ಅನಂತರ ಅವರು ನೀರು ಕೇಳುವುದಕ್ಕೆ ಬರುವುದಿಲ್ಲ. ಅನೇಕ ವರ್ಷಗಳಿಂದ ಇದೊಂದು ಸಂಪ್ರದಾಯ ಬೆಳೆದುಕೊಂಡು ಬಂದಿದೆ. ಅವರು ೩೦ ಟಿ.ಎಂ.ಸಿ ನೀರು ಕೇಳಿದರು, ನಾನು ಅಷ್ಟು ಕೊಡುವುದಕ್ಕೆ ಆಗುವುದಿಲ್ಲ ಎಂದಾಗ ಕನಿಷ್ಟ ಎಷ್ಟಾಗುತ್ತದೆ ಅಷ್ಟು ಕೊಡಬೇಕೆಂದು ಹೇಳಿದರು, ಕೊನೆಗೆ ೫ ಟಿ.ಎಂ.ಸಿ. ನೀರು ಬಿಡುವುದಕ್ಕೆ ನಾವು ಒಪ್ಪಿಕೊಂಡು ಬಿಟ್ಟಿದ್ದೇವೆ. ನೀರು ಬಿಡುವುದಿಲ್ಲ ಎನ್ನುವಂತಹ ಯಾವ ಘೋಷಣೆಯನ್ನು ನಾವು ತಿಳಿಸಿಲ್ಲ. ಆದಕ್ಕಾಗಿ ಈ ಪ್ರಶ್ನೆಯನ್ನು ತಾವು ಬೇರೆಯವರ ಜೊತೆಯಲ್ಲಿ ಬೆರೆಸಬೇಕಾದ ಅವಶ್ಯಕತೆ ಇರಲಿಲ್ಲ. ಇವತ್ತು ಈ ಪ್ರಶ್ನೆ ಟ್ರಿಬ್ಯೂನಲ್ ಮುಂದೆ ಹೋದರೂ ಕೂಡಾ ನಮ್ಮ ಮತ್ತು ತಮಿಳುನಾಡು ಸಂಬಂಧ ಬಹಳ ಒಳ್ಳೆಯ ರೀತಿಯಲ್ಲಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲಿಂದ ಇನ್ನೊಂದು ವಿಚಾರ ಹೇಳಿದರು. ಇದನ್ನು ಏತಕ್ಕೆ ಯಾವ ಹಿನ್ನೆಲೆಯಲ್ಲಿ ಹೇಳಿದರೋ ಗೊತ್ತಾಗಲಿಲ್ಲ. ಕೇಂದ್ರದ ಇವತ್ತಿನ ನಾಯಕತ್ವ ಏನಿದೆ ಅದರ ಲಾಭವನ್ನು ನೀವು ಪಡೆಯಬೇಕಾಗಿತ್ತು, ಅದನ್ನು ಪಡೆಯಲಿಲ್ಲ ಎಂದು ಹೇಳಿದರು, ಅದು ಯಾವ ರೀತಿ ಎಂದು ನನಗೆ ಗೊತ್ತಾಗಲಿಲ್ಲ. ಮೊದಲನೆಯ ಸಲ ನಮ್ಮ ರಾಜ್ಯಕ್ಕೆ ರಾಷ್ಟ್ರದ ಪ್ರಧಾನ ಮಂತ್ರಿಗಳು ಬಂದಾಗ, ಇವತ್ತು ಕರ್ನಾಟಕದಲ್ಲಿ ಒಂದು ಪಕ್ಷದ ಸರಕಾರ ಇದೆ, ಕೇಂದ್ರದಲ್ಲಿ ಒಂದು ಪಕ್ಷದ ಸರಕಾರ ಇದೆ, ಆದರೆ ಇವತ್ತು ಕರ್ನಾಟಕದ ಒಬ್ಬ ಮುಖ್ಯಮಂತ್ರಿಯಾಗಿ ನಾನು ಸ್ಪಷ್ಟಪಡಿಸುತ್ತಿದ್ದೇನೆ, ಮೊದಲನೆಯ ಸಲ ಪ್ರಧಾನಮಂತ್ರಿಯವರು ಬಂದಾಗ ಒಬ್ಬ ಪ್ರಧಾನಮಂತ್ರಿಗೆ ಏನು ಮಾನ್ಯತೆ ಸಿಗಬೇಕಾಗಿತ್ತು, ಯಾವರೀತಿಯಿಂದ ಅವರ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುವುದಕ್ಕೆ ನಾವು ಏನು ಕೆಲಸ ಮಾಡಬೇಕಾಗಿತ್ತು, ಯಾವ ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಅದರಲ್ಲಿ ಅಣು ಮಾತ್ರವೂ ನಾವು ಕಡಿಮೆ ಮಾಡಲಿಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅವರು ತಮ್ಮ ಕಾರ್ಯಕ್ರಮದ ಪ್ರಕಾರ ಮೊದಲನೇ ದಿವಸ ಎಂಟು ಘಂಟೆಗೆ ಮಂಗಳೂರಿಗೆ ಬಂದಲಾಗಾಯಿತು ನಾನು ಪೂರ್ತಿ ಅವರ ಜೊತೆಯಲ್ಲಿ ಇದ್ದೆ. ಎರಡು ಅವರ

ಪ್ರೈವೇಟ್ ಅಂದರೆ ಪಾರ್ಟಿ ಕಾರ್ಯಕ್ರಮಗಳು ಇದ್ದವು. ಆದಕ್ಕಾಗಿ ಅವರ ಅಪ್ಪಣೆಯನ್ನು ತೆಗೆದು ಕೊಂಡು ನಾನು ಆ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ. ಏನಪ್ಪ ಕರ್ನಾಟಕ ರಾಜ್ಯ ಸರಕಾರ ಕೇಂದ್ರದ ಜೊತೆಯಲ್ಲಿ ರಬ್ ಮಾಡುತ್ತಿದ್ದಾರೆ, ವರೆಸಿಕೊಳ್ಳುತ್ತಿದ್ದಾರೆ, ಆದರಿಂದ ಕರ್ನಾಟಕದ ಜನತೆಗೆ ಅನ್ಯಾಯವಾಗುತ್ತದೆ ಎಂಬ ಭಾವನೆ ಬರಬಾರದು. ಆದಕ್ಕಾಗಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವತ್ತು ಕರ್ನಾಟಕದ ಮುಖ್ಯಮಂತ್ರಿಯಾಗಿ ಕರ್ನಾಟಕದ ಹಿತರಕ್ಷಣೆ ಮಾಡುವಂತಹ ಜವಾಬ್ದಾರಿ, ಧರ್ಮ ನನ್ನದಾಗಿದೆಯೇ ಹೊರತಾಗಿ ಯಾವುದೇ ಒಂದು ಪಕ್ಷದ ದೃಷ್ಟಿಯಿಂದ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂಬ ಭಾವನೆ ಇಲ್ಲಿಯುವರೆಗೆ ನನಗೆ ಬಂದಿಲ್ಲ. ಆದಕ್ಕಾಗಿ ಪ್ರಧಾನಮಂತ್ರಿಗಳು ಬಂದಾಗ ಅವರಿಗೆ ಏನು ಮನ್ನಣೆ ಸಲ್ಲಿಸಬೇಕಾಗಿತ್ತು ಅವರ ಕಾರ್ಯಕ್ರಮದ ಬಗ್ಗೆ ಯಾವರೀತಿಯಿಂದ ನಾವು ನಡೆದುಕೊಳ್ಳಬೇಕಾಗಿತ್ತು ಆ ರೀತಿಯಿಂದ ನಡೆದುಕೊಂಡಿದ್ದೇವೆ. ಬಹುಶಃ ಚಂದ್ರೇಗೌಡರು ಸಹ ನನ್ನ ಜೊತೆಯಲ್ಲಿದ್ದರು, ಬೊಮ್ಮಾಯಿಯುವರು ಸಹ ನನ್ನ ಜೊತೆಯಲ್ಲಿದ್ದರು. ಅದೇ ರೀತಿ ಹೆಗಡೆಯುವರು ನನ್ನ ಜೊತೆಯಲ್ಲಿದ್ದರು. ಅನೇಕರಿಗೆ ಆಶ್ಚರ್ಯವಾಗುವಂತಹ ಪರಿಸ್ಥಿತಿ ಇತ್ತು. ಬಹುಶಃ ಒಂದೆರಡು ಪತ್ರಿಕೆಯಲ್ಲಿ ಬಂದಿದೆ. ರಾಜ್ಯದಲ್ಲಿ ಒಂದು ಪಕ್ಷದ ಸರಕಾರ, ಕೇಂದ್ರದಲ್ಲಿ ಒಂದು ಪಕ್ಷದ ಸರಕಾರ, ಇದ್ದರೂ ಕೂಡಾ ಪಕ್ಷದ ಭೇದಭಾವನೆಯಿಂದ ಏನೊಂದು ಕಾರ್ಯಕ್ರಮಗಳೂ ಆಗಲಿಲ್ಲವೆಂದು ಒಂದು ರೀತಿಯಿಂದ ಜನಗಳು ಆಶ್ಚರ್ಯ ಪಡುವಂತಹ ಒಂದು ವಾತಾವರಣದಲ್ಲಿ ಪ್ರಧಾನಮಂತ್ರಿಯುವರ ಕಾರ್ಯಕ್ರಮ ಕರ್ನಾಟಕದಲ್ಲಿ ಆಯಿತು.

೪.೩೦ ಪಿ.ಎಂ.

ಕರ್ನಾಟಕ ರಾಜ್ಯದಲ್ಲಿ ಪ್ರಧಾನ ಮಂತ್ರಿಗಳಿಗೆ ಅಪರ ಪಕ್ಷದ ಸರ್ಕಾರ ಇದಿದ್ದರೆ ಇನ್ನೂ ಹೆಚ್ಚು ಗೌರವ ಸಿಗುತ್ತಿತ್ತೋ ಏನೋ ಎನ್ನುವ ಭಾವನೆ ಬರುವುದಕ್ಕೆ ಯಾವ ತರಹದ ಆಸ್ಪದವನ್ನು ಸಹ ನಾವು ಕೊಡಲಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಚಾರವನ್ನು ಮಾನ್ಯ ವಿರೋಧಪಕ್ಷದವರು ಕೇಳಿದರು ಇನ್ನು ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಬಹುಶಃ ಯಾರು ಯಾವ ತರಹದ ವಾದವನ್ನು ಮಾಡಿದರು ಎನ್ನುವುದನ್ನು ಸಹ ನಾನು ಕೇಳಿದ್ದೇನೆ. ಯಾರೂ ಸಹ ಅನುಮಾನಕ್ಕೆ ಆಸ್ಪದ ಕೊಡುವಂತಹ ಮಾತುಗಳನ್ನು ನಾನು ಹೇಳಲಿಲ್ಲ. ಎಲ್ಲಾ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಈಗ ಹೋಗುವುದಿಲ್ಲ ಅದರಲ್ಲಿ ಶ್ರೀಮಾನ್ ಸಿಂಧ್ಯಾರವರು ಕೆಲವು ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಅದೇ ರೀತಿ ಪ್ರೊಫೆಸರ್ ನಂಜುಂಡಸ್ವಾಮಿಯುವರು ಸಹ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಅನೇಕ ಜನ ಮಾನ್ಯ ಸದಸ್ಯರು ಅನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಯಾವ ರೀತಿಯಿಂದ ಈ ಪ್ರಶ್ನೆಯನ್ನು ನಾವು ಇತ್ಯರ್ಥ ಮಾಡಬೇಕು ಮತ್ತು ಈ ಸಮಸ್ಯೆಯನ್ನು ಯಾವ ರೀತಿಯಿಂದ ಎದುರಿಸಬೇಕೆನ್ನುವ ಬಗ್ಗೆ ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅವೆಲ್ಲವನ್ನೂ ನಾನು ಈಗ ಪ್ರಸ್ತಾಪ ಮಾಡತಕ್ಕಂಥಾದ್ದಕ್ಕೆ ಸಮಯ ಇಲ್ಲ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ೫-೪-೧೯೯೦ ರಂದು ಮಾನ್ಯ ಮುಖ್ಯಮಂತ್ರಿಗಳು ಡಿಲ್ಲಿಗೆ ಹೋಗುವುದಕ್ಕಿಂತ ಮುಂಚಿತ ವಾಗಿ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡಲಿಲ್ಲವೆಂದು ಹೇಳಿದರು ಆದಕ್ಕೆ ಕಾರಣ ಇಷ್ಟೇ, ನಾನು ಡಿಲ್ಲಿಗೆ ಹೋಗುತ್ತಿರುವುದು ಕಾವೇರಿ ನದಿ ನೀರಿನ ವಿವಾದದ ಒಂದು ಪ್ರಶ್ನೆಯನ್ನು ಚರ್ಚೆ ಮಾಡುವುದಕ್ಕೆ ನಾವು ಹೋಗುತ್ತಿದ್ದೇವೆಂದು ಗೊತ್ತಿತ್ತು. ಆಗ ಈ ವಿಷಯ ಸುಪ್ರೀಂ ಕೋರ್ಟ್ ಮುಂದೆ ಇತ್ತು. ಮತ್ತು ಸುಪ್ರೀಂ ಕೋರ್ಟ್‌ನವರು ಒಂದು ಆದೇಶವನ್ನು ಸಹ ಕೊಟ್ಟಿದ್ದರು. ಕೇಂದ್ರ ಸರ್ಕಾರ ಏನಾದರೂ ಪ್ರಯತ್ನ ಮಾಡಿ ಇಷ್ಟು ದಿವಸಗಳಲ್ಲಿ ನಿಮ್ಮ ಖಚಿತ ವಾದ ನಿಲುವು ಹೇಳಬೇಕು ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಆದೇಶ ನೀಡಿತ್ತು. ಆದಕ್ಕೆ ಅವರು ಮೀಟಿಂಗ್ ಕರೆದಿದ್ದರಿಂದ ಹೋಗಬೇಕಾಗಿ ಬಂತು. ನಾನು ವಿರೋಧ ಪಕ್ಷದ ನಾಯಕರನ್ನು ಸಮಾಲೋಚನೆ ಮಾಡುವಂತಹ ಪರಿಸ್ಥಿತಿ ಯಾವಾಗ ಬರುತ್ತಿತ್ತು ಎಂದರೆ ಹಿಂದಿನ ಸರ್ಕಾರದ ನಿಲುವೆಯಲ್ಲಿ ಏನಾದರೂ ಬದಲಾವಣೆ ಮಾಡುವುದಾಗಲಿ ಅಥವಾ ಮತ್ತೊಂದು ನಿಲುವು ತೆಗೆದುಕೊಳ್ಳುವಂತಹ ಪರಿಸ್ಥಿತಿ ಏನಾದರೂ ಬಂದಿದ್ದರೆ ಆಗ ನಿಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಬೇಕಾದಂತಹ ಪರಿಸ್ಥಿತಿ ಬರುತ್ತಿತ್ತು. ಆದರೆ ನಾನು ೫ನೇ ತಾರೀಖು ಮೀಟಿಂಗ್‌ಗೆ ಹೋಗಿದ್ದಾಗ ಕೂಡ ನಾನು ಹೇಳಿದ್ದೇನೆ. ಹಿಂದಿನ ಸರ್ಕಾರ ಯಾವ ಒಂದು ಸ್ಟ್ಯಾಂಡ್ ಕಾವೇರಿ ನದಿ ನೀರಿನ ವಿವಾದದಲ್ಲಿ ತೆಗೆದುಕೊಂಡಿದ್ದರೋ ಅದೇ ಸ್ಟ್ಯಾಂಡನ್ನು ನಾವು ಸಹ ತೆಗೆದುಕೊಂಡಿದ್ದೇವೆ. ಆ ಸ್ಟ್ಯಾಂಡ್‌ನಿಂದ ಒಂದು ಹೆಜ್ಜೆ ಸಹ ಮುಂದೆ ಹೋಗಿಲ್ಲ. ಆ ಬಗ್ಗೆ ಚರ್ಚೆಯಾಗುತ್ತದೆ. ಆ ಚರ್ಚೆಯಲ್ಲಿ ನಾನು ಭಾಗವಹಿಸಿ ಬಂದು ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಆಗ ಏನಾದರೂ ಸಮಾ

ಲೋಚನೆ ಮಾಡುವುದಿದ್ದರೆ ಮಾಡೋಣ ಎಂದು ನಾನು ಈಗ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡಲಿಲ್ಲ. ನಾನು ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡದೇ ಹೋಗಿದ್ದು ದೊಡ್ಡ ತಪ್ಪು ಮಾಡಿದಂತೇನೂ ಆಗಲಿಲ್ಲ. ಮತ್ತು ನಮ್ಮ ನಿಲುವಿನಲ್ಲಿ ಯಾವ ತರಹದ ಬದಲಾವಣೆ ಸಹ ಇಲ್ಲ. ಮತ್ತೊಂದು ವಿಷಯವೆಂದರೆ ಹಿಂದೆ ನಾನು ಇದ್ದಂತಹ ಕಾಲದಲ್ಲಿ ಈ ಕಾವೇರಿ ಜಲ ವಿವಾದದ ಬಗ್ಗೆ ಯಾವ ಒಂದು ಸ್ಟ್ಯಾಂಡ್ ತೆಗೆದುಕೊಂಡಿದ್ದೇನೋ ಅದೇ ಸ್ಟ್ಯಾಂಡನ್ನು ಆಮೇಲೆ ಬಂದಂತಹ ಶ್ರೀಮಾನ್ ದೇವರಾಜ ಅರಸ್‌ರವರು ತೆಗೆದುಕೊಂಡಿದ್ದಾರೆ. ಆಮೇಲೆ ಬಂದಂತಹ ಶ್ರೀಮಾನ್ ಗುಂಡೂರಾವ್‌ರವರು ತೆಗೆದುಕೊಂಡಿದ್ದಾರೆ. ಮತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಸಹ ಅದೇ ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆ. ಮತ್ತು ಶ್ರೀಮಾನ್ ಬೊಮ್ಮಾಯಿಯವರು ಸಹ ಅದೇ ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಏನೂ ತಕರಾರು ಇಲ್ಲ. ಹಿಂದಿನಿಂದಲೂ ಸಹ ನಮ್ಮ ನಿಲುವಿನಲ್ಲಿ ಯಾವ ಬದಲಾವಣೆ ಇಲ್ಲದೆ ಮುಂದು ವರಿಸಿಕೊಂಡು ಬಂದಿದ್ದೇವೆ. ಇದರ ಬಗ್ಗೆ ಸಮಾಲೋಚನೆ ಏನು ಇದೆ ಇದರ ಅವಶ್ಯಕತೆ ಏನು ಇದೆ ಎಂದು, ಈ ನಮ್ಮ ನಿಲುವಿನಲ್ಲಿ ಯಾವ ತರಹದ ಬದಲಾವಣೆ ಇಲ್ಲದಿರುವಂತಹ ವಾತಾವರಣ ಇರುವುದರಿಂದ ನಾನು ಮಾನ್ಯ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡಲಿಲ್ಲವೇ ಹೊರತಾಗಿ ವಿರೋಧಪಕ್ಷದ ನಾಯಕರನ್ನು ನಾನು ಕಡೆಗಣಿಸಿ, ಅವರನ್ನು ನಾನು ಗಮನಕ್ಕೆ ತೆಗೆದು ಕೊಳ್ಳಬಾರದು, ನಾನು ಈ ಒಂದು ಪ್ರಶ್ನೆಯನ್ನು ಇತ್ಯರ್ಥ ಮಾಡುವುದಕ್ಕೆ ಹೋಗಬೇಕು ಎನ್ನುವ ಗರ್ವದಿಂದ ಈ ವಿಚಾರವನ್ನು ನಾನು ತೆಗೆದುಕೊಂಡು ಹೋಗಲಿಲ್ಲ. ಅಲ್ಲಿ ನಿರ್ಣಯ ಏನಾಗುತ್ತದೆ ಎಂದು ನೋಡಿಕೊಂಡು ಬಂದಮೇಲೆ ಬೇಕಾದರೆ ಮಾನ್ಯ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡೋಣ ಎಂದು ಹೋದೆ. ನಾನು ಬಂದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಮೇಲಿಂದ ಮೇಲೆ ಸಮಾಲೋಚನೆ ಮಾಡಿದ್ದೇನೆ. ೩-೪ ಸಲ ನಾನು ಅವರ ಜೊತೆ ಸಮಾಲೋಚನೆ ಮಾಡಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇನೆ, ಯಾವ ಯಾವ ಸಂದರ್ಭ ದಲ್ಲಿ ಏನೇನು ಡೆವಲಪ್‌ಮೆಂಟ್ಸ್ ಆಗಿದೆ ಎನ್ನುವ ಬಗ್ಗೆ ಕೂಡ ಸಾಕಷ್ಟು ಹೇಳಿದ್ದೇನೆ. ಇಂದು ಅವರು ಅಬ್ಜೆಕ್ಷನ್ಸ್ ಏನು ಮಾಡಿದ್ದರು ಎಂದು ನಾನು ಡಿಲ್ಲಿಗೆ ಹೋಗುವ ಮುನ್ನ ಎಕ್ಸ್‌ಟೆಂಪರ್ ರೆಕಾರ್ಡ್ ಸಲುವಾಗಿ "time is not ripe for constituting the tribunal or referring the matter to the tribunal'' ಎಂದು ಬರೆದಿದ್ದ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದು ಏನೆಂದರೆ "time is not ripe for the tribunal'' ಎಂದು ನಮಗೆ ಟ್ರಿಬ್ಯುನಲ್ ಅವಶ್ಯಕತೆ ಇಲ್ಲ ವೆಂದು ನಾನು ಹೇಳುತ್ತಿಲ್ಲ. ಆ ರೀತಿ ನಾನು ಹೇಳುವುದಕ್ಕೂ ಹೋಗುವುದಿಲ್ಲ. ನಮಗೆ ಇಂಟರ್ ಸ್ಟೇಟ್ ವಾಟರ್ ರೀಸೋರ್ಸಸ್ ಆಕ್ಟ್‌ನಲ್ಲಿ ಏನು ಇದೆ ಆ ರೀತಿ ನ್ಯಾಯ ಸಿಗುತ್ತದೆ. ಟ್ರಿಬ್ಯುನಲ್ ನವರು ಏನು ಮಾಡುತ್ತಾರೆ ಎನ್ನುವ ಮಾತು ಬೇರೆ. ಬಹುಶಃ ನಮಗೆ ಪ್ರಭಾವ ಇಲ್ಲ, ಲೀಡರ್ ಇಲ್ಲ, ಶಕ್ತಿ ಇಲ್ಲ ಮತ್ತು ನಮ್ಮಲ್ಲಿ ಘನತೆ ಗೌರವ ಹೊಂದಿರುವ ನಾಯಕರು ಇಲ್ಲ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ.

ಒಂದು ವರ್ಷವಲ್ಲ ಎರಡು ವರ್ಷವಲ್ಲ, ೨೦ ವರ್ಷಗಳವರೆಗೂ ಟ್ರಿಬ್ಯುನಲ್ ಆಗಬಾರದೆನ್ನುವ ನಮ್ಮ ನಿಲುವನ್ನು ನಾವು ಮುಂದುವರಿಸಿಕೊಂಡು ಬಂದಿದ್ದೇವೆ. We have been able to stall the tribunal. It is not a small thing. ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮತ್ತು ಟ್ರಿಬ್ಯುನಲ್ ಬಗ್ಗೆ ಹೆದರಿ ಟ್ರಿಬ್ಯುನಲ್ ಬೇಡ ಎನ್ನುವ ರೀತಿಯಲ್ಲಿ ನಾವಿರಲಿಲ್ಲ; ಆದರೆ ಪರಿಸ್ಥಿತಿ ಹಾಗಿತ್ತು. ಇಲ್ಲಿ ಸೆಕ್ಷನ್ ೪ ಏನು ಹೇಳುತ್ತದೆಂದರೆ,

> "When any request under section 3 received from any State Governments in respect of any water dispute and when the Central Government is of the opinion that the water dispute cannot be settled by negotiations the Central Government shall by a notification in the Official Gazette constitute a water dispute tribunal for the adjudication of the water dispute."

ಇಲ್ಲಿ ವರ್ಡ್ "shall' ಎಂದು ಯೂಸ್ ಮಾಡಿದ್ದು ಏಕೆಂದರೆ it is because the time is not ripe ಅಂದರೆ ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ ಅವರು ಟ್ರಿಬ್ಯುನಲ್ ರಚನೆ ಮಾಡಲೇ ಬೇಕು. ಬೇರೆ ಗತ್ಯಂತರವಿಲ್ಲ. ಇಂಥಾ ಒಂದು ಪರಿಸ್ಥಿತಿ ಇದ್ದಾಗ, ಆ ಒಂದು ಪರಿಸ್ಥಿತಿ ಉಂಟಾಗಿಲ್ಲ,

ಟೈಮ್ ಈಸ್ ನಾಟ್ ರೈಪ್ ಅನ್ನಬೇಕೇ ಹೊರತಾಗಿ ಟ್ರಿಬ್ಯುನಲ್ಲಿ ಬೇಡವೆಂದು ಹೇಳಿದರೆ ಅದು ಕಾನೂನಿಗೆ ತದ್ವಿರುದ್ಧವಾಗಿ ನಾವೇ ನಡೆದುಕೊಂಡ ಹಾಗೆ ಆಗುತ್ತದೆ. Negotiations for how long? Is it indifinite? ಇನ್ನು ನಗೋಷಿಯೇಷನ್ ಬಗ್ಗೆ ಹೇಳುವುದಾದರೆ. ಯಾರಾದರು ಕೇಳಬಹುದು. ನೆಗೋಶಿಯೇಷನ್ ಈಸ್ ಹೌ ಲಾಂಗ್ ಎಂದು; ಅದು ಇನ್‌ಡೆಫನೆಟ್ ನೆಗೋಶಿಯೇಷನ್. ಇನ್ನು ೩ ವರ್ಷ ನೆಗೋಶಿಯೇಟ್ ಮಾಡಿದರೆ ಯಾರಾದರೂ ಇನ್ನೆಷ್ಟು ದಿನ ನೆಗೋಶಿಯೇಷನ್ ಎಂದು ಕೇಳುತ್ತಾರೆ. ಅದು ಸ್ವಾಭಾವಿಕ. ಇವತ್ತು ಸುಪ್ರೀಮ್ ಕೋರ್ಟ್‌ನವರೇ ಕೇಳಿದ್ದಾರೆ. ಆ ಮಾತು ಬೇರೆ. ಆದರೆ ಇದನ್ನು ಕಾಮನ್ ಮ್ಯಾನ್ ಕೂಡಾ ಕೇಳಬಹುದು. ಯಾರದ್ದಾದರೂ ಒಂದು ಜಗಳ, ತಕರಾರು ಇದ್ದರೆ, ಮತ್ತು ಏನೂ ಪರಿಹಾರವಾಗಲಿಲ್ಲವೆಂದರೆ ಮಧ್ಯಸ್ಥರು ಇದನ್ನು ಸರಿ ಮಾಡಿಕೊಳ್ಳಿ ಎಂದು ಯಾವ ರೀತಿಯಾಗಿ ಹೇಳುತ್ತಾರೋ ಆ ರೀತಿಯಿಂದ ನಾನು. ಇನ್ನು ಅಂತಹ ಪರಿಸ್ಥಿತಿ ಉದ್ಭವವಾಗಿಲ್ಲವೆಂದು ಹೇಳಿದ್ದೇನೆಯೇ ಹೊರತಾಗಿ ಟ್ರಿಬ್ಯುನಲ್ ಮಾಡಬೇಕೆಂದು ಒಪ್ಪಿದ ಹಾಗೆ ಅಲ್ಲ. ಅಥವಾ ನೆಗೋಶಿಯೇಷನ್ ಮುರಿದುಬಿದ್ದರೆ ಕಾನೂನು ಪ್ರಕಾರ ಟ್ರಿಬ್ಯುನಲ್ ಮಾಡದೇ ಬೇರೆ ಗತ್ಯಂತರವೇ ಇಲ್ಲ. No way out at all. ಆಗಲೇ ಬೇಕಾಗುತ್ತದೆ. ಅದಕ್ಕಾಗಿ ಇಂಥಾ ಪರಿಸ್ಥಿತಿ ಇದ್ದಾಗ ಟ್ರಿಬ್ಯುನಲ್‌ಗೆ ಇನ್ನೂ ಕಾಲಾವಕಾಶ ಬಂದಿಲ್ಲ. ಇನ್ನೂ ಟೈಮ್ ಈಸ್ ನಾಟ್ ರೈಪ್ ಎಂದು ಏನೊಂದು ನಮ್ಮ ನಿಲುವು ಇತ್ತು ಅದು ನನ್ನ ನಿಲುವು ಅಲ್ಲ, ನನ್ನ ಸ್ಟ್ಯಾಂಡ್ ಅಲ್ಲ. ಕಾನೂನು ತಜ್ಞರು ಸಲಹೆ ಮಾಡಿದ ಪ್ರಕಾರ ಈ ಸ್ಟ್ಯಾಂಡ್‌ನ್ನು ತೆಗೆದುಕೊಂಡು ಆವತ್ತಿನ ದಿವಸದ ಭಾಷಣದಲ್ಲಿ ಬರೆಯಲಾಗಿದೆಯೇ ಹೊರತಾಗಿ ಮತ್ತೆ ಯಾವುದೇ ವಿಚಾರ ಇಲ್ಲ. ಇನ್ನೊಂದು ಪ್ರಶ್ನೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇಂಟರ್ ಸ್ಟೇಟ್ ಕೌನ್ಸಿಲ್ ಮುಂದೆ ಈ ಪ್ರಶ್ನೆ ಏಕೆ ಬರಬೇಕು ಎಂದು. ಇಂಟರ್ ಸ್ಟೇಟ್ ಕೌನ್ಸಿಲ್ ಬಗ್ಗೆ ಮಾತನಾಡಿದ್ದೇ ಹೆಚ್ಚು ಆಗಿತ್ತೇ ಹೊರತಾಗಿ ಅದು ಅಸ್ತಿತ್ವಕ್ಕೆ ಬರುವುದು ಸ್ವಲ್ಪ ತಡ ಆಯಿತು. ನಾನು ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಸಭೆಗೆ ಹೋದಾಗ ಪ್ರಧಾನ ಮಂತ್ರಿಗಳು ಇಂಟರ್‌ಸ್ಟೇಟ್ ಕೌನ್ಸಿಲ್ ರಚನೆ ಮಾಡಬೇಕಾಗಿದೆ, ಎಂದು ಹೇಳಿದ್ದರು. ನಾನು ಕೂಡ ಅಲ್ಲಿನ ಒಂದು ಮೀಟಿಂಗ್‌ನಲ್ಲಿ ಇಂಟರ್ ಸ್ಟೇಟ್ ಕೌನ್ಸಿಲ್ ರಚನೆ ಮಾಡುವುದು ಒಳ್ಳೆಯದು, ಅನೇಕ ನಮ್ಮ ಸಮಸ್ಯೆಗಳು ಇರುತ್ತವೆ, ಅದನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇದು ಮ್ಯಾಂಡೇಟರಿ ಬಾಡಿ ಆಗಬಾರದು. ರೆಕಮೆಂಡೇಟರಿ ಬಾಡಿ ಆಗಬೇಕು ಎಂದು: ಅನೇಕ ಮುಖ್ಯ ಮಂತ್ರಿಗಳು ಇದನ್ನೇ ಹೇಳಿದ್ದಾರೆ. ನಾನೂ ಕೂಡ ಇದನ್ನೇ ಹೇಳಿದ್ದೇನೆ. ನಾನು ಹೇಳಿದ ಹಾಗೆ ೨೯ನೇ ತಾರೀಖು ಮೇ ತಿಂಗಳಿನಲ್ಲಿ ಅಂದರೆ ಮೊನ್ನೆ ಮೊನ್ನೆ ಒಂದು ವಾರದ ಕೆಳಗೆ ಇಂಟರ್ ಸ್ಟೇಟ್ ಕೌನ್ಸಿಲ್ ರಚನೆಯಾಗಿದೆಯೆನ್ನುವ ಮಾತನ್ನು ಹೇಳಿದ್ದಾರೆ. ಅದು ಯಾವ ರೀತಿ ಕೆಲಸ ಮಾಡಬೇಕು, ಯಾವ ವಿಚಾರಗಳು ಆದರ ಮುಂದೆ ಬರುತ್ತವೆ ಅನ್ನುವಂತಾದ್ದರ ಕಲ್ಪನೆ ಸಹ ನನಗೆ ಇಲ್ಲ. ಆದರೆ ಇವತ್ತು ನಾನು ಹೇಳುವಂಥಾದ್ದು ಅಂದರೆ ಯಾವ ರೀತಿ ಇಂಟರ್ ರಿವರ್ ವಾಟರ್ ಡಿಸ್ಪ್ಯೂಟ್ ಕೌನ್ಸಿಲ್ ಸ್ಟ್ಯಾಚುಟರಿ ಬಾಡಿ ಆಗುತ್ತದೆಯೋ ಆ ರೀತಿ ಇಂಟರ್ ಸ್ಟೇಟ್ ಕೌನ್ಸಿಲ್ ಸ್ಟ್ಯಾಚುಟರಿ ಬಾಡಿ ಆಗುವಂತಿಲ್ಲ. ಅದು ರೆಕಮೆಂಡೇಟರಿ ಬಾಡಿ ಆಗುತ್ತದೆ. ಒಂದು ನಾವು ಇಂಟರ್ ಸ್ಟೇಟ್ ಕೌನ್ಸಿಲ್‌ಗೆ ಹಾಕಿ ಎಂದು ಹೇಳಬಹುದು. ಪ್ರಧಾನ ಮಂತ್ರಿಗಳೂ ಅದಕ್ಕೆ ಒಪ್ಪಬಹುದು. ಒಂದು ವೇಳೆ ತಮಿಳುನಾಡಿನವರು ಒಪ್ಪದಿದ್ದರೆ ಅವರು ಏನೂ ಮಾಡಲಿಕ್ಕೆ ಆಗುವುದಿಲ್ಲ. ಇದಕ್ಕೆ ತಮಿಳುನಾಡಿನವರು ಒಪ್ಪಲೇ ಬೇಕೆನ್ನುವಂಥ ವಾದವನ್ನು ನಾವು ಹೂಡಿದರೆ ಅದರಲ್ಲಿ ಏನೂ ಅರ್ಥ ಇಲ್ಲ. ಅದಕ್ಕೆ ಇಂಟರ್ ಸ್ಟೇಟ್ ಕೌನ್ಸಿಲ್ ಬಗ್ಗೆ ಈಗ ಪ್ರಶ್ನೆ ಮಾಡುವ ವಿಚಾರ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಎಸ್ ಯಡಿಯೂರಪ್ಪ.— ನೀವು ಹೇಳಿದ್ದು ಸತ್ಯವಾದುದು. ೨೦ ವರ್ಷಗಳಿಂದ ಟ್ರಿಬ್ಯುನಲ್ ಬೇಡವೆಂದು ಮುಂದೂಡಿಕೊಂಡು ಬಂದಿದ್ದೇವೆ. ಆದರೆ ಇವತ್ತು ತಾವು ಮಾತನಾಡುವುದು ನಾಳೆ ದಿವಸ ಪತ್ರಿಕೆಗಳಲ್ಲಿ ಬರುತ್ತಿರುವುದರಿಂದ ಇದುವರೆಗೆ ತಾವು ಹೇಳಿರುವ ಪ್ರಕಾರ ಟ್ರಿಬ್ಯುನಲ್ ನೇಮಕ ಮಾಡಿರುವುದು ಸರಿ ಎಂದು ನೀವು ಒಪ್ಪಿಕೊಂಡ ಹಾಗೆ ಆಗುತ್ತದೆ. ಈ ರೀತಿ ಹೇಳುವುದು ಎಷ್ಟರ ಮಟ್ಟಿಗೆ ಸರಿಯಲ್ಲವೆಂದು ನನಗನ್ನಿಸುತ್ತದೆ. ನೀವು ಹೇಳಿರುವ ರೀತಿ ನೋಡಿದರೆ, ಇಲ್ಲಿ ನಿನ್ನೆಯಿಂದ ಚರ್ಚೆ ಆಗುವಂಥ ಅಗತ್ಯವೇ ಇರಲಿಲ್ಲ. ನೀವು ಹೇಳುತ್ತಿರುವ ಮಾತು ಸತ್ಯ ಇರಬಹುದು. ಆದರೆ ರಾಜ್ಯದ ರೈತರ ಹಿತ ದೃಷ್ಟಿಯಿಂದ ಅದು ಸರಿಯಲ್ಲವೆಂದು ನಾವು ಆರ್ಗ್ಯು ಮಾಡಬೇಕಾಗುತ್ತದೆ.

ಶ್ರೀ ವೀರೇಂದ್ರಪಾಟೀಲ್.— ಕೇಂದ್ರ ಸರ್ಕಾರದವರು ಒಂದು ಕಡೆ ನಮಗೆ ಮೀಟಿಂಗ್‌ಗೆ ಕರೆದರು, ಇನ್ನೊಂದು ಕಡೆ ಈ ವಿವಾದವನ್ನು ನಾವು ಚರ್ಚೆ ಮಾಡಿ ಬಗೆಹರಿಸುವುದಕ್ಕಾಗುವುದಿಲ್ಲ

ಎಂದು ಹೇಳಿದರು. ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ ನಾವು ಒಂದು ವೇಳೆ ಇವೊತ್ತು ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎಂದು ಇಟ್ಟುಕೊಳ್ಳೋಣ. ಟ್ರಿಬ್ಯುನಲ್ ಬಗ್ಗೆ ನಮಗೆ ಅಸಮಾಧಾನ ಕೂಡ ಆಗಿರಬಹುದು. ಮಾನ್ಯ ನಂಜುಂಡ ಸ್ವಾಮಿಯವರು ಕೆಲವು ವಿಚಾರ ಗಳನ್ನು ಈಗಾಗಲೇ ಹೇಳಿದರು. ಅವರ ವಿಚಾರಗಳನ್ನು ಕೂಡ ತಾವುಗಳು ಕೇಳಿದ್ದೀರಿ. ನಾವುಗಳು ಈಗ ಪರಿಸ್ಥಿತಿಯು ಹೇಗೆ ಇದೆ ಎಂಬುದನ್ನು ಮನಗಂಡು ಮುಂದೆ ಏನು ಮಾಡಬೇಕೆಂದು ವಿಚಾರ ಮಾಡಬೇಕಾಗಿದೆ. ಆ ದಿಶೆಯಲ್ಲಿ ನಾವುಗಳು ಹೆಜ್ಜೆಗಳನ್ನಿಡಬೇಕಾಗಿದೆ ಹೊರತಾಗಿ ಇದು ಆದುದು ಸರಿಯಲ್ಲ ಎಂದು ಸುಪ್ರೀಮ್ ಕೋರ್ಟ್‌ನ್ನು ಕಂಡೆಮ್ ಮಾಡುವುದಕ್ಕೆ ಆಗುತ್ತದೆಯೇ? ಅಥವಾ ಸುಪ್ರೀಮ್ ಕೋರ್ಟ್ ಡೈರೆಕ್ಷನ್ ಪ್ರಕಾರ ಕೇಂದ್ರ ಸರಕಾರದವರು ಟ್ರಿಬ್ಯುನಲ್ ರಚನೆ ಮಾಡಿದ ಮೇಲೆ ಈ ಟ್ರಿಬ್ಯುನಲ್ ಬಗ್ಗೆ ನಮಗೆ ಅಸಮಾಧಾನ ಇದೆ ಎಂದು ವ್ಯಕ್ತ ಮಾಡಿದರೆ ಅದರಿಂದ ನಮಗೆ ಏನಾದರೂ ಲಾಭ ಲಭಿಸುತ್ತದೋ ಎಂಬ ಪ್ರಶ್ನೆ ನಮ್ಮೆದುರ ಬರುತ್ತದೆ. ನಮ್ಮ ವಿರೋಧ ಪಕ್ಷದ ನಾಯಕರು ಟ್ರಿಬ್ಯುನಲ್‌ನ್ನು ಬೈಕಾಟ್ ಮಾಡೋಣ ಎಂದು ಹೇಳಿದರು. ಆದರೆ ಅನೇಕ ಅಪರ ಪಕ್ಷದ ಮಾನ್ಯ ಸದಸ್ಯರುಗಳೇ ಇದರಿಂದ ಅಷ್ಟಾಗಿ ಪ್ರಯೋಜನವಾಗಲಾರದ ಎಂದು ಹೇಳಿದರು. ಅಂತೆಯೇ ಮಾನ್ಯ ವಿರೋಧಪಕ್ಷದ ನಾಯಕರು ನಿನ್ನೆ ಮಾತನಾಡುತ್ತಾ, ನಾನು ಆವೇಶದಿಂದ ಮಾತನಾಡಿದ್ದೇನೆ ಒಂದು ವೇಳೆ ಹೀಗೆ ಆಗಬೇಕು ಎಂದು ಹೇಳಿದರೆ ಆ ಬಗ್ಗೆ ನನ್ನ ಅಡ್ಡಿ ಇಲ್ಲ ಎನ್ನುವ ಮೂಲಕ ಸ್ಪಷ್ಟೀಕರಿಸಿ ಹೇಳಿದ್ದಾರೆ. ಇವೊತ್ತು ಬೈಕಾಟ್ ಮಾಡಬೇಕು, ಇದನ್ನು ನಿಷೇಧಿಸಬೇಕು, ನಾವು ಟ್ರಿಬ್ಯುನಲ್‌ಗೆ ಹೋಗುವುದಿಲ್ಲ, ಎನ್ನುವಂತಹ ವಿಚಾರಗಳನ್ನು ಹೇಳಿದರೆ ಸರಿಯಾಗುವುದಿಲ್ಲ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ಇದನ್ನು ಲಘುವಾಗಿ ವಿಚಾರ ಮಾಡಿ ಇದನ್ನು ಬೈಕಾಟ್ ಮಾಡುತ್ತೇವೆ ಎನ್ನುವುದು ಅಷ್ಟು ಸಮಂಜಸವಾಗುವುದಿಲ್ಲ. ಇವೊತ್ತು ನಾನು ಇದರ ಬಗ್ಗೆ ಹೇಳುವುದೇನೆಂದರೆ. ನನಗೆ ಕಾನೂನು ತಜ್ಞರು ಹೇಳಿದ ಪ್ರಕಾರ ನನ್ನ ಜಾಗದಲ್ಲಿ ಯಾರೇ ಇದ್ದರೂ ಈ ಟ್ರಿಬ್ಯುನಲ್‌ನ್ನು ಬೈಕಾಟ್ ಮಾಡುವುದಕ್ಕೆ ಆಗುವುದಿಲ್ಲ. ಈ ರೀತಿಯಾಗಿ ಬೈಕಾಟ್ ಮಾಡಿದರೆ ನಿಮಗೇ ನಷ್ಟವೇ ಹೊರತಾಗಿ ನಿಮ್ಮ ಹಿತರಕ್ಷಣೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಆದಕಾರಣ ಟ್ರಿಬ್ಯುನಲ್ ಬೈಕಾಟ್ ಮಾಡುವಂಥ ವಿಚಾರವನ್ನು ನಿಮ್ಮ ತಲೆಯಿಂದ ತೆಗೆಯಿರಿ ಎಂದು ಕಾನೂನು ತಜ್ಞರು ಅಭಿಪ್ರಾಯ ಪಡುತ್ತಾರೆ. ಇವೊತ್ತು ಈ ಸದನವು ಟ್ರಿಬ್ಯುನಲ್‌ನ್ನು ಬೈಕಾಟ್ ಮಾಡುವುದರಿಂದ ಕರ್ನಾಟಕದ ಹಿತರಕ್ಷಣೆಯಾಗುತ್ತದೆ ಎಂದು ಅಭಿಪ್ರಾಯಕ್ಕೆ ಬಂದರೆ ನಾನೂ ಕೂಡ ನಿಮ್ಮ ಜೊತೆಯಲ್ಲಿ ಇದ್ದೇನೆ ಎಂದು ತಿಳಿದುಕೊಳ್ಳಿ. ಆದರೆ ನಮ್ಮ ಮುಂದಿರುವುದು ಕರ್ನಾಟಕದ ಹಿತರಕ್ಷಣೆಯನ್ನು ನಾವು ಯಾವ ರೀತಿಯಲ್ಲಿ ಮಾಡಬೇಕು ಎಂಬುದಾಗಿದೆ ಇದರ ಬಗ್ಗೆ ನಾನು ಇವೊತ್ತು ಪಾರ್ಲಿಮೆಂಟ್‌ನಲ್ಲಿ ಆಫರ್ ಮಾಡುವುದು ಏನೆಂದರೆ, ಮಾನ್ಯ ಚಂದ್ರೇಗೌಡರು ಮತ್ತು ಅವರ ಜೊತೆಯಲ್ಲಿ ಅವರಿಗೆ ಬೇಕಾಗಿರುವಂಥ ಯಾರೇ ಮಾನ್ಯ ಸದಸ್ಯರನ್ನು ಕರೆದುಕೊಂಡು ಬಾಂಬೆ, ಡೆಲ್ಲಿ, ಕಲ್ಕತ್ತಾ, ಮದ್ರಾಸ್ ಎಲ್ಲಿ ಬೇಕಾದರೂ ಹೋಗಿ ಅಲ್ಲಿಯ ಕಾನೂನು ತಜ್ಞರೊಂದಿಗೆ ಈ ಬಗ್ಗೆ ತಿಳುವಳಿಕೆ ಮಾಡಿಕೊಳ್ಳಲಿ. ಅವರೊಂದಿಗೆ ಸಮಾಲೋಚನೆ ಮಾಡಿಕೊಂಡು ಬರಲಿ. ಸಮಾಲೋಚನೆ ಮಾಡಿಕೊಂಡು ಬಂದ ನಂತರ ಬೈಕಾಟ್ ಮಾಡುವುದರಿಂದ ನಮ್ಮ ತರಕ್ಷಣೆ ಮಾಡಿಕೊಳ್ಳುವುದಕ್ಕೆ ಸಾಧ್ಯ ಎಂದು ನನಗೆ ಮನವರಿಕೆ ಮಾಡಿ ತೋರಿಸಿದರೆ ಅದರ ಬಗ್ಗೆ ನಾನು ವಿಚಾರ ಮಾಡುವುದಕ್ಕೆ ತಯಾರಾಗಿದ್ದೇನೆ. ಆದರೆ ನನಗೆ ನಮ್ಮ ತಜ್ಞರು ಹೇಳಿದ ಪ್ರಕಾರ ನಾವು ಬೈಕಾಟ್ ಮಾಡಿದರೆ ನಮ್ಮ ಕಾಲ ಮೇಲೆ ನಾವೇ ಕಲ್ಲು ಹಾಕಿಕೊಂಡಂತಾಗುತ್ತದೆ. ಆದ್ದರಿಂದ ನಾವು ಏನನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಈ ಮಾತುಗಳನ್ನು ತಜ್ಞರು ಸ್ಪಷ್ಟವಾಗಿ ಹೇಳಿದ್ದಾರೆ. ಆದಕಾಗ್ಗಿ ಮಾನ್ಯ ಚಂದ್ರೇಗೌಡರು ಇದರ ಬಗ್ಗೆ ಇನ್ನು ಮುಂದೆ ಯಾರಾದರೂ ತಜ್ಞರ ಜೊತೆಯಲ್ಲಿ ಸಮಾಲೋಚನೆ ಮಾಡಿ ತಜ್ಞರ ವಿಚಾರಗಳನ್ನು ನನ್ನ ಗಮನಕ್ಕೆ ತಂದರೆ ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಈಗ ನಮ್ಮ ಮುಂದಿರುವ ಗಂಭೀರವಾದ ವಿಚಾರದ ಬಗ್ಗೆ ನಾವು ಹೆಜ್ಜೆ ಇಡಬೇಕು. ಬಹುಶಃ ಅವರು ಡೆಲ್ಲಿಯಲ್ಲಿ ಕುಳಿತು ಯಾವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಾರೆ ಏನು ಮಾಡುತ್ತಾರೆ ಎನ್ನುವುದನ್ನು ನಾವು ಇಲ್ಲಿ ಈ ಸದನದಲ್ಲಿ ಚರ್ಚೆ ಮಾಡಬೇಕಾಗಿಲ್ಲ. ಮತ್ತು ಟ್ರಿಬ್ಯುನಲ್‌ಗೆ ನಾವು ಯಾವ್ಯಾವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂಬ ಬಗ್ಗೆಯೂ ಚರ್ಚೆ ಮಾಡಿ ಇಲ್ಲಿ ನಿರ್ಣಯವನ್ನು ಮಾಡಬೇಕಾಗಿಲ್ಲ, ಮತ್ತು ಇದೆಲ್ಲಾ ಜನಸಾಮಾನ್ಯರಿಗೆ ಗೊತ್ತಾಗ ಬೇಕಾಗಿಲ್ಲ. ಕರ್ನಾಟಕ ರಾಜ್ಯದ ಜನತೆಗೆ ಏನು ಗೊತ್ತಾಗಬೇಕು ಅಂದರೆ. ಈ ಒಂದು ಪ್ರಶ್ನೆಯ ಬಗ್ಗೆ ಎಲ್ಲಾ ಪಕ್ಷಗಳವರೂ ಕರ್ನಾಟಕದಲ್ಲಿ ಒಂದಾಗಿದ್ದಾರೆ ಒಂದೇ ಮನಸ್ಸಿನಿಂದ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ, ಇವರಲ್ಲಿ ಯಾವುದೇ ಮನಸ್ತಾಪಗಳು ಇಲ್ಲ, ಎಲ್ಲಾ ಪಕ್ಷಗಳ ನಾಯಕರುಗಳೂ ಕೂಡ ರಾಜ್ಯದ ಹಿತರಕ್ಷಣೆಗಾಗಿ ಟೊಂಕ ಕಟ್ಟಿಕೊಂಡಿದ್ದಾರೆ ಎಂಬ ಒಂದು ಒಂದು ವಾತಾವರಣವಾಗ

ಬೇಕು. ಅದು ನಿರ್ಮಾಣವಾಗಬೇಕಾಗಿದ್ದರೆ, ನಾನು ಸಲಹೆ ಮಾಡಿದೆ. ಅದಕ್ಕಾಗಿ ಒಂದು ಸಮಿತಿಯನ್ನು ಮಾಡೋಣ. ನನಗೆ ಅನ್ನಿಸುತ್ತದೆ ತಾವುಗಳು ಸರಕಾರಕ್ಕೆ ಅಧಿಕಾರವನ್ನು ಕೊಟ್ಟರೆ ಈಗ ನಾನು ಈ ಬಗ್ಗೆ ಯಾವ ಸಮಿತಿಯನ್ನು ರಚನೆ ಮಾಡುತ್ತೇನೆ ಎನ್ನುವಂಥಾದ್ದನ್ನು ಕೂಡ ಘೋಷಣೆ ಮಾಡುವುದಕ್ಕೆ ತಯಾರಾಗಿದ್ದೇನೆ. ಈ ರೀತಿಯಾದ ಒಂದು ಸಮಿತಿಯನ್ನು ಮಾಡಿದರೆ ಅಲ್ಲಿ ಅನೇಕ ಪ್ರಶ್ನೆಗಳ ಬಗ್ಗೆ ವಿಚಾರ ಮಾಡಬಹುದು. ಮಾನ್ಯ ಸಿದ್ಧ್ಯಾರ್ಥರವರು ಈಗ ನಾವು ತ್ವರಿತಗತಿಯಿಂದ ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಹೇಳಿದ್ದಾರೆ. ನೀರಿನ ಉಪಯೋಗವನ್ನು ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಇದನ್ನು ನಾವು ಭಾಷಣ ಮಾಡಿಕೊಳ್ಳಲಾರದೆ ಉಪಯೋಗ ಮಾಡಿಕೊಳ್ಳೋಣ. ಯಾಕೆಂದರೆ ಇಲ್ಲಿ ಏನು ಭಾಷಣ ಮಾಡಿದರೂ ಅದು ರಿಕಾರ್ಡ್‌ಗೆ ಹೋಗುತ್ತದೆ. ಅದು ಟ್ರಿಬ್ಯುನಲ್‌ಗೆ ರೀಕಾರ್ಡ್ ಆಗಿ ಹೋಗುತ್ತದೆ. ಅದಕ್ಕಾಗಿ ನಮ್ಮ ಯೋಜನೆಗಳನ್ನು ಮುಗಿಸಲು ಅನೇಕ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಳ್ಳಬೇಕಾಗಿದೆ. ರಿವ್ಯೂ ಪಿಟಿಷನ್ ಬಗ್ಗೆ ನಾವು ಏನು ಮಾಡಬೇಕು? ಟರ್ಮ್ಸ್ ಆಫ್ ರೆಫರೆನ್ಸ್ ಯಾವ ರೀತಿಯಾಗಿ ಮಾಡಬೇಕು ಹಾಗೂ ಇನ್ನಾವುದೇ ಪ್ರಯತ್ನಗಳನ್ನು ಯಾವ ರೀತಿಯಿಂದ ಮಾಡಬೇಕು ಎಂಬುದನ್ನು ವಿಚಾರ ಮಾಡಬೇಕಾಗಿದೆ. ಈ ಬಗ್ಗೆ ತಜ್ಞರ ಅಭಿಪ್ರಾಯಗಳನ್ನು ಪಡೆದುಕೊಳ್ಳಬೇಕಾಗಿದೆ. ಈಗಾಗಲೇ ಟೆಕ್ನಿಕಲ್ ಸೆಲ್ ಎಲ್ಲಾ ರೀತಿಯಿಂದಲೂ ಫೈನಲೈಸ್ ಆಗಿದೆ. ಒಂದೆರಡು ದಿವಸಗಳಲ್ಲಿ ಅದನ್ನು ಅನೌನ್ಸ್ ಮಾಡುತ್ತೇವೆ. ಲೀಗಲ್ ಸೆಲ್ಲನ್ನು ಎಲ್ಲಾ ರೀತಿಯಿಂದಲೂ ಫೈನಲೈಸ್ ಮಾಡಿದ್ದೇವೆ, ಅದನ್ನು ಕೂಡ ಅನೌನ್ಸ್ ಮಾಡುತ್ತೇವೆ. ಅಂತೆಯೇ ಅವುಗಳಿಗೆ ಬೇಕಾಗಿರತಕ್ಕಂಥ ಸಾಧನೆಗಳನ್ನು ಹಾಗೆಯೇ ಈಗ ನಡೆಯುತ್ತಿರುವಂಥ ಕೆಲಸ ಕಾರ್ಯಗಳನ್ನು ಚುರುಕಾಗಿ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಅದನ್ನೆಲ್ಲಾ ಅದೇ ಸಮಿತಿಯಲ್ಲಿ ಕುಳಿತು ಚರ್ಚೆ ಮಾಡೋಣ

ಏಕೆಂದರೆ ನಾವೂ ನೀವೂ ಅಲ್ಲಿ ಇರುತ್ತೇವೆ, ನಮ್ಮ ಹಿತರಕ್ಷಣೆ ಹೇಗೆ ಮಾಡಿಕೊಳ್ಳಬೇಕೆಂದು ಒಳಗಡೆ ಕೂತು ಚರ್ಚೆ ಮಾಡಿಕೊಳ್ಳಬೇಕೇ ಹೊರತು ಬರೀ ಪಬ್ಲಿಕ್ ಮೀಟಿಂಗ್‌ನಲ್ಲಿ, ಸದನದಲ್ಲಿ, ಪತ್ರಿಕೆಯಲ್ಲಿ ಬರಲಿ ಎಂದು ಚರ್ಚೆ ಮಾಡಿದರೆ ನಿಜವಾಗಿಯೂ ನಮ್ಮ ರೈತರ ಹಿತ ರಕ್ಷಣೆ ಮಾಡಿದಂತಾಗುವುದಿಲ್ಲ. ಇದರಿಂದ ಬರೀ ಪಬ್ಲಿಸಿಟಿ ಸಿಕ್ಕಬಹುದು ಅಷ್ಟೇ. ಜನಹಿತ ಸಾಧನೆ ಮಾಡುವುದಕ್ಕೆ ಇದರಿಂದ ಸಾಧ್ಯವಿಲ್ಲವೆಂದು ಹೇಳುತ್ತೇನೆ. ನೀವೆಲ್ಲರೂ ಒಪ್ಪಿದರೆ ನಾನು ಮಾಡಬೇಕೆಂದಿರುವ ಕಮಿಟಿಯನ್ನು ಅನೌನ್ಸ್ ಮಾಡುತ್ತೇನೆ. ಇದರಲ್ಲಿ ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲವೆಂದು ಪ್ರಾಮಾಣಿಕತೆಯಿಂದ ಹೇಳುತ್ತೇನೆ. ಹೆಜ್ಜೆ ಹೆಜ್ಜೆಗೂ ಟ್ರಿಬ್ಯೂನಲ್ ಮುಂದೆ ಯಾವ ರೀತಿ ನಡೆದುಕೊಳ್ಳಬೇಕೆಂದು ಆ ಕಮಿಟಿಯಲ್ಲಿ ವಿಚಾರ ಮಾಡಿ ಅನಂತರ ನಿರ್ಣಯ ಮಾಡಿ ಅದರಂತೆ ಕೆಲಸಕಾರ್ಯಗಳನ್ನು ಮಾಡೋಣ. ಮತ್ತೆ ಮತ್ತೆ ಇದನ್ನು ಸದನದ ಮುಂದೆ ತಂದು ವಿಚಾರ ಮಾಡಬೇಕೆನ್ನುವುದು, ಈಗ ನಾವೊಂದು ಹೇಳುವುದು, ನೀವೊಂದು ಹೇಳುವುದು ಬರೀ ದೋಷಾರೋಪಣೆ ಮಾಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಅದಕ್ಕಾಗಿ ತಾವು ಒಪ್ಪಿದರೆ ಆ ಒಂದು ಕಮಿಟಿಯನ್ನು ಅನೌನ್ಸ್ ಮಾಡುತ್ತೇನೆ. ಇನ್ನು ಮುಂದೆ ಕಾವೇರಿ ನದಿಗೆ ಸಂಬಂಧಿಸಿದಂತೆ ಎಲ್ಲ ಪ್ರಶ್ನೆಗಳನ್ನು ಆ ಕಮಿಟಿಯಲ್ಲೇ ಚರ್ಚೆಮಾಡಿ ಅದರ ನಿರ್ಣಯದ ಪ್ರಕಾರ ಸರ್ಕಾರ ಮುಂದೆ ಹೆಜ್ಜೆ ಇಡುತ್ತದೆ ಎಂಬ ಭರವಸೆಯನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಟ್ರಿಬ್ಯೂನಲ್ಲನ್ನು ಒಪ್ಪಿಕೊಂಡಹಾಗಾಯಿತು. ತಾವೇ ಈ ರಾಜ್ಯದ ಜನರಿಗೆ ಅನೇಕ ಬಾರಿ ಟ್ರಿಬ್ಯೂನಲ್ ಬೇಡ ಎಂದು ಹೇಳಿಕೊಂಡು ಬಂದಿರಿ. ಇದನ್ನೇ ಈಗ ನಿಮ್ಮ ವಿರುದ್ಧ ಬಳಸಿಕೊಳ್ಳುವುದಕ್ಕೆ ಕೆಲವರು ಕಾದಿದ್ದಾರೆ, ಅವರಿಗೆ ಚೆನ್ನಾಗಿ ಅನುವು ಮಾಡಿಕೊಡುತ್ತಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ಎಲ್ಲರಿಗೂ ಒಪ್ಪಿಸಬಹುದು, ಆದರೆ ವಾಟಾಳ್ ನಾಗರಾಜ್ ಅವರಿಗೆ ಒಪ್ಪಿಸುವುದಕ್ಕಾಗುವುದಿಲ್ಲ. ಅವರು ಅವರ ರಾಜಕೀಯ ಎಲ್ಲ ಹುಟ್ಟಿದ್ದೇ ಚಳುವಳಿಯಲ್ಲಿ. ಆದರೂ ಈ ಕಾವೇರಿ ಪ್ರಶ್ನೆಗೆ ಚಳುವಳಿ ಬೇಡವೆಂದು ಅವರಿಗೆ ಅಪೀಲ್ ಮಾಡಿಕೊಳ್ಳುತ್ತೇನೆ. ಅದರಿಂದ ನಮ್ಮ ರೈತರ ಹಿತರಕ್ಷಣೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇದನ್ನು ಬೇರೆಯವರು ಆಗಲೇ ಬಳಸಿಕೊಳ್ಳುತ್ತಿದ್ದಾರೆ. ನಿಮ್ಮ ಸರ್ಕಾರ ಅನ್ಯಾಯ ಮಾಡಿತು ಎಂದು ಹೇಳುತ್ತಿದ್ದಾರೆ. ಅದನ್ನೇ ಜನಗಳ ಮುಂದೆ ಹೇಳಿ ಇದಲ್ಲಾ ಬೇರೆ ರೂಪಕ್ಕೆ ತಿರುಗುತ್ತದೆ ಎಂದು ಹೇಳುತ್ತಾರೆ. ಇದರಿಂದ ನಾನಂತೂ ಲಾಭ ಪಡೆಯುವುದಿಲ್ಲ. ವೈಯಕ್ತಿಕವಾಗಿ ಈ ಟ್ರಿಬ್ಯೂನಲ್‌ಗೆ ನನ್ನ ವಿರೋಧವಿದೆ. ಇದರ ಪರವಂತೂ ನಾನಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಮುಖ್ಯಮಂತ್ರಿಗಳು ಈ ಚರ್ಚೆಗೆ ಸುದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ. ನಾನು ನಿನ್ನೆ ಈ ಪಂಚಾಯಿತಿಯನ್ನು ಬಹಿಷ್ಕರಿಸಬೇಕೆನ್ನುವ ಸ್ಥಿತಿಗೆ ಹೋಗಬೇಕೆನ್ನುವುದಕ್ಕೆ ಕಾರಣ ನಮ್ಮಲ್ಲಿ ಒಟ್ಟಾರೆ ಅಭಿಪ್ರಾಯದಲ್ಲಿ ಬೇಧವಿದೆ ಎಂದಲ್ಲ. ಕರ್ನಾಟಕದ ಹಿತರಕ್ಷಣೆ ಆಗುವುದಾದರೆ ಆಸ್ಥಿತಿಗೂ ನಾವು ಹೋಗಬೇಕೆಂದುಹೇಳಿದ್ದೆ ಅಷ್ಟೆ. ತಾವು ಬಗ್ಗೆ ಏಕೋ ಸ್ವಲ್ಪ ಶಂಕೆ ವ್ಯಕ್ತ ಮಾಡಿದ್ದೀರಿ, ಈ ವಿಚಾರದಲ್ಲಿ ನಾವು ಒಂದಾಗಿದ್ದೇವೆ. ನಮ್ಮಲ್ಲಿ ಮತಭೇದ ಇಲ್ಲ ಎನ್ನುವ ಅಭಿಪ್ರಾಯ ಹೊರಗಡೆ ಬರಬೇಕೆಂದು ಸಲಹೆ ಮಾಡಿದ್ದೀರಿ. ನಾನು ವಿರೋಧ ಪಕ್ಷದ ನಾಯಕನಾಗಿ ಈ ವಿಚಾರದಲ್ಲಿ ಯಾವ ನಿಲುವನ್ನು ಕರ್ನಾಟಕ ಜನರ ಹಿತರಕ್ಷಣೆಗಾಗಿ ತಾವು ತೆಗೆದುಕೊಳ್ಳುತ್ತೀರಿ, ಅದಕ್ಕೆ ನಾವು ಶಂಕೆ ಇಟ್ಟುಕೊಳ್ಳಬೇಕಾಗಿಲ್ಲ. ನಮ್ಮ ಸಹಕಾರ ಇದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಒಂದು ವೇಳೆ ಏನಾದರೂ ಶಂಕೆ ಉಳಿದಿದೆ ಎಂದರೆ ಅದಕ್ಕಾಗಿ ಒಂದು ಠರಾವು ಮಂಡನೆ ಮಾಡೋಣ ಆಲೋಚನೆ ಮಾಡೋಣ. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಮಾಡೋಣ ಮೊದಲು ನಾವು ತಮ್ಮೆಲ್ಲರ ಅನುಮತಿಯನ್ನು ಬೇಡಿ ಸಾಲಿಡ್ಯಾರಿಟಿ ವ್ಯಕ್ತಪಡಿಸುತ್ತೇವೆ. ನಾನು ಈ ಕೆಳಕಂಡ ಠರಾವನ್ನು ಈ ಸದನದ ಒಪ್ಪಿಗೆಗಾಗಿ ಮಂಡಿಸುತ್ತೇನೆ. ಅದು ಈ ರೀತಿ ಇದೆ.— ''ಕಾವೇರಿ ನೀರಿನ ವಿವಾದದಲ್ಲಿ ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರಕ್ಕೆ ಒಮ್ಮತದ ಸಂಪೂರ್ಣವಾದ ಸಹಕಾರವನ್ನು ನೀಡಲು ಸರ್ವಾನುಮತದಿಂದ ನಿರ್ಣಯಿಸಿದೆ.''

ಉಪಾಧ್ಯಕ್ಷರು.—ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಂಡಿಸಿದ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಪ್ರಸ್ತಾವವು ಏನೆಂದರೆ

> ''ಕಾವೇರಿ ನೀರಿನ ವಿವಾದದಲ್ಲಿ ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಅಗತ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರಕ್ಕೆ ಒಮ್ಮತದ ಸಂಪೂರ್ಣವಾದ ಸಹಕಾರವನ್ನು ನೀಡಲು ಸರ್ವಾನುಮತದಿಂದ ನಿರ್ಣಯಿಸಿದೆ''.

ಪ್ರಸ್ತಾವವು ಸರ್ವಾನುಮತದಿಂದ ಅಂಗೀಕೃತವಾಯಿತು

೫-೦೦ ಪಿ. ಎಂ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷಿಣಿಯವರೇ, ಕಾವೇರಿ ಬೇಸಿನ್ ವಿಚಾರದಲ್ಲಿ ಇವತ್ತು ಒಂದು ಕಮಿಟಿ ಮಾಡಬೇಕೆಂದು ತಾವೆಲ್ಲರೂ ಒಂದು ರೀತಿಯ ಸಲಹೆಯನ್ನು ಮಾಡಿದ್ದೀರಿ, ಅದನ್ನು ಗಮನದಲ್ಲಿಟ್ಟುಕೊಂಡು ಈ ರೀತಿಯಾಗಿ ಕಮಿಟಿಯನ್ನು ರಚನೆ ಮಾಡಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್	...	ಮುಖ್ಯ ಮಂತ್ರಿಗಳು
ಶ್ರೀ ಜಿ. ಪುಟ್ಟಸ್ವಾಮಿಗೌಡ	...	ಲೋಕೋಪಯೋಗಿ ಮಂತ್ರಿಗಳು
ಶ್ರೀ ಎಂ. ರಾಜಶೇಖರ ಮೂರ್ತಿ	...	ಹಣಕಾಸು ಮಂತ್ರಿಗಳು
ಶ್ರೀ ಎಂ. ವೀರಪ್ಪ ಮೊಯಿಲಿ	...	ಕಾನೂನು ಸಚಿವರು
ಶ್ರೀ ಅಜೀಜ್ ಸೇಠ್	...	ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು
ಶ್ರೀ ಟಿ. ಎನ್. ನರಸಿಂಹಮೂರ್ತಿ	...	ಮೀನುಗಾರಿಕೆ ಮತ್ತು ಬಂದರು ಸಚಿವರು
ಶ್ರೀ ಎಂ. ಎಸ್. ಆತ್ಮಾನಂದ	...	ರೇಷ್ಮೆ ರಾಜ್ಯ ಸಚಿವರು
ಶ್ರೀ ಡಿ. ಬಿ. ಚಂದ್ರೇಗೌಡ	...	ವಿರೋಧ ಪಕ್ಷದ ನಾಯಕರು
ಶ್ರೀ ಪಿ.ಜಿ.ಆರ್. ಸಿಂಧ್ಯ	...	ವಿರೋಧ ಪಕ್ಷದ ಉಪನಾಯಕರು
ಶ್ರೀ ವಾಟಾಳ್ ನಾಗರಾಜ್	...	ಶಾಸಕರು
ಶ್ರೀ ಬಿ.ಎಸ್. ಯಡಿಯೂರಪ್ಪ	...	ಶಾಸಕರು
ಪ್ರೊ. ಎಂ. ಡಿ. ನಂಜುಂಡಸ್ವಾಮಿ	...	ಶಾಸಕರು
ಶ್ರೀ ಸಿ. ಬೈರೇಗೌಡ	...	ಶಾಸಕರು
ಶ್ರೀ ಎಲ್.ಆರ್. ಶಿವರಾಮೇಗೌಡ	...	ಶಾಸಕರು
ಶ್ರೀ ಕೆ. ಲಕ್ಕಪ್ಪ	...	ಶಾಸಕರು
ಶ್ರೀ ಟಿ.ಎಂ. ಮಂಜುನಾಥ್	...	ಶಾಸಕರು
ಶ್ರೀ ಕೆ.ಎಂ. ಪುಟ್ಟು	...	ಶಾಸಕರು
ಶ್ರೀ ಕೆ.ಹೆಚ್. ಹನುಮೇಗೌಡ	...	ಶಾಸಕರು
ಶ್ರೀಮತಿ ಚಂದ್ರಪ್ರಭಾ ಅರಸ್	...	ಶಾಸಕರು
ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್	...	ಮುಖ್ಯ ಸಚೇತಕರು

ವಿಧಾನ ಪರಿಷತ್ತಿನಿಂದ

ಶ್ರೀ ಎಂ.ಸಿ. ನಾಣಯ್ಯ	...	ವಿರೋಧ ಪಕ್ಷದ ನಾಯಕರು
ಶ್ರೀ ಕೆ.ಎನ್. ನಾಗೇಗೌಡ	...	ಸದಸ್ಯರು
ಶ್ರೀ ಬಿ. ಬಿ. ಶಿವಪ್ಪ	...	ಸದಸ್ಯರು
ಶ್ರೀ ನಾರಾಯಣಸ್ವಾಮಿ ಬಿ.ಹೆಚ್.	...	ಮುಖ್ಯ ಸಚೇತಕರು

ಉಪಾಧ್ಯಕ್ಷಿಣಿಯವರು.—ಈಗ ಸಭೆಯು ಮುಕ್ತಾಯಗೊಂಡು ಮತ್ತೆ ದಿನಾಂಕ ೬-೬-೯೦ರ ರಂದು ಬುಧವಾರ ಬೆಳಿಗ್ಗೆ ೧೧-೦೦ ಗಂಟೆಗೆ ಸೇರುತ್ತದೆ.

ಸದನವು ೬-೩೮ಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ ೬-೬-೧೯೯೦ರಂದು ಬುಧವಾರ ಬೆಳಿಗ್ಗೆ ೧೧-೦೦ ಗಂಟೆಗೆ ಸೇರಲು ನಿಶ್ಚಯಿಸಿತು